ಶ್ರೀ ಪಂಪಾಪತಿ.—ದಾವಣಗೆರೆ ಹೌಸ್ ಸರ್ಜನ್ಸ್ ಬಗ್ಗೆ...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ದಾವಣಗೆರೆಯಲ್ಲಿ ಹೌಸ್ ಸರ್ಜನ್ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಇದು ಒಂದು ಬಹಳ ಪ್ರಮುಖವಾದ ವಿಷಯವಾಗಿರುತ್ತದೆ. ಸರ್ಕಾರದವರು ಗಮನವನ್ನು ಕೊಡಬೇಕು. ಮಾನ್ಯ ಸಚಿವರು ಇದ್ದಾರೆ, ಸ್ಟೇಟ್‌ಮೆಂಟ್ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. 18–8–1983 ರಿಂದಲೇ ಸತ್ಯಾಗ್ರಹ ಪ್ರಾರಂಭವಾಗಿದೆ. ಹಿಂದಿನ ಸರ್ಕಾರ ಏನು ಸೌಲಭ್ಯ ಮಾಡಿತ್ತೋ ಆ ಸೌಲಭ್ಯದಿಂದ ವಂಚಿತರಾಗಿರುತ್ತಾರೆ.

(ಗೊಂದಲ)

ಉಪ ಸಭಾಪತಿಯವರು.—ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಯಡಿಯೂರಪ್ಪನವರೇ ತಮ್ಮ ಆತಂಕವೇನೆಂಬುದು ನನಗೆ ಅರ್ಥವಾಗಿದೆ. ತಾವು ಹೇಳಿದ್ದೀರಿ. ತಾವು ಏತಕ್ಕೆ ಆತುರಪಡುತ್ತಿದ್ದೀರಿ ? ನಾನು ನಿಂತಿದ್ದೇನೆ ; ತಾವು ದಯವಿಟ್ಟು ಕುಳಿತುಕೊಳ್ಳಿ. ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿಮ್ಮ ಸ್ನೇಹಿತರೂ ಇದ್ದರು. ಅಲ್ಲಿ ಏನು ತೀರ್ಮಾನವಾಗಿದೆ ಎಂದರೆ 334ನೇ ಪ್ರಶ್ನೆಯನ್ನು ಎತ್ತಬಾರದು, ನೇರವಾಗಿ ಚರ್ಚೆಗೆ ಹೋಗಬೇಕೆಂದು. ನಿಯಮ ನೀವೇ ಮಾಡಿರತಕ್ಕಂಥದ್ದು. ನಿಮ್ಮ ಪ್ರಶ್ನೆಯೂ ಇದೆ, ನಾಳೆ ತೆಗೆದುಕೊಳ್ಳೋಣ.

ಶ್ರೀ ಪಂಪಾಪತಿ.—ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳಬೇಕೆಂದು ಹೇಳಲಿಲ್ಲ. ಮಾನ್ಯ ಸಚಿವರು ಇದ್ದಾರೆ, ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರೆ ಸಾಕಾಗುತ್ತಿತ್ತು.

ಉಪ ಸಭಾಪತಿಯವರು.—ನಾಳೆ ಅವಕಾಶ ಮಾಡಿಕೊಡುತ್ತೇವೆ, ಕುಳಿತುಕೊಳ್ಳಿ. 24 ಗಂಟೆಯಲ್ಲಿ ಏನು ಅನಾಹುತವಾಗುತ್ತದೆ. ಏನೂ ಅನಾಹುತವಾಗುವುದಿಲ್ಲ. ಹಠ ಮಾಡಬೇಡಿ. ಉತ್ತರ ತರಿಸಿ ಕೊಡುತ್ತೇನೆ. ಇಷ್ಟು ಹಠ ಮಾಡಿದರೆ ಒಳ್ಳೆಯದೆಂದು ನಾನು ತಿಳಿದುಕೊಳ್ಳಲೇ ?

ಶ್ರೀ ಧನಂಜಯ ಕುಮಾರ್.—ಮಾನ್ಯ ಸಚಿವರು ಇರುತ್ತಾರೆ. ನಾಳೆಯ ದಿವಸ ಉತ್ತರ ಕೊಡುವುದಾಗಿ ಭರವಸೆಯನ್ನು ಕೊಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಶಿಫಾರಸ್ ಮೇಲೆ...

ಶ್ರೀ ಸಿ. ಬೈರೇಗೌಡ.—ಸ್ವಾಮಿ, ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ.

ಉಪಾಧ್ಯಕ್ಷರು.—ಅದು ಬರುತ್ತದೆ, ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ನೆನ್ನೆ ಒಂದು ವಿಚಾರ ಪ್ರಸ್ತಾಪ ಮಾಡಿದಾಗ. ಇವೊತ್ತು ತೆಗೆದುಕೊಳ್ಳೋಣ ಎಂದು ಅಧ್ಯಕ್ಷರು ಹೇಳಿದ್ದರು.

ಉಪಾಧ್ಯಕ್ಷರು.—ಬಿಸ್‌ನೆಸ್–ಅಡ್ವೈಜರಿ ಕಮಿಟಿಯಲ್ಲಿ ಏನು ತೀರ್ಮಾನವಾಗಿದೆ ಎಂಬುದು ತಮಗೂ ಸಹ ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿ ತೀರ್ಮಾನವಾಗಿರುವುದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ. ನಿಯಮ 334 ಈ ಶಾಸನಸಭೆಯ ಜೀವಾಳ. ಇದರ ಮೇಲೆ ನಾವು ಇಲ್ಲಿ ಪ್ರಮುಖವಾದ ವಿಚಾರಗಳನ್ನು ಪ್ರಸ್ತಾಪ ಮಾಡಬಹುದಾಗಿದೆ. ಈಗ ನಾನು ಬಿ.ಡಿ.ಎ.ಗೆ ಸಂಬಂಧಪಟ್ಟಂತೆ...

ಉಪಾಧ್ಯಕ್ಷರು.—ತಮಗೆ ನಾನು ನಾಳೆ ಅದನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಆಗಬಹುದು.

III. FINANCIAL BUSINESS

SRI. B. RACHAIAH (Minister for Education) :—Sir, On the recommendation of the Governor, I beg to move :

DEMAND NO. 9
STATIONERY AND PRINTING

"That a sum not exceeding Rs. 9,30,67,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1984 in respect of 'Stationery and Printing'."

DEMAND NO. 10
HIGHER EDUCATION

"That a sum not exceeding Rs. 45,15,60,000 on Revenue Account and Rs. 53,00,000 on Capital Account inclusive of the sum granted 'on account' be granted to the Government to defray the charges

which will come in course of payment during the financial year ending 31st day of March 1984 in respect of 'Higher Education'."

DEMAND NO. 13

PRIMARY AND SECONDARY EDUCATION

"That a sum not exceeding Rs. 210, 52,70,000 on Revenue Account and Rs. 4,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1984 in respect of 'Primary and Secondary Education'."

DEMAND NO. 11

YOUTH SERVICES

"That a sum not exceeding Rs. 4,67,40,000 on Revenue Account and Rs. 6,00,000 on Capital Account, inclusive of the sum granted 'on account' be granted to the Government to defray the charges which will come in course of payment during the financial year ending 31st day of March 1984 in respect of 'Youth Services'."

DEMAND NO. 12

LITERARY, CULTURAL AFFAIRS AND DEVELOPMENT OF KANNADA.

"That a sum not exceeding Rs. 22,22,95,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1984 in respect of 'Literary, Cultural Affairs and Development of Kannada'."

* ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಗುರುಮಿಠ್‌ಕಲ್).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಮಾನ್ಯ ಶಿಕ್ಷಣ ಸಚಿವರು ಮಂಡಿಸಿದಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಶಿಕ್ಷಣ ಖಾತೆ ಬಹಳ ಮಹತ್ವವಾದಂಥ ಖಾತೆ. ಅದರಲ್ಲಿಯೂ ಕೂಡ ಮನುಷ್ಯನಿಗೆ ಶಿಕ್ಷಣ ಬಹಳ ಅವಶ್ಯಕವಾಗಿ ಬೇಕು. ಶಿಕ್ಷಣವಿಲ್ಲದೆ ಯಾವ ದೇಶವೂ ಕೂಡ ಅಭಿವೃದ್ಧಿಯಾಗುವುದಿಲ್ಲವೆಂಬ ಮಾತನ್ನು ಎಲ್ಲರೂ ಹೇಳುತ್ತಾರೆ ಮತ್ತು ಒಪ್ಪುತ್ತಾರೆ. ಈ ಕಾರಣದಿಂದ ನಮ್ಮ ಭಾರತ ದೇಶದಲ್ಲಿ ಹಾಗೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಮತ್ತು ಹೆಚ್ಚಿನ ಹಣವನ್ನು ನಾವು ಒದಗಿಸಬೇಕಾಗಿದೆ. ಇವತ್ತು ನಾವು ಶಿಕ್ಷಣ ಖಾತೆಯನ್ನು ಬಲಪಡಿಸದೇಹೋದರೆ ಮತ್ತು ಹಳ್ಳಿಗಳಲ್ಲಿರುವ ಮಕ್ಕಳಿಗೆ ಹೆಚ್ಚಿನ ಸೌಲಭ್ಯ ಕೊಡದಿದ್ದರೆ ನಮ್ಮ ದೇಶದ ಅಭಿವೃದ್ಧಿ ಆಗುವುದಿಲ್ಲ ಮತ್ತು ನಮ್ಮ ಮಕ್ಕಳೂ ಸಹ ಮುಂದೆ ಬರಲು ಅವಕಾಶವಾಗುವುದಿಲ್ಲ. ಇವೊತ್ತಿನ ದಿವಸ ಎಲ್ಲರೂ ಶಿಕ್ಷಣ ಪಡೆದು ಒಳ್ಳೆಯ ನಾಗರೀಕರಾಗಿ ಬಾಳಿ ಬದುಕಬೇಕಾದರೆ ನಾವು ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂಬುದು ಬಹಳ ಮಹತ್ವವಾದುದು. ಇವೊತ್ತು ಇರತಕ್ಕಂಥ ನಮ್ಮ ರೊಟಿನ್ ವಿದ್ಯಾಭ್ಯಾಸ ಪದ್ಧತಿ ಏನಿದೆ, ಇದರಿಂದ ನಾವು ಕೇವಲ ವಿದ್ಯಾರ್ಥಿಗಳನ್ನು ಲಿಟರೇಟ್ ಮಾಡಬೇಕೆಂದು ಹೊರಟಿದ್ದೇವೆ. ಆದರೆ ನಾವು ಹೆಚ್ಚಿನ ಗಮನವನ್ನು ಪ್ರೊಫೆಷನಲ್ ಕೋರ್ಸಸ್‌ಗಾಗಲೀ ಅಥವಾ ಬೇರೆ ಬೇರೆ ರೀತಿಯಿಂದ ತಾಂತ್ರಿಕ ಶಿಕ್ಷಣವನ್ನು ಕೊಡಲು ಗಮನ ಕೊಡುತ್ತಿಲ್ಲ. ನಾವು ಇಲ್ಲಿ ಗ್ರಾಮಾಂತರ ಪ್ರದೇಶದ ಮಕ್ಕಳ ಬಗ್ಗೆಯಾಗಲೀ ಸಮಾಜದಲ್ಲಿ ಹಿಂದುಳಿದಿರತಕ್ಕವರ ಮಕ್ಕಳ ಬಗ್ಗೆಯಾಗಲೀ ಪ್ರಸ್ತಾಪ ಮಾಡಲು ಹೋದರೆ ಕಳೆದ 35 ವರ್ಷಗಳಲ್ಲಿ ನೀವೇನು ಮಾಡಿದ್ದೀರಿ ಎಂದು ಕೆಲವರು ಕೇಳುತ್ತಾರೆ. ಕಳೆದ 35 ವರ್ಷಗಳಲ್ಲಿ ಎರಡು ವರ್ಷಗಳನ್ನು ಬಿಟ್ಟರೆ ಇನ್ನುಳಿದ ಸಮಯದಲ್ಲಿ ನೀವೇನು ಮಾಡಿದ್ದೀರಿ ಎಂದು ಇತಿಹಾಸದ ಬಗ್ಗೆ ಕೇಳುತ್ತಾರೆಯೇ ಹೊರತು ಇವರ ಕಾಲದಲ್ಲಿ ಎಷ್ಟರಮಟ್ಟಿಗೆ ಸಹಾಯ ಮಾಡಿದ್ದಾರೆಂಬುದನ್ನು ಹೇಳತಕ್ಕಂಥ ಸಾಮರ್ಥ್ಯ ಇವರಲ್ಲಿ ಇಲ್ಲ. ಬರೀ ದೂರುವುದೇ ಇವರ ಕೆಲಸವಾಗಿದೆ. ಕಳೆದ 35 ವರ್ಷಗಳಿಂದ ಈ ದೇಶವನ್ನು ಕಾಂಗ್ರೆಸ್ ಸರ್ಕಾರಗಳು ಹಾಳು ಮಾಡಿದವು; ಕಾಂಗ್ರೆಸ್‌ನವರು ಎಲ್ಲವನ್ನೂ ಹಾಳು ಮಾಡಿದರು, ಹಾಗೆ ಮಾಡಿದರು, ಹೀಗೆ ಮಾಡಿದರು ಎಂದೆಲ್ಲಾ ಹೇಳುತ್ತಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್ :—ಈಗ ಜನತೆಗೆ ಬಹಳ ಒಳ್ಳೆಯದನ್ನು ಮಾಡಬೇಕೆಂಬ ಉದ್ದೇಶದಿಂದ ಎಜುಕೇಷನ್ ಬಿಲ್ ತಂದಿದ್ದಾರೆ. ಅದಕ್ಕೆ ನೀವೆಲ್ಲರೂ ಬೆಂಬಲ ಕೊಡಿ.

---

* ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿಮ್ಮ ಪಕ್ಷದ ಸರ್ಕಾರ ಬಂದರೆ ಎಲ್ಲವೂ ಸರಿಹೋಗಬಹುದೆಂದು ಕಾಣುತ್ತದೆ. ಈ ಬಿಲ್ ತಂದ ಮೇಲೂ ಸಹ ರಿಲಿಜಿಯಸ್ ಮೈನಾರಿಟೀಸ್‌ನವರಿಗೆ ಮತ್ತು ಲಿಂಗ್ವಿಸ್ಟಿಕ್ ಮೈನಾರಿಟೀಸ್‌ನವರಿಗೆ ರಿಯಾಯಿತಿ ಕೊಡಲೇಬೇಕಾಗುತ್ತದೆ. ಅಂದರೆ ಕನ್ನಡ ಸ್ಕೂಲ್‌ಗಳನ್ನು ನಡೆಸುವವರಿಗಾಗಿ ಈ ಬಿಲ್ ತಂದಿದ್ದಾರೆ. ಇದನ್ನೆಲ್ಲಾ ಆ ಬಿಲ್ ಬಂದಾಗ ಮಾತನಾಡೋಣ. ಇವತ್ತು ನಮ್ಮಲ್ಲಿ ಸುಮಾರು 34 ಸಾವಿರ ಪ್ರೈಮರಿ ಸ್ಕೂಲುಗಳಿವೆ. ಆದರೆ ಈ ಎಲ್ಲ ಸ್ಕೂಲುಗಳಿಗೂ ಸಹ ಸ್ವಂತ ಕಟ್ಟಡಗಳು ಇಲ್ಲ. ಎಲ್ಲ ಸ್ಕೂಲ್‌ಗಳಿಗೂ ಸ್ವಂತ ಕಟ್ಟಡಗಳನ್ನು ಕಟ್ಟಿಸಬೇಕಾದರೆ ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತದೆ. ಇವತ್ತು ಒಂದು ಕಡೆ ಒಂದು ಶಾಲೆಯನ್ನು ಪ್ರಾರಂಭ ಮಾಡಿದರೆ ವರ್ಷದಿಂದ ವರ್ಷಕ್ಕೆ ಅಲ್ಲಿನ ತರಗತಿಗಳು ಹೆಚ್ಚುತ್ತಾ ಹೋಗುತ್ತವೆ. ಇದರ ಜೊತೆಗೆ ಮಾನ್ಯ ಮಂತ್ರಿಗಳೇ ಕೊಟ್ಟ ಅಂಕಿ ಅಂಶಗಳ ಪ್ರಕಾರ ಹೊಸದಾಗಿ 5 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಂತಹ ಯೋಜನೆಯನ್ನು ಹಾಕಿಕೊಂಡಿದ್ದಾರೆ. 5 ಸಾವಿರ ಶಿಕ್ಷಕರು ಎಂದರೆ ಮತ್ತೆ ಹೊಸದಾಗಿ 5 ಸಾವಿರ ಕೋಣೆಗಳು ಬೇಕಾಗುತ್ತದೆ. ಇಷ್ಟೊಂದು ಕ್ಲಾಸ್‌ರೂಮುಗಳನ್ನು ಜಾಸ್ತಿ ಮಾಡಲು ಈ ಸಲದ ಬಡ್ಜೆಟ್‌ನಲ್ಲಿ ಹಣವನ್ನು ಇಟ್ಟಿಲ್ಲ. ನಾವು ಹಿಂದೆ ಒಂದು ಕೊಠಡಿಗೆ 4 ಸಾವಿರ–6 ಸಾವಿರ ಹಣ ಕೊಡಬೇಕೆಂದು ಮಾಡಿದ್ದರೂ ಈ ಸರ್ಕಾರ ಬಂದಮೇಲೆ ಹೆಚ್ಚೇನೂ ಮಾಡಿಲ್ಲ. ಎರಡು ವರ್ಷದ ಹಿಂದೆ ನಾವು ಜನತಾ ಮನೆಗಳಿಗೆ ಎಷ್ಟು ಹಣ ಕೊಟ್ಟಿದ್ದೆವೋ ಈಗಲೂ ಅಷ್ಟೇ ಇದೆ. ಅದೂ ಕೂಡ ಸ್ಕೂಲ್ ಬಿಲ್ಡಿಂಗ್ ಕತೆ ಆಗಿದೆ. ಅನೇಕ ಜನರಿಗೆ ಅನೇಕ ಯೋಜನೆಗಳು ಬೇಕು. ಬೆಂಗಳೂರು ನಗರಕ್ಕೆ ಟಿ.ವಿ. ಬೇಕೆಂದು ಎಲ್ಲಾ ಸಚಿವರು ಪ್ರದರ್ಶನ ಮಾಡಿದರು. ನಾಗರೀಕರಿಗೆ ಇವರ ಅವಶ್ಯಕತೆ ಇರಬಹುದು. ಹಳ್ಳಿಯ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಬೇಕಾದರೆ ಸರಿಯಾದಂತಹ ಶಾಲೆ, ಅದಕ್ಕೊಂದು ಕಟ್ಟಡ, ಅದಕ್ಕೊಬ್ಬರು ಉಪಾಧ್ಯಾಯರು ಮತ್ತು ಶಾಲೆಗೆ ಬೇಕಾದ ಪೀಠೋಪಕರಣ ಇದನ್ನು ಒದಗಿಸದಿದ್ದರೆ ಆ ಮಕ್ಕಳಿಗೆ ಯಾವ ರೀತಿಯಾದ ಶಿಕ್ಷಣ ಸಿಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ನೂರಕ್ಕೆ 70 ಭಾಗ ಇವತ್ತು ಹಳ್ಳಿಯಲ್ಲಿದ್ದಾರೆ. ಅವರ ಮಕ್ಕಳಿಗೆ ಒಳ್ಳೆಯ ವಿದ್ಯೆ ಸಿಕ್ಕಿದರೆ ಅವರು ಸುಸಂಸ್ಕೃತರಾದರೆ ದೇಶದ ಅಭಿವೃದ್ಧಿಯಾಗುತ್ತದೆ. ಪಟ್ಟಣದಲ್ಲಿರತಕ್ಕ ಪ್ರತಿಯೊಂದು ಸ್ಕೂಲಿಗೂ ನೀವು ಏನೇ ಸಹಾಯ ಮಾಡಿದರೂ ದೇಶ ಅಭಿವೃದ್ಧಿಯಾಗುವುದಿಲ್ಲ. ಹಳ್ಳಿಯಲ್ಲಿರತಕ್ಕ 80 ಪರ್ಸೆಂಟ್ ಮಕ್ಕಳು ಏನಿದ್ದಾರೆ ಇವತ್ತು ಪ್ರಾಥಮಿಕ ಶಾಲೆಗಳಲ್ಲಿ 51 ಲಕ್ಷ ಮಕ್ಕಳು ಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇವರಿಗೆ ಎಷ್ಟು ಹಣ ಒದಗಿಸಿದ್ದೀರಿ? ಅವರಿಗೆ ಬೇಕಾದ ಬಿಲ್ಡಿಂಗ್ ಪೀಠೋಪಕರಣ ಫಾರ್ಮಾಲಿಟೀಸ್ ಪ್ರಕಾರ ನಿಮ್ಮ ಬಡ್ಜೆಟ್‌ನಲ್ಲಿ ನೀಡಿದ್ದೀರಾ? ಹೈಸ್ಕೂಲ್‌ಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ? ಪ್ರಾಥಮಿಕ ಶಾಲೆಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ? ನಿಮ್ಮ ಬಡ್ಜೆಟ್ಟನ್ನು ಹೋದ ವರ್ಷಕ್ಕೆ ಹೋಲಿಸಿ ನೋಡಿದರೆ ಏನೇನೂ ಇಲ್ಲ, 'ಸೊನ್ನೆ'. ಈ ಒಂದು ಇಲಾಖೆಯಲ್ಲಿ ಕೆಟ್ಟ ಹೆಸರು ಜಾಸ್ತಿ ಬರುತ್ತದೆ. ಈ ಇಲಾಖೆಯಲ್ಲಿ ವರ್ಗಾವಣೆ ಜಾಸ್ತಿ ಇದೆ. ತಾವು ಅನುಭವಿ ಮಂತ್ರಿಗಳು, ತಾವು ಹಿಂದೆ ರೆವೆನ್ಯೂ ಮಂತ್ರಿಗಳಾಗಿದ್ದಿರಿ. ವ್ಯವಸಾಯ ಮಂತ್ರಿಗಳಾಗಿದ್ದಿರಿ. ತಾವು ಮಾನ್ಯ ಹೆಗಡೆ ಮತ್ತು ಮಾನ್ಯ ವೀರೇಂದ್ರ ಪಾಟೀಲರ ಜೊತೆಯಲ್ಲಿದ್ದವರು. ಈ ವಿದ್ಯಾಇಲಾಖೆ ಬಹಳ ದೊಡ್ಡದು. ಬಡ ಮಕ್ಕಳ ಕಲ್ಯಾಣಕ್ಕೋಸ್ಕರ ಹೊಸ ಯೋಜನೆಗಳನ್ನು ತಂದು ಅವರಿಗೆ ಸಹಾಯ ಮಾಡಬೇಕು. ಅವರ ಅನುಕೂಲತೆಗಾಗಿ ಹೆಚ್ಚು ಹಣವನ್ನು ಒದಗಿಸಿ ಅವರ ಕಲ್ಯಾಣ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಏನಾಗಿದೆ ಅಂದರೆ ತಾವು ಈ ಇಲಾಖೆಯ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ಮೇಲೆ 10 ಸಾವಿರ ಉಪಾಧ್ಯಾಯರುಗಳನ್ನು ವರ್ಗಾವಣೆ ಮಾಡಿರಬಹುದು. ಇದು ಒಂದೇ ಕೆಲಸ ಮಾಡಿರಬೇಕು ನೀವು. ಹೊಸ ಕಟ್ಟಡಗಳನ್ನು ನೀವು ಕಟ್ಟಿಸಿದ್ದೀರಾ? ಶಿಕ್ಷಕರನ್ನು ನೇಮಕ ಮಾಡಿದ್ದೀರಾ? ನೀವು ಈಗಾಗಲೇ ಅಧಿಕಾರಕ್ಕೆ ಬಂದು 8 ತಿಂಗಳುಗಳು ಆಗಿ 9ನೇ ತಿಂಗಳಿಗೆ ಬಂದಿದ್ದೀರಿ. ನಿಮ್ಮಿಂದ ಇನ್ನೇನು ಕೆಲಸಕಾರ್ಯಗಳು ಆಗುತ್ತದೆ?

ಶ್ರೀ ಎಚ್. ಡಿ. ಚೌಡಯ್ಯ.— ಮಾನ್ಯ ಸದಸ್ಯರು ಯಾವ ಅರ್ಥದಲ್ಲಿ ಆ ಮಾತನ್ನು ಹೇಳಿದರು?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಅಧಿಕಾರಕ್ಕೆ ಬಂದು 9 ತಿಂಗಳು ಆಗುತ್ತಾ ಇದ್ದರೂ ಕೂಡ ಒಂದು ಸಮಗ್ರವಾದ ಯೋಜನೆಯನ್ನು ಬಡ ಮಕ್ಕಳಿಗೆ ಹಾಕಿಕೊಳ್ಳದಿದ್ದರೆ ನಾವು ನಿಮ್ಮಿಂದ ಏನನ್ನು ಅಪೇಕ್ಷೆ ಮಾಡಬಹುದು? ಬಡವರಿಗೆ ಎಷ್ಟರಮಟ್ಟಿಗೆ ಸಹಾಯ ಮಾಡುತ್ತೀರಿ ಎಂದು ಭಾವಿಸಬೇಕು? 34 ಸಾವಿರ ಶಾಲೆಗಳಲ್ಲಿ ಎಷ್ಟೋ ಪ್ರಾಥಮಿಕ ಶಾಲೆಗಳಿಗೆ ಕಟ್ಟಡವಿಲ್ಲ, ಶಿಕ್ಷಕರು ಇಲ್ಲ, ಪೀಠೋಪಕರಣಗಳು ಇಲ್ಲ, ಇದರ ಬಗ್ಗೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಈ ವರ್ಷ ನಾಲ್ಕೈದು ಸಾವಿರ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ ಎಂದು ಹೇಳಿದ್ದೀರಿ. ನೀವು ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಂಡಮೇಲೆ ಅವರಿಗೆ ಬೇಕಾದ ಅಡಿಶನಲ್ ರೂಮುಗಳನ್ನು ಕಟ್ಟಿಸಿದ್ದೀರಾ? ಅಡಿಶನಲ್ ಕ್ಲಾಸ್ ರೂಮುಗಳನ್ನು ಕಟ್ಟಿಸಲು ಎಷ್ಟು ಹಣ ಒದಗಿಸಿದ್ದೀರಿ? ಅನೇಕ ಶಾಲೆಗಳಿಗೆ ಕಟ್ಟಡಗಳೇ ಇಲ್ಲ. ಅವುಗಳಿಗೆ ಎಷ್ಟು ಹಣವನ್ನು ಇಟ್ಟಿದ್ದೀರಿ?

*ಶ್ರೀ ಕೆ. ಹೆಚ್. ರಂಗನಾಥ್.—ಇದು ಹೇಗಾಗಿದೆ ಅಂದರೆ ಏನೋ ಸುಮ್ಮನೆ ಯಾರದೋ ಸ್ಕೂಲ್, ಅಲ್ಲೊಬ್ಬರು ಉಪಾಧ್ಯಾಯರು, ಮಕ್ಕಳು ಕಲಿಯಲಿ ಬಿಡಲಿ, ಇದಕ್ಕೆ ಯಾವುದೇ ರೀತಿಯ ಕನ್‌ಸ್ಟ್ರಕ್ಟಿವ್ ಪ್ಲಾನಿಂಗ್ ಇಲ್ಲ; ಪಾಲಿಸಿ ಇಲ್ಲ; ಒಂದು ಸರಿಯಾದ ಅಡ್ಮಿನಿಸ್ಟ್ರೇಷನ್ ಇಲ್ಲ. ಇದಕ್ಕೆಲ್ಲ ಒಂದು ಪಾಲಿಸಿ

ಬೇಕಾಗುತ್ತದೆ. ಸುಮ್ಮನೆ ಯಾವುದೋ ಒಂದು ನೀತಿಯ ಮೇಲೆ ಎಲ್ಲಿಯವರೆಗೆ ನಿಂತುಕೊಂಡು ಹೋಗುತ್ತೀರಿ ?

ಶ್ರೀ ಹನುಮಂತರಾವ್ ದೇಸಾಯಿ.— ಓಹೋ ! !...

ಶ್ರೀ ಕೆ. ಹೆಚ್. ರಂಗನಾಥ್.—ಯಾಕೆ ? ಓಹೋ...ಅಂತೀರಿ ?

ಶ್ರೀ ಹನುಮಂತರಾವ್ ದೇಸಾಯಿ.—ತಾವು ಹಿರಿಯ ಶಾಸಕರಿದ್ದೀರಿ. ನಾನು ನಿಮ್ಮನ್ನು ನೋಡಿ "ಓಹೋ" ಎಂದು ಹೇಳಲಿಲ್ಲ, ನಾನು ಅವರಿಗೆ ಹೇಳಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಸುಮ್ಮನೆ ಕುಳಿತುಕೊಂಡು ಸರಿಯಾಗಿ ಇರುವುದನ್ನು ಕಲಿಯಿರಿ.

ಶ್ರೀ ಹನುಮಂತರಾವ್ ದೇಸಾಯಿ.—ನಾನು ನಿಮಗೆ ಹೇಳಲಿಲ್ಲ; ನಾನು ಅವರಿಗೆ ಹೇಳಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಅವರಿಗೆ ಹೇಳುತ್ತೇನೆ ಅಂದರೆ ಏನು ? ಹಳ್ಳಿಯವರಿಗೆ ಹೇಳಿದ ಹಾಗೆ ಹೇಳಬೇಡಿ, ಅಧ್ಯಕ್ಷರಿಗೆ ಹೇಳುತ್ತೇನೆಂದು ಹೇಳಬೇಕು.

ಶ್ರೀ ನಾರಾಯಣಗೌಡ.—ನಮಗೂ ಬರುತ್ತದೆ ಮಾತನಾಡಲಿಕ್ಕೆ. ತಾವು ಆ ಕಡೆ ತಿರುಗಿಕೊಂಡು ಮಾತನಾಡಿದರೆ ನಾವು ಅದೇರೀತಿ ಮಾತನಾಡುತ್ತೇವೆ.

ಶ್ರೀ ಹನುಮಂತರಾವ್ ದೇಸಾಯಿ.—ತಾವು ಹಿರಿಯ ಸದಸ್ಯರಿದ್ದೀರಿ ಸಭೆಯ ಕಾಲವನ್ನು ಕಳೆಯಬೇಡಿ. ನೀವು ಮೊದಲು ಅದನ್ನು ಕಲಿಯಿರಿ. ನೀವು ನಮಗೆ ಕಲಿಸಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಶಿಕ್ಷಣ ಸಚಿವರಿಗೆ ಅನುಭವವಿದೆ. ಇವತ್ತು ಅನೇಕ ಹಳ್ಳಿಗಳಲ್ಲಿ 1 ನೇ ತರಗತಿಗೆ ಸೇರುವಾಗ 100 ಮಕ್ಕಳು ಇದ್ದರೆ ಅವರು 4 ನೇ ತರಗತಿಗೆ ಬರುವಷ್ಟರೊಳಗೆ 50 ಮಕ್ಕಳು ಆಗಿರುತ್ತವೆ. 7 ನೇ ತರಗತಿಗೆ ಬರುವಷ್ಟರಲ್ಲಿ 30 ಮಕ್ಕಳು ಇರುತ್ತಾರೆ. ಇಷ್ಟು ಸಂಖ್ಯೆಯಲ್ಲಿ ಮಕ್ಕಳು ಡ್ರಾಪ್‌ಔಟ್ಸ್ ಆಗುತ್ತವೆ. ಇದಕ್ಕೆ ಅನೇಕ ಕಾರಣಗಳಿವೆ. ಆರ್ಥಿಕ ಸಮಸ್ಯೆ, ಸಾಮಾಜಿಕ ಸಮಸ್ಯೆಗಳು ಇರುತ್ತವೆ. ಕೊನೆಯಪಕ್ಷ 10 ನೇ ತರಗತಿಯವರೆಗೆ ಎಲ್ಲರೂ ಕಲಿಯುತಕ್ಕ ವ್ಯವಸ್ಥೆಯಾಗಬೇಕು. ಈ ಮಕ್ಕಳನ್ನು 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಬರುವಂತೆ ಮಾಡಬೇಕಾದರೆ ಕಡ್ಡಾಯ ಶಿಕ್ಷಣ ಪದ್ಧತಿ ಇದೆ, ಅದರಲ್ಲಿ ಹೊಸ ಯೋಜನೆಗಳನ್ನು ಅಳವಡಿಸಿಕೊಂಡು ಮಕ್ಕಳು ವಿದ್ಯಾಭ್ಯಾಸ ಮಾಡಲು ಅನುಕೂಲ ಮಾಡಿಕೊಡಲು ಅವಕಾಶವಿದೆ. ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಮನೆಯಲ್ಲಿ ಉಳಿಯುತಕ್ಕಂಥ ಮಕ್ಕಳಿಗೆ ಶಾಲೆಗೆ ಬರುವಂತೆ ಪ್ರಯತ್ನ ಮಾಡಬೇಕು. ಶಾಲೆಯಲ್ಲಿ ಉಪಾಧ್ಯಾಯರು ಸರಿಯಾಗಿ ಮಕ್ಕಳಿಗೆ ಪಾಠಪ್ರವಚನ ನೀಡಬೇಕು. ಉಪಾಧ್ಯಾಯರು ಏನು ಮಾಡುತ್ತಾರೆ ಎಂದರೆ ಶಾಲೆಗೆ ಬೀಗ ಹಾಕಿಕೊಂಡು ರಜೆ ಚೀಟಿಯನ್ನು ಪಂಚಾಯಿತಿಯ ಛೇರ್ಮನ್‌ರವರ ಕಡೆ ಕೊಟ್ಟು ಹೋಗುತ್ತಾರೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಇದನ್ನು ರಾಜಕೀಯವಾಗಿ ಮಾತನಾಡುತ್ತಿಲ್ಲ. ಇವತ್ತು ಅನೇಕ ಉಪಾಧ್ಯಾಯರುಗಳು ಮಾಡತಕ್ಕ ಕೆಲಸ ಇದು. ಇಲಾಖೆಯ ಮುಖ್ಯಸ್ಥರು ಇನ್ಸ್‌ಪೆಕ್ಟರ್ ಅಥವಾ ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಬಂದರೆ, ಇವತ್ತು ರಜ ಎಂದು ಹೇಳಿ ಎಂದು, ಅವರ ಊರಿಗೆ ಅಥವಾ ಇನ್ನೆಲ್ಲಿಗೋ ಹೋಗಿರುತ್ತಾರೆ. ಆಫೀಸರ್‌ಗಳಿಗೆ ಹೀಗೆ ಏನೋ ಒಂದು ಹೇಳಿಕೊಂಡು ಹೋಗುತ್ತಾರೆ. ಈ ರೀತಿ ಉಪಾಧ್ಯಾಯರುಗಳನ್ನು ಮಾಡುವುದರಿಂದ ಹಳ್ಳಿಯ ಮಕ್ಕಳ ಎಜುಕೇಶನ್ ಹಾಳಾಗುತ್ತಿದೆ. ಇನ್ನೊಂದು ಕಡೆ ಶೇಕಡಾ 50 ರಷ್ಟು ಜನ ಬಡತನರೇಖೆಯಿಂದ ಕೆಳಗಡೆ ಇರುತ್ತಾರೆ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ಸಿಗಬೇಕಾದರೆ ಏನು ಮಾಡಬೇಕು ? ತಾವು ಪ್ರಾಥಮಿಕ ಶಾಲೆಗಳಲ್ಲಿ ನಡದ ಮಿಡ್ಡೆ ಮೀಲ್ಸ್ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಈ ವ್ಯವಸ್ಥೆಯನ್ನು ತಾವು ಪ್ರಾಥಮಿಕ ಶಾಲೆಗಳಲ್ಲಿ ಜಾರಿಗೆ ತಂದರೆ ಸುಮಾರು 100 ಕ್ಕೆ 100 ಮಕ್ಕಳು ಸಹ ಶಾಲೆಗಳಲ್ಲಿ ಹಾಜರಿರುತ್ತಾರೆ. ಆದರೆ ತಾವು ಮಿಡ್ಡೆ ಮೀಲ್ಸ್ ವ್ಯವಸ್ಥೆಯನ್ನು ಜಾರಿಗೆ ತರದಿದ್ದರೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸಾಧ್ಯವಿಲ್ಲ,. ಮಿಡ್ಡೆ ಮೀಲ್ಸ್ ವ್ಯವಸ್ಥೆಯನ್ನು ತಾವು ರಾಜ್ಯದ ಎಲ್ಲಾ ಪ್ರದೇಶದಲ್ಲಿ ಕೂಡ ಜಾರಿಗೆ ತರಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ತಾವು ಒಂದೇ ಬಾರಿಗೆ ಎಲ್ಲಾ ಶಾಲೆಗಳಲ್ಲಿ ಜಾರಿಗೆ ತರಬೇಕೆಂದು ನಾನು ಹೇಳುತ್ತಿಲ್ಲ. ಹಂತ ಹಂತವಾಗಿ ಜಾರಿಗೆ ತರಬೇಕೆಂದು ಕೂಡ ನಾನು ಹೇಳುತ್ತಿದ್ದೇನೆ. ಈಗ ಉದಾಹರಣೆಗೆ ತಾವು ಸುಮಾರು 7–8 ಲಕ್ಷ ಶಾಲಾ ಮಕ್ಕಳಿಗೆ ಈ ಮಿಡ್ಡೆ ಮೀಲ್ಸ್‌ನ್ನು ಕೊಡುತ್ತಿರಬಹುದು. ಆದರೆ ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 51 ಲಕ್ಷ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ತಾವು ಈ ಯೋಜನೆಯನ್ನು ಹೈಸ್ಕೂಲ್ ಮಟ್ಟದಲ್ಲಿ ಕೂಡ ಜಾರಿಗೆ ತಂದರೆ ಒಳ್ಳೆಯದು, ಮಾನ್ಯ ಮುಖ್ಯಮಂತ್ರಿಗಳೇ ಹಣಕಾಸಿನ ಮಂತ್ರಿಗಳಾಗಿರುವುದರಿಂದ ತಾವು ಸ್ವಲ್ಪ ಅವರ ಮನವೊಲಿಸಿಕೊಂಡು ಈ ಬಾಬಿಗೆ ಸ್ವಲ್ಪ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ಕೇಳಿಕೊಂಡು ಈ ವ್ಯವಸ್ಥೆಯನ್ನು ಒಳ್ಳೆಯ ರೀತಿಯಲ್ಲಿ ಜಾರಿಗೆ ತರುತ್ತೀರೆಂದು ನಾನು ಆಶಿಸುತ್ತೇನೆ. ತಾವು ಈ ಯೋಜನೆಯನ್ನು ಜಾರಿಗೆ ತರದಿದ್ದರೆ ಖಂಡಿತವಾಗಿಯೂ ತಾವು ಬಡ ಮಕ್ಕಳಿಗೆ ಅನುಕೂಲ ಮಾಡಿಕೊಟ್ಟಂತೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ತಾವು ಏನಾದರೂ ಈ ಯೋಜನೆಯನ್ನು ಜಾರಿಗೆ ತರದಿದ್ದರೆ ಶಾಲೆಗಳಲ್ಲಿ ಕಡಿಮೆಯಾಗುತ್ತಿರುವ ಹಾಜರಾತಿಯನ್ನು ಹೆಚ್ಚು ಮಾಡುವುದಕ್ಕೆ ಖಂಡಿತವಾಗಿಯೂ ಆಗುವುದಿಲ್ಲ. ಇವತ್ತು ಎಷ್ಟು ಜನ ಮಕ್ಕಳು ಶಾಲೆಗೆ ಹೋಗ

ಬೇಕಾಗಿದೆಯೋ ಅಷ್ಟು ಜನ ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಕಾರಣವೇನೆಂದರೆ ಆ ಮಕ್ಕಳು ಶಾಲೆಗೆ ಹೋದರೆ ಆ ಮಕ್ಕಳು ಜೀವನ ಮಾಡುವುದು ಕಷ್ಟವಾಗುತ್ತದೆ. ಮತ್ತು ಆ ಮಕ್ಕಳಿಗೆ ತಿನ್ನುವುದಕ್ಕೆ ಅನ್ನ ಇರುವುದಿಲ್ಲ. ಆ ಮಕ್ಕಳ ತಾಯಂದಿರು ಎಲ್ಲಿಯಾದರೂ ಬೇರೆ ಕಡೆ ಕೂಲಿ ಕೆಲಸಕ್ಕೆ ಹೋಗುವಾಗ ಆ ಮಕ್ಕಳನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾಳೆ. ಆಗ ಆ ಮಗುವಿಗೆ ಸಾಮಾನ್ಯವಾಗಿ ತನ್ನ ತಾಯಿ ಯಾವ ಕೆಲಸ ಮಾಡುತ್ತಾಳೋ ಆ ಕೆಲಸದಲ್ಲಿ ಆಸಕ್ತಿಯುಂಟಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಮಿಡ್ಡೆ ಮೀಲ್ಸ್ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಈ ಯೋಜನೆಗೆ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಣವನ್ನು ಸಹ ಒದಗಿಸಿಕೊಟ್ಟಿದ್ದೆವು. ಮತ್ತೆ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಪ್ರಿಪ್ರೈಮರಿ ಸ್ಕೂಲ್ಸ್ ಸ್ಥಾಪನೆ ಮಾಡಬೇಕೆನ್ನುವ ಯೋಜನೆಯನ್ನೂ ಕೂಡ ಸರ್ಕಾರ ಮಾಡಿತ್ತು. ಇವತ್ತು ಹಳ್ಳಿಗಳಲ್ಲಿರ ತಕ್ಕಂಥ ಮಕ್ಕಳಿಗೆ ಪ್ರೀಪ್ರೈಮರಿ ಸ್ಕೂಲ್‌ಗಳು ಇದ್ದರೆ ಅವರು ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ ಸುಮಾರು 8-9 ವರ್ಷ ವಯಸ್ಸಾದರೂ ಕೂಡ ಆ ಹುಡುಗ ಸಾಲೆಗೆ ಹೋಗುವುದಿಲ್ಲ. ಕಾರಣವೇನೆಂದರೆ ಆ ಹುಡುಗ ಅವರ ತಾಯಿ ಮತ್ತು ತಂದೆಯ ಜೊತೆಯಲ್ಲಿ ಕೆಲಸಕ್ಕೆ ಹೋಗಿ ಆ ಕೆಲಸದಲ್ಲಿಯೇ ಆತನು ನಿರತನಾಗಿರುತ್ತಾನೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೀಪ್ರೈಮರಿ ಶಾಲೆಗಳನ್ನು ತೆರೆಯಬೇಕು ಹಾಗೂ ಮಿಡ್ಡೆ ಮೀಲ್ಸ್ ವ್ಯವಸ್ಥೆ ಮಾಡಬೇಕು. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 100 ಪ್ರೀಪ್ರೈಮರಿ ಶಾಲೆಗಳು ಇವೆ. ಆದರೆ 34 ಸಾವಿರ ಸ್ಕೂಲ್‌ಗಳಲ್ಲಿ ಕನಿಷ್ಠ ಪಕ್ಷ ಒಂದು ಸಾವಿರ ಪ್ರೀಪ್ರೈಮರಿ ಶಾಲೆಗಳಾದರೂ ಇರಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ತಾವು ಗ್ರಾಮಾಂತರ ಪ್ರದೇಶದಲ್ಲಿ ಪ್ರೀಪ್ರೈಮರಿ ಶಾಲೆಗಳನ್ನು ತೆರೆದರೆ ಮಾತ್ರ ತಮ್ಮ ಉದ್ದೇಶ ಸಫಲವಾಗುತ್ತದೆ. ಇಲ್ಲದಿದ್ದರೆ ತಾವು ಹಾಕಿಕೊಂಡಿರತಕ್ಕಂಥ ಉದ್ದೇಶ ಸಫಲವಾಗುವುದಿಲ್ಲ. ತಾವು ಬಡ ಮಕ್ಕಳಿಗೆ ಸಹಾಯ ಮಾಡಿದಂತೆ ಆಗುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ನಾರಾಯಣಗೌಡ.—ಮಾನ್ಯ ಸದಸ್ಯರಿಗೆ ಹಳ್ಳಿಗಳ ಕಡೆ ಈಗ ಹೆಚ್ಚು ಆಸಕ್ತಿ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ಹಳ್ಳಿಗಳ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ನಾನೂ ಕೂಡ ಗ್ರಾಮಾಂತರ ಪ್ರದೇಶದಿಂದ ಬಂದಿದ್ದೇನೆ. ಮತ್ತು ಮಾನ್ಯ ಸದಸ್ಯರು ಕೂಡ ಗ್ರಾಮಾಂತರ ಪ್ರದೇಶದಿಂದ ಬಂದಿದ್ದಾರೆ. ಆದರೆ ನಮ್ಮಿಬ್ಬರ ಕರ್ತವ್ಯ ಮಾತ್ರ ಹಳ್ಳಿಗಳ ಉದ್ಧಾರವಾಗಬೇಕು ಎನ್ನುವುದು. ಇವತ್ತು ಹಳ್ಳಿಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಾಲಾ ಕಟ್ಟಡಗಳು ಇಲ್ಲ.

ಶ್ರೀ ನಾರಾಯಣಗೌಡ.—ಸ್ವಾಮಿ, ಆ ಕಡೆ ಕುಳಿತುಕೊಂಡಾಗ ಹಳ್ಳಿಗಳ ಜ್ಞಾಪಕ ಬಂದಿದೆ. ಇಲ್ಲಿ ಕುಳಿತುಕೊಂಡು ಮಂತ್ರಿಗಳಾಗಿದ್ದಾಗ ಅವರಿಗೆ ಪಾಪ ಹಳ್ಳಿಗಳ ಜ್ಞಾಪಕ ಬರಲಿಲ್ಲವೆಂದು ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ನಾವಿಬ್ಬರೂ ಹಳ್ಳಿಯಿಂದ ಬಂದಿದ್ದೇವೆ...

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈ ಕಡೆಯ ಸದಸ್ಯರಿಗೆ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಮಾನ್ಯ ಸದಸ್ಯರು ಏನೇನು ವಿಷಯ ಹೇಳುತ್ತಾರೋ ಆ ವಿಷಯವನ್ನು ಕೇಳಿ ನಂತರ ತಮ್ಮ ಸರದಿ ಬಂದ ಮೇಲೆ ಉತ್ತರ ಕೊಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ತಾವು ಒಂದೇ ವರ್ಷದಲ್ಲಿ ಎಲ್ಲಾ ಪ್ರೀಪ್ರೈಮರಿ ಶಾಲೆಗಳನ್ನು ಮಾಡಿ ಎಂದು ಕೇಳುತ್ತಿಲ್ಲ. ಯಾವುದೇ ಸರ್ಕಾರ ಬಂದರೂ ಕೂಡ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಒಂದೊಂದು ವರ್ಷದಲ್ಲಿ ಇಂತಿಷ್ಟು ಶಾಲೆಗಳು ಎಂದು ಒಂದು ಪ್ರೋಗ್ರಾಂ ಹಾಕಿಕೊಂಡು ತಾವು ಕೆಲಸ ಮಾಡಬೇಕಾಗುತ್ತದೆ. ಹಂತಹಂತವಾಗಿ ಕೆಲಸ ಮಾಡಿ, ಬೇಡವೆಂದು ನಾನು ಹೇಳುವುದಿಲ್ಲ. ಮತ್ತೆ ಹಳ್ಳಿಗಾಡು ಪ್ರದೇಶಗಳಲ್ಲಿ ಸರಿಯಾದಂಥ ಶಾಲಾ ಕಟ್ಟಡಗಳು ಇಲ್ಲ. ಹಿಂದಿನ ಸರ್ಕಾರವಿದ್ದಾಗ ಎನ್.ಆರ್.ಇ.ಪಿ. ಯೋಜನೆಯಲ್ಲಿ ಮತ್ತು ತಾಲ್ಲೂಕು ಬೋರ್ಡ್‌ಗಳ ಮುಖಾಂತರವಾಗಿ ಶಾಲಾ ಕಟ್ಟಡಗಳನ್ನು ಕಟ್ಟಿಸುತ್ತಿದ್ದೆವು. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಶಾಲೆಗಳನ್ನು ಮಂಜೂರು ಮಾಡಿದ್ದೀರಿ. ಆದರೆ ಶಾಲಾ ಕಟ್ಟಡಗಳನ್ನು ಮಾತ್ರ ಕಟ್ಟಿಸಿಕೊಟ್ಟಿಲ್ಲ. ಕೆಲವೊಂದು ಗ್ರಾಮಗಳಲ್ಲಿ ಶಾಲೆಗಳನ್ನು ಬಾಡಿಗೆ ಕೊಟ್ಟು ನಡೆಸುತ್ತಿದ್ದಾರೆ. ಈ ಒಂದು ಪದ್ಧತಿ ಸುಮಾರು 30-40 ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಆದರೆ ಅಂತಹ ಶಾಲೆಗಳಿಗೆ ಇದುವರೆಗೂ ಶಾಲಾ ಕಟ್ಟಡಗಳು ಇಲ್ಲ. ಮತ್ತೆ ಕೆಲವೊಂದು ಪಾಠ ಶಾಲೆಗಳಲ್ಲಿ ಸರಿಯಾದಂಥ ಉಪಧ್ಯಾಯರು ಇರುವುದಿಲ್ಲ. ಆದರೆ ಇವತ್ತು ಸರ್ಕಾರ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಬೇಕೆಂದು ನಿರ್ಣಯ ತೆಗೆದುಕೊಂಡಿದೆ ಎಂದು ಕೇಳಿದ್ದೇನೆ. ಆದಷ್ಟು ಬೇಗ ಉಪಾಧ್ಯಾಯರನ್ನು ನೇಮಿಸಿಕೊಳ್ಳಿ. ಆದರೆ ಸ್ಪೆಷಲ್ ಎನ್.ಆರ್.ಇ.ಪಿ. ಪ್ರೋಗ್ರಾಂನಲ್ಲಿ ಯಾವುದೇ ರೀತಿಯ ಕೆಲಸಗಳನ್ನು ಬೇಕಾದರೂ ತೆಗೆದುಕೊಳ್ಳಬಹುದೆಂದು ಇದೆ. ಆದ್ದರಿಂದ ತಾವು ಈ ಯೋಜನೆಯಲ್ಲಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಟ್ಟು ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ಇರುವಂಥ ಶಾಲೆಗಳ ಪರಿಸ್ಥಿತಿ ಏನಾಗಿದೆ ಎಂದರೆ ಒಂದೇ

ಸಂಸಾರದಲ್ಲಿ ತಂದೆ, ತಾಯಿ, ಮಕ್ಕಳು ಮತ್ತು ಸೊಸೆ ಎಲ್ಲರೂ ಒಂದೇ ಕಡೆ ವಾಸಮಾಡುವಂತೆ ಆಗಿದೆ. ಮತ್ತೆ ತಾವು ಅನೇಕ ಕಡೆ ರೆಸಿಡೆನ್‌ಷಿಯಲ್ ಹೈಸ್ಕೂಲ್‌ಗಳು ಎಂದು ಮಾಡಿದ್ದೀರಿ. ಅಂತಹ ಹೈಸ್ಕೂಲ್‌ಗಳು ಒಟ್ಟು ರಾಜ್ಯದಲ್ಲಿ ಸುಮಾರು 4 ಇರಬಹುದು. ರಾಣಿ ಕಿತ್ತೂರು ಚನ್ನಮ್ಮ, ಹಾಗೂ ಇತರೆ ಹೈಸ್ಕೂಲ್‌ಗಳನ್ನು ಸ್ಥಾಪನೆ ಮಾಡಿದ್ದೀರಿ. ಆದರೆ ಈ ಶಾಲೆಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ ಅವಕಾಶ ಉಂಟು. ಆದರೆ ಈ ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳಲ್ಲಿ ಯಾರು ಟ್ಯಾಲೆಂಟೆಡ್ ಇರುತ್ತಾರೋ ಅಂಥವರಿಗೆ ತಾವು ಹೆಚ್ಚಿನ ಪ್ರೋತ್ಸಾಹ ಕೊಟ್ಟು ಧನಸಹಾಯ ಮಾಡಬೇಕೆಂದು ನಾನು ಹೇಳುತ್ತೇನೆ. ಮತ್ತೆ ಪ್ರೈವೇಟ್ ಕಟ್ಟಡಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಆ ಶಾಲೆಗಳಿಗೆ ತಾವು ಫಂಡ್ಸ್ ಕೊಟ್ಟಿಲ್ಲ. ಹಿಂದೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ನಡೆಸುತ್ತಿದ್ದ ರೀತಿಯಲ್ಲಿ ತಾವು ಈ ಹೈಸ್ಕೂಲ್‌ಗಳನ್ನು ನಡೆಸುತ್ತಿದ್ದೀರಿ. ಮತ್ತೆ ಈ ಶಾಲೆಗಳಲ್ಲಿ ಸರಿಯಾದಂಥ ಪೀಠೋಪಕರಣಗಳು ಇಲ್ಲ. ಮತ್ತೆ ಸರಿಯಾದಂಥ ಯಂತ್ರೋಪಕರಣಗಳು ಇಲ್ಲ. ಈ ರೀತಿಯಲ್ಲಿ ತಾವು ರೆಸಿಡೆನ್‌ಷಿಯಲ್ ಹೈಸ್ಕೂಲ್‌ಗಳನ್ನು ನಡೆಸುತ್ತಿದ್ದೀರಿ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಶಾಲೆಗಳಿಗೂ ಕೂಡ ಹೆಚ್ಚು ಹಣವನ್ನು ಒದಗಿಸಿಕೊಟ್ಟು ಸರಿಯಾದಂಥ ರೀತಿಯಲ್ಲಿ ಹೈಸ್ಕೂಲ್‌ಗಳನ್ನು ನಡೆಸಬೇಕೆಂದು ಸಲಹೆ ಮಾಡುತ್ತೇನೆ.

ಇದು ಸುಮ್ಮನೆ ಬರೇ ಯೋಜನೆಗಳನ್ನು ಮಾಡಿದರೆ ಪ್ರಯೋಜನವಿಲ್ಲ. ಕಾಗದದ ಮೇಲೆ ಇರುತ್ತದೆ. ಇದಕ್ಕೆ ಮನಸ್ಸು ಇಟ್ಟು ಅಧಿಕಾರಿಗಳನ್ನು ಕರೆಸಿ ತಾವು ಇದಕ್ಕೆ ಹೆಚ್ಚಿನ ಹಣ ಒದಗಿಸದೇ ಹೋದರೆ ಏನೂ ಪ್ರಯೋಜನ ಆಗುವುದಿಲ್ಲ. ಇಲ್ಲದಿದ್ದರೆ ಇದು ಏನಾಗುತ್ತದೆಂದರೆ ಹರಿಜನ ಹಾಸ್ಟೆಲ್ ಆಗುತ್ತದೆ. ಬೇರೆ ಏನೂ ಆಗುವುದಿಲ್ಲ. ಇದಕ್ಕೆ ಒಂದು ಸ್ಪೆಸಿಫಿಕ್ಕಾಗಿ ಟ್ರೈನಿಂಗ್ ಕೊಟ್ಟು ಮಾಡಿದರೆ ಪ್ರಯೋಜನವಾಗುತ್ತದೆ. ಇದಕ್ಕೆ ತಮ್ಮನ್ನು ಕೇಳಿಕೊಳ್ಳುತ್ತೇನೆ. ಮಂತ್ರಿಯವರು ಇದನ್ನು ಒಂದು ಸ್ಪೆಷಲ್ ಪ್ರೋಗ್ರಾಮ್ ಎಂದು ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ ಅನೇಕ ಕಡೆ ಟೀಚರ್ಸ್ ಇಲ್ಲದಿರುವ ಪರಿಸ್ಥಿತಿ ಉಂಟಾಗುತ್ತದೆ. ಉದಾಹರಣೆಗೆ ಗುಲ್ಬರ್ಗ. ಬೀದರ್ ಇತ್ಯಾದಿ ಕಡೆಗಳಲ್ಲಿ ಸ್ಕೂಲುಗಳಿಗೆ ಯಾರಾದರೂ ಇಲ್ಲಿಯವರೆಗೆ ಭೇಟಿ ಕೊಟ್ಟಿದ್ದಾರೆಯೇ ? ಭೇಟಿ ಕೊಟ್ಟು ಅಲ್ಲಿ ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ? ಏನೂ ಇಲ್ಲ. ಇದಕ್ಕೆ ಸುಮ್ಮನೆ ನಾವು ಲಕ್ಷಾಂತರ ರೂಪಾಯಿ ಕೊಡುತ್ತೇವೆಂದು ಹೇಳಿದರೆ ಪ್ರಯೋಜನವಿಲ್ಲ. ಇದಕ್ಕೆ ಯಾವ ಯೋಜನೆಯೂ ಇಲ್ಲ; ಪ್ರೋಗ್ರಾಮ್ ಇಲ್ಲ, ಶಿಕ್ಷಕರೂ ಇಲ್ಲ ಮತ್ತು ಇದನ್ನು ನೋಡಿಕೊಳ್ಳುವವರೂ ಇಲ್ಲ. ಈ ರೀತಿಯಾಗಿ ಒಂದು ಕಡೆ ಹರಿಜನರಿಗೆ ಸಹಾಯ ಮಾಡಿದ್ದೇವೆಂದು ಹೇಳುವುದು; ಇನ್ನೊಂದು ಕಡೆ ಅವರು ಎಲ್ಲಿದ್ದಾರೋ ಅಲ್ಲೇ ಇರಬೇಕೆಂದು ಮಾಡುವುದು. ಇದನ್ನು ತಾವು ಸುಧಾರಿಸಬೇಕು. ಇಲ್ಲದಿದ್ದರೆ ಏನೂ ಉಪಯೋಗ ಆಗುವುದಿಲ್ಲ ಆಮೇಲೆ ಇಲ್ಲಿ 2590 ಹೈಸ್ಕೂಲ್‌ಗಳನ್ನು ಇವೊತ್ತಿನ ದಿವಸ ರಾಜ್ಯದಲ್ಲಿ ಸರ್ಕಾರದವರು ನಡೆಸುತ್ತಿದ್ದಾರೆ: ಆದರೆ ಅನೇಕ ಹೈಸ್ಕೂಲ್‌ಗಳಲ್ಲಿ ಟೀಚರ್ಸ್ ಇಲ್ಲ, ಸೈನ್ಸ್ ಟೀಚರ್ ಇದ್ದರೆ ಕಾಮರ್ಸ್ ಟೀಚರ್ ಇಲ್ಲ; ಕಾಮರ್ಸ್ ಟೀಚರ್ಸ್ ಇದ್ದರೆ ಮ್ಯಾಥ್ಸ್ ಟೀಚರ್ಸ್ ಇಲ್ಲ. ಒಬ್ಬನೇ ಈ ಎಲ್ಲಾ ಹುಡುಗರಿಗೂ ಅಂದರೆ 200–300 ಕುರಿಗಳನ್ನು ಒಬ್ಬ ಹೇಗೆ ಕಾಯುವನೋ ಅದೇ ರೀತಿ ಒಬ್ಬ ಶಿಕ್ಷಕ ಇಷ್ಟೊಂದು ಹುಡುಗರಿಗೆ ಎಲ್ಲಾ ಪಾಠಗಳನ್ನು ಹೇಳಬೇಕಾದ ಪರಿಸ್ಥಿತಿ ಇದೆ. ಒಬ್ಬನೇ ಟೀಚರ್ ಸೈನ್ಸ್. ಮ್ಯಾಥ್ಸ್. ಕಾಮರ್ಸ್ ಎಲ್ಲಾ ಮಾಡಬೇಕಾಗುತ್ತದೆ. ನೋಡುವವರಿಲ್ಲ. ಕೇಳುವವರಿಲ್ಲ. ಆದರೆ ಪ್ರತಿ ಸಲ ತಮ್ಮ ಜಾಯಿಂಟ್ ಡೈರೆಕ್ಟರ್ ಅಥವಾ ಡಿ.ಡಿ.ಪಿ. ಯವರಿದ್ದರೆ ಅವರಿಂದ ಇವೆಲ್ಲವನ್ನೂ ರಿವ್ಯೂ ಮಾಡಿಸಬೇಕಾಗುತ್ತದೆ. ರಿವ್ಯೂ ಮಾಡಿಸಿ ಯಾವ ಸ್ಕೂಲ್‌ನಲ್ಲಿ ಶಿಕ್ಷಕರು ಇಲ್ಲ, ಯಾವ ಸಬ್ಜೆಕ್ಟ್‌ನಲ್ಲಿ ಇಲ್ಲ ಎಂದು ನೋಡಿ; ಟೀಚರ್ಸ್ ಇಲ್ಲದೆಹೋದರೆ ಟೆಂಪರರಿಯಾಗಿ ನೇಮಕ ಮಾಡಿಕೊಳ್ಳುವ ಅಧಿಕಾರ ನಿಮಗೆ ಇದೆ. ಆದರೆ ಯಾರೂ ಇವೊತ್ತಿನ ದಿವಸ ರಿವ್ಯೂ ಮಾಡುತ್ತಿಲ್ಲ. ಇದನ್ನು ಜಿಲ್ಲಾ ಮಟ್ಟದಲ್ಲಿಯಾಗಲೀ ತಾಲ್ಲೂಕು ಮಟ್ಟದಲ್ಲಿಯಾಗಲೀ ಅಧಿಕಾರಿಗಳು ಸರಿಯಾಗಿ ರಿವ್ಯೂ ಮಾಡುತ್ತಿಲ್ಲ.

ಶ್ರೀ ಪಂಪಾಪತಿ.—ಅವರು ಭರ್ತಿ ಮಾಡಿರುವ ಎಲ್ಲಾ ಟೀಚರ್ಸ್‌ಗಳನ್ನು ನೀವು ತೆಗೆದುಹಾಕಿಬಿಟ್ಟಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಭರ್ತಿ ಮಾಡಿದವರನ್ನು ತೆಗೆದುಹಾಕಿಲ್ಲ. ಆದರೆ ಅವರನ್ನು ಖಾಲಿ ಇದ್ದ ಜಾಗಕ್ಕೆ ನೇಮಕ ಮಾಡಬಾರದೆಂದೇನೂ ಇಲ್ಲ; ನಾವು ಮಾಡಿದ್ದೇವೆ. ನೀವು ಮಾಡಿದರೆ ಎಷ್ಟೋ ಒಳ್ಳೆಯ ಹೆಸರು ನಿಮಗೆ ಬರುತ್ತದೆ. ಅದೂ ಇಲ್ಲ.

ಒಬ್ಬ ಮಾನ್ಯ ಸದಸ್ಯರು.—ಹೊಸದಾಗಿ ಮಾಡಬೇಕೆಂದು ಜನ ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:—ಇವತ್ತಿನ ದಿವಸ 7–8 ಲಕ್ಷ ವಿದ್ಯಾರ್ಥಿಗಳು ಹೈಸ್ಕೂಲಿನಲ್ಲಿದ್ದಾರೆ. ಅವರಲ್ಲಿ ಯಾವಾಗಲೂ 30–35 ಪರ್ಸೆಂಟ್‌ಗಿಂತ ಹೆಚ್ಚಿಗೆ ರಿಸಲ್ಟ್ ಬರುವುದಿಲ್ಲ. ಏಕೆಂದರೆ ಇದೇ ಕಾರಣ. ಆದರೆ ಪ್ರೈವೇಟ್ ಸ್ಕೂಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರಿಸಲ್ಟ್ ಬರುತ್ತಿದೆ. ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳೂ ಪಾಸಾಗುತ್ತಿದ್ದಾರೆ. ಏಕೆಂದರೆ ಶಿಕ್ಷಕರದ್ದೇ ಆಗಲಿ ಫರ್ನಿಚರದ್ದೇ ಆಗಲೀ ಯಾವುದೇ ತೊಂದರೆ ಅಲ್ಲಿರುವುದಿಲ್ಲ. ಆದರೆ ಹಳ್ಳಿಯ ಮಕ್ಕಳಿಗೆ ತೊಂದರೆಯಾಗುತ್ತಿದೆ ಎನ್ನುವ ಮಾತನ್ನು ಹೇಳುವಾಗ ನೀವು ಏಕೆ ಮಾಡಿಲ್ಲ ಎನ್ನುವ ಮಾತನ್ನು ಪುನಃ ನಮಗೆ ಕೇಳಿದರೆ ಏನಾಗುತ್ತದೆ. ನೀವು ಈ ಮಾತನ್ನು ಹೇಳುವುದಕ್ಕೆ ಬಂದಿದ್ದರೆ ನೀವು ಅವರ ಕೈಹಿಡಿದು ನಿಮ್ಮ ನಿಮ್ಮ ಹಳ್ಳಿಯ ಮಕ್ಕಳಿಗೆ ಏನೇನು ತೊಂದರೆಯಾಗುತ್ತಿದೆ

ಯೆಂದು ಹೇಳಿ ನಿಮ್ಮ ಕೆಲಸ ಮಾಡಿಸಿದರೆ ನಿಮಗೆ ನಾನು ಶಹಭಾಸ್‌ಗಿರಿಯನ್ನು ಕೊಡುತ್ತೇನೆ. ಅದು ಬಿಟ್ಟು ನೀವು ಏನು ಮಾಡಿದಿರಿ, ನೀವು ಏನು ಮಾಡಿದಿರಿ ಎಂದು ಪದೇ ಪದೇ ಕೇಳುತ್ತಾ ಇರುವುದು ಸರಿಯಲ್ಲ.

ಇನ್ನೊಂದು ವಿಚಾರ, ಕಾಲೇಜುಗಳ ಬಗ್ಗೆ ; ಅನೇಕ ಸರ್ಕಾರಿ ಕಾಲೇಜುಗಳನ್ನು ಇವರು ಸ್ಯಾಂಕ್ಷನ್ ಮಾಡಿದ್ದಾರೆ. ಈಗಲೂ ಮಾಡಿದ್ದಾರೆ. ಹಿಂದೆಯೂ ಮಾಡಿದ್ದಾರೆ. ಆದರೆ ಸ್ಯಾಂಕ್ಷನ್ ಮಾಡಿದ ಕಾಲೇಜುಗಳಿಗೆ ಒಂದಕ್ಕೂ ಕಟ್ಟಡಗಳು ಇಲ್ಲ. ಉದಾಹರಣೆಗೆ :ನಮ್ಮ ಯಾದಗಿರಿ ಕಾಲೇಜಿಗೆ ಅಲ್ಲಿಯ ಜನರು ಒಂದು ಲಕ್ಷದ 50 ಸಾವಿರ ರೂಪಾಯಿಗಳನ್ನು ಕಾಂಟ್ರಿಬ್ಯೂಷನ್ ಡಿಪಾಸಿಟ್ ಮಾಡಿದ್ದರೂ ನೀವು ಮ್ಯಾಚಿಂಗ್ ಗ್ರಾಂಟ್ ಕೊಟ್ಟು ಕಟ್ಟಡ ಕಟ್ಟಿಸಿ ಕೊಟ್ಟಿಲ್ಲ. ಈ ಯಾದಗಿರಿ ಕಾಲೇಜಿಗೆ ಸುಮಾರು 110 ಕಿಲೋಮೀಟರ್ ದೂರದ ಹಳ್ಳಿಗಳಿಂದಲೂ ಬರತಕ್ಕ ಹಿಂದುಳಿದವರ ಮಕ್ಕಳು ಇದ್ದಾರೆ. ಬಡಮಕ್ಕಳೇ ಇಲ್ಲಿ ಓದತಕ್ಕಂಥವರು. ಏಕೆಂದರೆ ಶ್ರೀಮಂತರು ಮಕ್ಕಳನ್ನು ರಾಯಚೂರಿಗೋ ಗುಲ್ಬರ್ಗಕ್ಕೋ ಅಥವಾ ಇನ್ನಿತರ ಪಟ್ಟಣಗಳಿಗೋ ಕಳುಹಿಸಿ ಓದಿಸುತ್ತಾರೆ. ಯಾರು ಕೂಲಿಮಾಡಿ ಜೀವನ ಮಾಡುತ್ತಾರೋ ಅಂತಹವರ ಮಕ್ಕಳೇ ಇಲ್ಲಿ ಓದುತ್ತಿರುವವರು. ಆದರೆ ಅಲ್ಲಿ ಫರ್ನಿಚರ್ ಇಲ್ಲ, ಬಿಲ್ಡಿಂಗ್ ಇಲ್ಲ, ಮತ್ತು ಅವರನ್ನು ಕೇಳುವವರೇ ಇಲ್ಲ. 10–20 ಕಾಗದ ಬರೆದರೂ ಬಡ್ಜೆಟ್‌ನಲ್ಲಿ ಹೋದ ವರ್ಷ ಇದ್ದ ಪ್ರಾವಿಷನ್ ಈ ವರ್ಷ ಬಡ್ಜೆಟ್‌ನಲ್ಲಿ ತೆಗೆದು ಹಾಕಿದ್ದಾರೆ. ಅಂದರೆ ಯಾವ ರೀತಿ ಈ ಗೌರ್ನ್‌ಮೆಂಟ್ ಸಂಸ್ಥೆಯನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಗೌರ್ನಮೆಂಟ್ ಹೈಸ್ಕೂಲ್ ; ಗವರ್ನಮೆಂಟ್ ಕಾಲೇಜುಗಳನ್ನು ಹೆಚ್ಚು ಹೆಚ್ಚು ಮಾಡಬೇಕೆಂಬುದೇ ನಮ್ಮ ವಾದ. ಬಹುಶಃ ಆ ಕಡೆ ಇದ್ದಂಥ ಪ್ರಗತಿಪರವಾಗಿರತಕ್ಕಂಥ ಅನೇಕ ಸದಸ್ಯರ ವಾದವೂ ಇದೇ ಆಗಿರಬಹುದು.

ಉಪಾಧ್ಯಕ್ಷರು.—ಶೇಕಡ 99 ಅದೇ ತರಹ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಯಾವಾಗ ನ್ಯಾಷನಲೈಸ್ ಮಾಡಬೇಕು, ಎಲ್ಲಾ ಸರ್ಕಾರದ್ದೇ ಆಗಬೇಕೆಂದು ಹೇಳುವಾಗ ಸರ್ಕಾರಿ ಹೈಸ್ಕೂಲ್‌ಗಳಲ್ಲಿ, ಸರ್ಕಾರಿ ಪ್ರೈಮರಿ ಸ್ಕೂಲ್‌ಗಳಲ್ಲಿ, ಕಾಲೇಜುಗಳಲ್ಲಿ ಫರ್ನಿಚರ್‌ಗಳಿಲ್ಲ, ಬಿಲ್ಡಿಂಗ್‌ಗಳಿಲ್ಲ ಎಂದರೆ ಯಾವ ರೀತಿ ಅವನ್ನು ಮುಂದೆ ತರುವುದಕ್ಕೆ ಸಾಧ್ಯ? ಈ ಕಾರಣಗಳಿಂದ ನಮ್ಮ ಎಲ್ಲಾ ಹಳ್ಳಿಯ ಮಕ್ಕಳೂ ಫೇಲ್ ಆಗುತ್ತಿದ್ದಾರೆ.

ನಿಮ್ಮ ಮಕ್ಕಳು ಅಂದರೆ ಪಟ್ಟಣಗಳಲ್ಲಿ ಓದತಕ್ಕಂಥವರು ಮೆರಿಟ್‌ನಿಂದ ಮುಂದೆ ಬರುತ್ತಿದ್ದಾರೆ. ಸಿಂಧ್ಯ ಹೇಳುತ್ತಾರೆ ಮೆರಿಟ್ ಎಂದು, ನಮ್ಮ ಮಕ್ಕಳು ಕಾನ್ವೆಂಟ್‌ನಲ್ಲಿ ಓದುತ್ತಾರೆಂದು ನಾನು ಬೇರೆಯವರಿಗೆ ಹೇಳುತ್ತೇನೆ. ಬೊಮ್ಮಾಯಿಯವರು ಹೇಳುತ್ತಾರೆ. ದೇವೇಗೌಡರು ಹೇಳುತ್ತಾರೆ, ಸಿಂಧ್ಯರವರು ಹೇಳುತ್ತಾರೆ ಮೆರಿಟ್ ಎಂದು. ನಿಮ್ಮ ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ 20 ಪರ್ಸೆಂಟ್ ಎಂದು ಸೀಟ್ ಇಟ್ಟಿದ್ದಾರಲ್ಲ ಅದಕ್ಕೆ ಬೇಕಾದ ಮಕ್ಕಳು ಬರುತ್ತಾರೆ. ಹಳ್ಳಿಯ ಮಕ್ಕಳು ಬರುತ್ತಾರೆಯೇ? ಅದಕ್ಕೆ ತಾವು ಹೆಚ್ಚಿನ ಆಸಕ್ತಿ ವಹಿಸಿ ದುಡ್ಡು, ಹೆಚ್ಚಿನ ಬಿಲ್ಡಿಂಗ್‌ಗಳನ್ನು ಕನ್‌ಸ್ಟ್ರಕ್ಟ್ ಮಾಡಿ ಅವರಿಗೆ ಬೇಕಾಗಿರತಕ್ಕಂಥ ಫರ್ನಿಚರ್ ಕೊಡಿ ; ಟೀಚರ್ಸ್ ನೇಮಕ ಮಾಡಿ. ಆಗ ಇದು ಸಾಧ್ಯವೇ ಹೊರತು ಸುಮ್ಮನೆ ನಾವು ನ್ಯಾಷನಲೈಸ್ ಮಾಡುತ್ತೇವೆ: ಗವರ್ನಮೆಂಟ್ ಹೈಸ್ಕೂಲ್ ಜಾಸ್ತಿ ತೆಗೆಯುತ್ತೇವೆ ಎಂದು ಹೇಳಿದರೆ ಪ್ರಯೋಜನವಿಲ್ಲ. ಇವೆಲ್ಲವನ್ನೂ ಮಾಡಿದರೆ ಎಜುಕೇಷನಲ್ಲಿರತಕ್ಕ ವೆಸ್ಟೆಡ್ ಇಂಟರೆಸ್ಟ್ ಸಹ ಕಡಿಮೆಯಾಗುತ್ತದೆ. ಅದರ ಜೊತೆಗೆ ನಾವು ಏನೇನು ಸಹಾಯ ಮಾಡಬೇಕೆಂದು ಸೂಕ್ತವಾದ ಪ್ರಾವಿಷನ್ ಮಾಡದೇಹೋದರೆ ನಮ್ಮ ಉದ್ದೇಶವನ್ನು ಈಡೇರಿಸುವುದಕ್ಕಾಗುವುದಿಲ್ಲ. ಇವೊತ್ತಿನ ದಿವಸ ನಾನು ಒಂದು ಲೆಟರ್ ಕೊಟ್ಟರೆ ಒಂದು ಹೈಸ್ಕೂಲ್ ಕೊಡುವುದು : ಇನ್ನೂ ಒಬ್ಬರು ಕೊಟ್ಟರೆ ಒಂದು ಕಾಲೇಜು ಕೊಡುವುದು ಅದನ್ನು ಹೀಗೆ ಮಾಡುತ್ತಾ ಹೋದರೆ ಅದರ ಜೊತೆಯಲ್ಲಿ ಅವುಗಳಿಗೆ ಬೇಕಾದಂಥ ಕಟ್ಟಡ, ಟೀಚರ್ಸ್, ಫರ್ನಿಚರ್ಸ್ ಅವೆಲ್ಲಕ್ಕೂ ಪ್ರಾವಿಷನ್ ಮಾಡದೇ ಹೋದರೆ ಸುಮ್ಮನೆ ನೀವು ಅವರಿಗೆ ಸಮಾಧಾನ ಮಾಡುವುದಕ್ಕೋಸ್ಕರ ಅದನ್ನು ಕೊಟ್ಟ ಹಾಗ ಆಗುತ್ತದೆಯೇ ಹೊರತು ಬೇರೆ ಏನೂ ಸಾಧನೆ ಆಗುವುದಿಲ್ಲ. ಎಜುಕೇಷನ್ ಸ್ಪ್ರೆಡ್ ಮಾಡಿದಹಾಗೆ ಆಗುತ್ತದೆ. ಆದರೆ ಅಲ್ಲಿರತಕ್ಕಂಥ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ನೀಡಲು ಯಾವ ಅನುಕೂಲವನ್ನು ಮಾಡಿದ ಹಾಗೆ ಆಗುವುದಿಲ್ಲ. ಅವರಿಗೆ ಅನುಕೂಲ ಆಗಬೇಕಾದರೆ ಇವೆಲ್ಲ ಸಹಾಯ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ.

ಇನ್ನೊಂದು ವಿಚಾರ, ಇವತ್ತಿನ ದಿವಸ ಅನೇಕ ಏಯುಡೆಡ್ ಸ್ಕೂಲುಗಳು ಕಾಲೇಜುಗಳಿವೆ. ಈ ಏಯುಡೆಡ್ ಸ್ಕೂಲು ಕಾಲೇಜುಗಳಲ್ಲಿ ಟ್ರಿಪಲ್ ಬೆನಿಫಿಟ್ ಸ್ಕೀಮ್‌ನ್ನು ನಾವು ಜಾರಿಗೆ ತಂದಿದ್ದೇವೆ. ಇದರಲ್ಲಿ ಅನೇಕ ಶಿಕ್ಷಕರಿಗೆ ನಿವೃತ್ತಿ ಆದಮೇಲೆ ಸಿಗುವಂಥ ಧನಸಹಾಯದ ಸ್ಕೀಮ್‌ನ್ನು ನಾವು ಜಾರಿಗೆ ತಂದಿದ್ದೇವೆ. ಆದರಿಂದ ಸ್ವಲ್ಪಮಟ್ಟಿಗೆ ಅವರಿಗೆ ಸಹಾಯವಾಗಿದೆ. ಆದರೆ, ಇವತ್ತು ಏನಾಗಿದೆ ಎಂದರೆ ಒಂದು ಪರ್ಸೆಂಟ್ ಅಥವಾ ಎರಡು ಪರ್ಸೆಂಟ್ ಮ್ಯಾನೇಜ್‌ಮೆಂಟ್‌ನವರು ಕೊಡಬೇಕೆಂದು ಏನಿದೆ, ಅದನ್ನು ಅನೇಕರು ಕೊಡುವುದಿಲ್ಲ. ಅವರಿಗೆ ಕೊಡುವುದಕ್ಕೆ ಆಗುವುದಿಲ್ಲ. ಹಳ್ಳಿಗಳಲ್ಲಿ ಹೈಸ್ಕೂಲುಗಳನ್ನು ನಡೆಸುವವರು ಏನು ಕೊಡುತ್ತಾರೆ ? ಏನೋ ಜನರೆಲ್ಲರೂ ಸೇರಿ ಹೈಸ್ಕೂಲು ಮಾಡಿ ಎಂದರೆ ಅವರು ಮಾಡುತ್ತಾರೆ. ಕಾಲೇಜನ್ನು ಮಾಡಿ ಎಂದರೆ ಮಾಡುತ್ತಾರೆ. ಲೆಕ್ಕದಲ್ಲಿ ಏನೋ ತೋರಿಸಿರುತ್ತಾರೆ. ಆದರೆ ನಿಜವಾಗಿಯೂ ನಿವೃತ್ತಿಯಾಗುವಾಗ ಆ ಒಂದು...

ಶ್ರೀ ಬಿ. ರಾಚಯ್ಯ.—ಈಗಾಗಲೇ ಅದನ್ನು ಜಾರಿಯಲ್ಲಿ ಕೊಟ್ಟಿದ್ದೇವೆ. ಮ್ಯಾನೇಜ್‌ಮೆಂಟಿನವರು ಕೊಡಲಿ, ಕೊಡದೇ ಇರಲಿ ಈ ತ್ರಿವಿಧ ಸೌಲಭ್ಯವನ್ನು ಅವರಿಗೆ ಕೊಡಬೇಕೆಂದು ಆಜ್ಞೆಯಾಗಿದೆ. ತಾವು ಮಿಕ್ಕ ವಿಷಯದಲ್ಲಿ ಮಾತನಾಡಿದರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆದರೆ ಅದು ಬರಲಿಲ್ಲವಲ್ಲ ?

ಡಾಕ್ಟರ್ ಸಂಗಮೇಶ್ವರ ಸರ್ದಾರ್.—ತಾವು ಹಿಂದೆ ಮಂತ್ರಿಯಾಗಿದ್ದಾಗ ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಯಾವ ಸವಲತ್ತುಗಳು ಇದ್ದವು ? ಇವತ್ತು ಒಮ್ಮೆಲೇ ಪ್ರಾರಂಭ ಮಾಡಿದಕೂಡಲೇ ಹರಿಜನರ ಮತ್ತು...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ .—ನಿಮಗೆ ಮಾತ್ರ ಎಲ್ಲಾ ಸೌಲಭ್ಯಗಳೂ ಬೇಕು. ಬೇರೆಯವರಿಗೆ ಸಹಾಯ ಮಾಡಿ ಎಂದರೆ ನೂರೆಂಟು ಕಷ್ಟಗಳು ಬರುತ್ತವೆ. ನಿಮಗೆ ನೂರು ಎಕರೆ ಜಾಗ ಬೇಕು. ಇಂಜಿನೀಯರಿಂಗ್ ಕಾಲೇಜು ಬೇಕು, ಮೆಡಿಕಲ್ ಕಾಲೇಜು ಬೇಕು--ಎಲ್ಲಾ ಬೇಕು. ಬೇರೆಯವರು ಏನಾದರೂ ಕೇಳಿದರೆ ನೂರಾರು ರೂಲ್ಸು ರೆಗ್ಯುಲೇಶನ್‌ಗಳು. ಎಲ್ಲವನ್ನೂ ರಾಷ್ಟ್ರೀಕರಣ ಮಾಡುವುದಕ್ಕೆ ನಾವು ಪರವಾಗಿದ್ದೇವೆ. ಇವತ್ತೇ ಅದನ್ನು ಮಾಡಿ ನೋಡೋಣ. ಎಲ್ಲಿಯವರೆಗೆ ನೀವು ಒಂದು ಪಾಲಿಸಿಯನ್ನು ಅಡಾಪ್ಟ್ ಮಾಡುವುದಿಲ್ಲವೋ, ಅಲ್ಲಿಯವರೆಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಬೇರೆಯವರಿಗೆ ಏಕೆ ಸಹಾಯ ಮಾಡಬಾರದು ? ಯಾವ ನೈತಿಕ ಅರ್ಹತೆ ಇದೆ ನಿಮಗೆ ಅದನ್ನು ವಿರೋಧ ಮಾಡುವುದಕ್ಕೆ ? ಖಾಸಗಿ ಶಿಕ್ಷಣ ಸಂಸ್ಥೆಯವರಿಗೆ ಗ್ರ್ಯಾಂಟ್ ಕೊಡಬಾರದು ಎಂದಿದ್ದರೆ ಯಾರಿಗೂ ಕೊಡಲೇ ಬೇಡಿ. ಹಿಂದಕ್ಕೆ ಹೈಸ್ಕೂಲು ಕಾಲೇಜುಗಳಿಗೆ ಗ್ರ್ಯಾಂಟ್ ಕೊಡಬೇಕೆಂದು ಇತ್ತು. ಕೆಲವು ಜನ ದುರುಪಯೋಗ ಮಾಡಿಕೊಂಡಿರಬಹುದು. ಅಂತಹ ಪ್ರಕರಣಗಳನ್ನು ಪತ್ತೆಹಚ್ಚಿ ಶಿಕ್ಷೆಕೊಡಿ. ಆದರೆ ಯಾರು ಪ್ರಾಮಾಣಿಕವಾಗಿ ನಡೆದುಕೊಂಡು ಬರುತ್ತಿದ್ದಾರೆ ಅವರಿಗೆ ಏಕೆ ಸಹಾಯ ಮಾಡಬಾರದು ? ಏನಾದರೂ ಬಿಲ್ಡಿಂಗ್ ಗ್ರ್ಯಾಂಟ್, ಸ್ಪೆಶಲ್ ಗ್ರ್ಯಾಂಟ್ ಕೊಡುತ್ತಾರೆಯೋ, ಫರ್ನಿಚರ್ಸ್‌ಗೆ ಸಹಾಯ ಕೊಡುತ್ತೀರಾ ? ಹೈಸ್ಕೂಲ್‌ವರೆಗೆ ಪ್ರಾರಂಭದಲ್ಲಿ ಕೊಡುವುದನ್ನು ಬಿಟ್ಟರೆ ಇನ್ನು ಯಾವ ಸಹಾಯವೂ ಇಲ್ಲ. ಈಗ ನನಗೂ ಕೂಡ ಮಾಹಿತಿಗಳು ಬರುತ್ತಿವೆ. ಇವರ ಹೆಸರಿನಲ್ಲಿ ಬೇರೆಯವರು ಬರುತ್ತಾರೆ. ಹಿಂದೆ ಇವರು ಇದ್ದು, ಮುಂದೆ ಅವರು ಇದ್ದು ಅವ್ಯವಹಾರ ನಡೆಸಿದ ಉದಾಹರಣೆಗಳಿವೆ. ಇದನ್ನು ತನಿಖೆ ಮಾಡಿ. ದುರುಪಯೋಗವಾಗಿರುವುದು ಸಾಬೀತಾದರೆ ಅವರ ರಿಜಿಸ್ಟ್ರೇಶನನ್ನು ರದ್ದು ಮಾಡಿ. ತಮ್ಮ ಕೈಯಲ್ಲಿ ಅಧಿಕಾರ ಇದೆ. ಕಾನೂನು ಇದೆ ಅದನ್ನು ಉಪಯೋಗ ಮಾಡಿ. ಆದರೆ ಸಂಪೂರ್ಣವಾಗಿ ಇವರನ್ನು ಮುಗಿಸಬೇಕು, ಅಂತ ಹೊರಟರೆ ಬಹುಶಃ ನೀವು ನ್ಯಾಯವಾಗಿ ವರ್ತಿಸುತ್ತೀರೆಂದು ತಿಳಿಯುವಲ್ಲಿ ಸಂದೇಹಪಡಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಎಲ್ಲೆಲ್ಲಿ ಸರ್ಕಾರಿ ಕಾಲೇಜನ್ನು ಪ್ರಾರಂಭ ಮಾಡಿದ್ದೀರಿ, ಅಲ್ಲಿ ಒಂದು ಹಾಸ್ಟೆಲನ್ನೂ ಕೂಡ ಅದರ ಜೊತೆಯಲ್ಲಿ ಮಾಡಬೇಕಾಗುತ್ತದೆ. ಅಲ್ಲಿರುವಂತಹ ಮಕ್ಕಳಿಗೆ ಅದರಲ್ಲೂ ಆರ್ಥಿಕವಾಗಿ ಹಿಂದುಳಿದ ಹರಿಜನ ಗಿರಿಜನ ಮಕ್ಕಳಿಗೆ ಅನುಕೂಲವಾಗುತ್ತದೆ. ಏಕೆಂದರೆ ಈಗ ಮಾಡುವ ಕಾಲೇಜನ್ನು ಒಂದು ತಾಲ್ಲೂಕು ಮಟ್ಟದಲ್ಲಿ ಮಾಡುತ್ತೀರಿ. ಕಾಲೇಜು ಕಟ್ಟಡದಲ್ಲಿ ಹಾಸ್ಟೆಲ್ ಇಲ್ಲದೇ ಹೋದರೆ ಹಳ್ಳಿಗಳಿಂದ ಹುಡುಗರಿಗೆ ಬರುವುದಕ್ಕೆ ಆಗುವುದಿಲ್ಲ. ಅವರಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಒಂದು ಕಾಲೇಜನ್ನು ಮಂಜೂರು ಮಾಡಿದರೆ, ಅದರ ಜೊತೆಯಲ್ಲೇ ಕಡ್ಡಾಯವಾಗಿ ಹಾಸ್ಟೆಲನ್ನೂ ಕೂಡ ಕೊಡಲೇ ಬೇಕು. ಪರಿಶಿಷ್ಟ ಜಾತಿಯವರಿಗೆ ಹಿಂದುಳಿದ ವರ್ಗಗಳಿಗೆ ಸಂಯುಕ್ತವಾಗಿ ಮಾಡಿ ಕಾಲೇಜು ಹಾಸ್ಟೆಲ್‌ನಲ್ಲಿ ಇನ್ನೂರು ಮಕ್ಕಳಿಗಾದರೂ ಸೌಲಭ್ಯ ಕಲ್ಪಿಸದೇ ಹೋದರೆ ಕಾಲೇಜು ಶಿಕ್ಷಣ ಅವರಿಗೆ ಖಂಡಿತವಾಗಿಯೂ ಮುಟ್ಟುವುದಿಲ್ಲ. ಇದರ ಬಗ್ಗೆ ಗಮನ ಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ ಹಿಂದೆ ನಮ್ಮಲ್ಲಿ ಐ.ಎ.ಎಸ್., ಕೆ.ಎ.ಎಸ್ ಪರೀಕ್ಷೆಗೆ ಕುಳಿತುಕೊಳ್ಳುವವರಿಗೆ ತರಬೇತಿ ಕೇಂದ್ರ ಇತ್ತು. ಅದು ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳ ಸಲುವಾಗಿ ಇತ್ತು. ಇವತ್ತು ಅದನ್ನು ತೆಗೆದುಹಾಕಿದ್ದಾರೆ. ಇದರ ಬಗ್ಗೆ ನಾನೊಂದು ಸಲಹೆ ಕೊಡಬೇಕಾಗಿದೆ. ಅನೇಕ ಪ್ರೊಫೆಶನಲ್ ಕೋರ್ಸುಗಳಾಗಲೀ, ಸೆಂಟ್ರಲ್ ಸರ್ವಿಸ್‌ನಲ್ಲಿಯಾಗಲಿ ಅಥವಾ ಅಡ್ಮಿನಿಸ್ಟ್ರೇಶನ್‌ನಲ್ಲಾಗಲೀ ಬಡಮಕ್ಕಳು ಮುಂದೆ ಬರಬೇಕಾದರೆ ಈ ತರಬೇತಿ ಕೇಂದ್ರವನ್ನು ಸರ್ಕಾರದವರು ನಡೆಸಬೇಕು ಅಥವಾ ಇದಕ್ಕೆ ಯಾವುದಾದರೂ ಆರ್ಗನೈಸೇಶನ್ ಅಂತ ಮಾಡಿ ಈ ತರಬೇತಿ ಕೇಂದ್ರವನ್ನು ಪುನಃ ಮಾಡದೇ ಹೋದರೆ ಈ ಕರ್ನಾಟಕ ರಾಜ್ಯದ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಸೆಂಟ್ರಲ್ ಸರ್ವಿಸ್‌ನಲ್ಲಾಗಲೀ ಐ.ಎ.ಎಸ್. ನಲ್ಲಾಗಲೀ ಬರುವುದಕ್ಕೆ ಸಾಧ್ಯವಿರುವುದಿಲ್ಲ. ಇದಕ್ಕಾಗಿ ಒಂದು ಹಾಸ್ಟೆಲ್ ಕಟ್ಟಡ ಇತ್ಯಾದಿ ವ್ಯವಸ್ಥೆಯನ್ನು ಪ್ರತ್ಯೇಕವಾಗಿ ಮಾಡಿ ಇದನ್ನು ಕೂಡಲೇ ಪ್ರಾರಂಭ ಮಾಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ.

ನಮ್ಮ ಗುಲ್ಬರ್ಗ ವಿಶ್ವವಿದ್ಯಾಲಯ ಈಗ ವೇಗವಾಗಿ ಬರುತ್ತಿದೆ. ಹಿಂದಿನ ಸರ್ಕಾರ ಇದಕ್ಕೆ ವರ್ಷ ವರ್ಷ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಾ ಬಂದರು. ಆದರೆ ಈ ವರ್ಷ ಅದಕ್ಕೆ ಕೊಡತಕ್ಕ ಹಣವನ್ನು ಬಹಳ ಕಡಿಮೆ ಮಾಡಿಬಿಟ್ಟಿದ್ದಾರೆ. ಇದರಿಂದಾಗಿ ಅದರ ಅನೇಕ ಅಭಿವೃದ್ಧಿ ಕೆಲಸ ಕಾರ್ಯಗಳು ನಿಂತುಹೋಗಿವೆ. ಇವತ್ತು ಬಹುಶಃ ಉಪಕುಲಪತಿಗಳು ಕೂಡ ಇಲ್ಲಿ ಬಂದು ಮುಖ್ಯಮಂತ್ರಿಯವರನ್ನು

ನೋಡಿರಬಹುದು. ಈ ವಿಶ್ವವಿದ್ಯಾನಿಲಯಕ್ಕೆ ಹೆಚ್ಚು ಹಣ ಕೊಟ್ಟು ಅದನ್ನು ಬೆಳೆಸದೇ ಹೋದರೆ, ಯು.ಜಿ.ಸಿ ಯವರು ಏನು ಗ್ರಾಂಟ್ ಕೊಡಬೇಕು. ಅದನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಕೂಡ ನಾನು ಹೇಳುತ್ತೇನೆ. ಅವರು ಕೂಡ ಲೆಕ್ಕ ನೋಡುತ್ತಾರೆ. ಈಗ ಎರಡು-ಎರಡೂವರೆ ಕೋಟಿ ರೂಪಾಯಿ ಖರ್ಚಾಗಿದೆ. ಅನೇಕ ಡಿಪಾರ್ಟ್‌ಮೆಂಟ್‌ಗಳು ಹಾಗೆಯೇ ಉಳಿದಿವೆ. ಬಳ್ಳಾರಿಯಲ್ಲಿ ಇರತಕ್ಕಂಥ ನಂದಿಹಳ್ಳಿ ಕೇಂದ್ರ ಅಷ್ಟಕ್ಕೇ ನಿಂತಿದೆ. ಕೆಲವು ಕಟ್ಟಡಗಳು ರೂಫ್ ಹಂತಕ್ಕೆ ಬಂದು ನಿಂತುಬಿಟ್ಟಿವೆ. ಆದ್ದರಿಂದ ತಾವು ಈ ವರ್ಷ ಒಂದೂವರೆ ಕೋಟಿ ರೂಪಾಯಿಯಾದರೂ ಬಿಡುಗಡೆ ಮಾಡಬೇಕು. ಹಾಗಾದರೆ ಮಾತ್ರ ಈ ವಿಶ್ವವಿದ್ಯಾನಿಲಯ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ.

ಇನ್ನೊಂದು ವಿಷಯ. ಈಗ ತಾಂತ್ರಿಕ ಶಿಕ್ಷಣದ ಬಗ್ಗೆ ಹೇಳಬೇಕಾದರೆ ತಾವು ಅನೇಕ ಖಾಸಗಿ ಸಂಸ್ಥೆಗಳಲ್ಲಿ ಈ ಸೌಲಭ್ಯ ಕೊಡುತ್ತಿದ್ದೀರಿ. ಸರ್ಕಾರದ ವತಿಯಿಂದ ಇನ್ನೂ ಹೆಚ್ಚಿನ ಪಾಲಿಟೆಕ್ನಿಕ್‌ಗಳಾಗಲೀ, ಐಟಿಐಗಳನ್ನಾಗಲೀ ತೆಗೆದರೆ ಏನಾಗುತ್ತದೆ ? ಯಾರು ಇವತ್ತು ಮೆಟ್ರಿಕ್ ಪಾಸು ಮಾಡಿದ್ದಾರೆ, ಅಥವಾ ಅನುತ್ತೀರ್ಣರಾಗಿ ಮನೆಯಲ್ಲಿ ಕುಳಿತುಕೊಂಡಿರುತ್ತಾರೆ, ಅಂತಹ ವಿದ್ಯಾರ್ಥಿಗಳು ಈ ತಾಂತ್ರಿಕ ಶಿಕ್ಷಣ ಪಡೆದರೆ ಅನೇಕ ಕಾರ್ಖಾನೆಗಳಲ್ಲಿ ಅವರಿಗೆ ಅವಕಾಶ ಸಿಗಲು ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಈ ಹಿಂದುಳಿದ ಮಕ್ಕಳು ಮೆಟ್ರಿಕ್ ಪಾಸಾದರೂ ಮನೆಯಲ್ಲೇ ಇರುತ್ತಾರೆ, ಫೇಲ್ ಅದರೂ ಮನೆಯಲ್ಲೆ ಉಳಿದುಬಿಡುತ್ತಾರೆ. ಆ ಕಡೆ ಹೊಲದ ಕೆಲಸವನ್ನೂ ಮಾಡುವುದಿಲ್ಲ, ಈ ಕಡೆ ಬೇರೆ ಕೆಲಸಕ್ಕೂ ಹೋಗುವುದಿಲ್ಲ. ಆದಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಪಾಲಿಟೆಕ್ನಿಕ್‌ಗಳನ್ನು ಮತ್ತು ಐಟಿಐಗಳನ್ನು ತೆಗೆಯಬೇಕು. ನಾನು ಹೀಗೆ ಹೇಳುವಾಗ ಸರ್ಕಾರದಲ್ಲಿ ಎಲ್ಲಾ ನಿಮ್ಮ ಮಾತು ಸಂಪೂರ್ಣವಾಗಿ ನಡೆಯುತ್ತದೆ ಎಂದು ಭಾವಿಸುವುದಿಲ್ಲ. ಅನೇಕ ಸಲ ಅಭಿಪ್ರಾಯ ಭೇದಗಳು ಬರುತ್ತವೆ. ಫೋರ್ಸಸ್-ಕೌಂಟರ್ ಫೋರ್ಸಸ್ ಇರುತ್ತವೆ. ಆದರೆ ತಾವು ಈ ನಿರ್ಣಯವನ್ನು ತೆಗೆದುಕೊಂಡರೆ ಏನಾದರೂ ಪ್ರಯತ್ನ ಮಾಡಬಹುದು. ಈ ನಿರ್ಣಯವನ್ನು ತೆಗೆದುಕೊಳ್ಳದೇ ಹೋದರೆ ಯಾವ ಬಡಹುಡುಗರಿಗೂ ಕೂಡ ಯಾವುದೇ ಸಹಾಯ ಮುಟ್ಟಿದ ಹಾಗೆ ಆಗುವುದಿಲ್ಲ. ಹಾಗೆಂತ ತಾವು ಸುಮ್ಮನೆ ಘೋಷಣೆ ಮಾಡಬಹುದು. ಆದರೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ಬಡಮಕ್ಕಳಿಗೆ ತಾವು ಸಹಾಯ ಮಾಡಿದ ಹಾಗೆ ಆಗುವುದಿಲ್ಲ. ಇವತ್ತು ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲೂ ಐಟಿಐ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮೊನ್ನೆ ಕಾರ್ಮಿಕ ಮಂತ್ರಿಗಳು ಹೇಳಿಕೆ ಕೊಟ್ಟರು ಎಂದು ನಾನು ಕೇಳಿದ್ದೇನೆ. ಅದೇ ರೀತಿ ಪಾಲಿಟೆಕ್ನಿಕ್‌ನ್ನೂ ಕೂಡ ಪ್ರತಿಯೊಂದು ಸಬ್ ಡಿವಿಜನ್‌ನಲ್ಲಿ ಮಾಡಿದರೆ ತಪ್ಪೇನೂ ಇಲ್ಲ. ಹೈಸ್ಕೂಲುಗಳನ್ನು ಕೊಡುವುದಕ್ಕಿಂತ ಪಾಲಿಟೆಕ್ನಿಕ್‌ಗಳನ್ನು ಮಾಡಿ. ಐ.ಟಿ.ಐ. ಮತ್ತು ಸ್ಟೆನೋಗ್ರಫಿ--ಇಂತಹ ಕೋರ್ಸ್‌ಗಳನ್ನು ಹೆಚ್ಚು ಹೆಚ್ಚು ಪ್ರಾರಂಭ ಮಾಡಿ. ಇವು ಜಾಬ್ ಓರಿಯಂಟೆಡ್ ಕೋರ್ಸ್‌ಗಳು. ಅದನ್ನು ಬಿಟ್ಟು 200–300 ಹೈಸ್ಕೂಲುಗಳನ್ನು ಹೊಸದಾಗಿ ಪ್ರಾರಂಭ ಮಾಡುವುದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಜಾಬ್ ಓರಿಯಂಟೆಡ್ ಕೋರ್ಸ್‌ಗಳು ಏನಿವೆ ಇದರ ಕಡೆ ಹೆಚ್ಚಿನ ಗಮನ ಕೊಡಬೇಕು. ಇದರ ಜೊತೆಯಲ್ಲೇ ನಾನು ಈಗಾಗಲೇ ಹೇಳಿದ ಹಾಗೆ ಯಾವುದೇ ಮಾಡಿ. ಅದಕ್ಕೆ ಹಾಸ್ಟೆಲ್ ಕೂಡ ಅಟ್ಯಾಚ್ ಆಗಿರಬೇಕು. ಇದು ನನ್ನ ಬೇಡಿಕೆ. ಏಕೆಂದರೆ ಇದನ್ನು ಮಾಡದಿದ್ದರೆ ಅವರಿಗೆ ಯಾವುದೇ ಸಹಾಯವನ್ನು ಮಾಡುವುದಕ್ಕಾಗುವುದಿಲ್ಲ. ತಾವು ಇದರ ಕಡೆ ಹೆಚ್ಚು ಗಮನ ಕೊಡುತ್ತೀರೆಂದು ನಾನು ಭಾವಿಸುತ್ತೇನೆ.

ಇನ್ನು ವಯಸ್ಕರ ಶಿಕ್ಷಣ. ಈ ವಯಸ್ಕರ ಶಿಕ್ಷಣ ಸಂಸ್ಥೆಗೆ ಯಾವುವಾದರೂ ಯೋಜನೆ ಇದೆಯೇ ? ಅದು ಹಿಂದಿನ ಸರ್ಕಾರ ಇದ್ದಾಗಲೂ ಇತ್ತು. ಅದರ ಹಿಂದಿನ ಸರ್ಕಾರ ಇದ್ದಾಗಲೂ ಇದು ನಡೆದುಕೊಂಡು ಬಂದಿದೆ. ತಾವೇ ಕೊಟ್ಟಿರತಕ್ಕಂತಹ ಅಂಕಿ ಅಂಶಗಳನ್ನು ನಾನು ನೋಡಿದ್ದೇನೆ. ನೀವು ಕೊಟ್ಟಿರತಕ್ಕಂತಹ ಪರ್‌ಫಾರ್ಮೆನ್ಸ್ ಬಡ್ಜೆಟ್ಟಿನಲ್ಲೂ ಇಲ್ಲ. ಎಷ್ಟು ಬಡವರು, ಹಿಂದುಳಿದ ವರ್ಗದವರು, ಹರಿಜನ-ಗಿರಿಜನರಿಗೆ ಅಕ್ಷರ ಜ್ಞಾನವನ್ನು ಈ ವಯಸ್ಕರ ಶಿಕ್ಷಣ ಸಂಸ್ಥೆ ಕೊಟ್ಟಿದೆ ? ಆದ್ದರಿಂದ ನಾನು ಹೇಳುವುದೇನೆಂದರೆ, ಇದನ್ನು ಅಬಾಲಿಷ್ ಮಾಡಿ. ಸಂಬಳ ತೆಗೆದುಕೊಳ್ಳುತ್ತಾರೆ. ಕಾರಿನಲ್ಲಿ ಅಡ್ಡಾಡುತ್ತಿದ್ದಾರೆ. ಯಾರೋ 4 ಜನರಿಗೆ ಅಕ್ಷರ ಜ್ಞಾನವನ್ನು ಕೊಟ್ಟಿದ್ದೇವೆಂದು ಹೇಳಿದರೆ ಹೇಗೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವತ್ತು ಯೂತ್ ಸರ್ವೀಸ್ ಹಾಗೂ ಕನ್ನಡ ಮತ್ತು ಸಂಸ್ಕೃತಿಯ ಬಗ್ಗೆಯೂ ಬೇಡಿಕೆ ಇದೆ. ಆದರೆ ಅದಕ್ಕೆ ಸಂಬಂಧಪಟ್ಟ ಸಚಿವರೇ ಇಲ್ಲ.

ಶ್ರೀ ಬಿ. ರಾಚಯ್ಯ.—ಅವರಿಗೆ ಹೇಳಿಕಳುಹಿಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ,—ಎಲ್ಲ ನೀವೇ ಮಾಡುವುದಾದರೆ, ನಿಮ್ಮದ್ದು ನಡೆಯಬೇಕಲ್ಲ, ಸುಮ್ಮನೆ ಬರೀ ಬರೆದುಕೊಂಡು ಕೂತರೆ ಹೇಗೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಸಂಪ್ರದಾಯ ಅಲ್ಲ. ಈ ರೀತಿಯ ಡಿಮ್ಯಾಂಡ್ ಬರುವುದು ವರ್ಷಕ್ಕೆ ಒಮ್ಮೆ. ಸದನಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ. ಸಂಬಂಧಪಟ್ಟ ಸಚಿವರು ಇಲ್ಲೇ ಇರಬೇಕಾಗುತ್ತದೆ. ದೆಹಲಿಯಲ್ಲಿ ನಡೆಯುವ ಸಭೆ ಅಷ್ಟೊಂದು ಪ್ರಾಮುಖ್ಯವಾದದ್ದೇ ?

ಶ್ರೀ ರಾಮಕೃಷ್ಣ ಹೆಗಡೆ.—ಕ್ರೀಡಾ ಸಚಿವರ ಸಮ್ಮೇಳನ ದೆಹಲಿಯಲ್ಲಿ ನಡೆಯುತ್ತಿದೆ. ಅದಕ್ಕಾಗಿ ಹೋಗಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಬೇರೆ ಯಾರನ್ನಾದರೂ ಕಳುಹಿಸಬಹುದಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಆವಾಗಲೂ ಟೀಕೆ ಮಾಡುತ್ತೀರಿ, ಇಂತಹ ಸಮ್ಮೇಳನಕ್ಕೆ ಸಂಬಂಧಪಟ್ಟ ಸಚಿವರನ್ನು ಕಳುಹಿಸದೆ ಬೇರೆ ಯಾರನ್ನೋ ಕಳುಹಿಸಿದ್ದಾರೆ ಅಂತ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸದನದಲ್ಲಿ ಅವರ ಇಲಾಖೆಗೆ ಸಂಬಂಧಪಟ್ಟಂತಹ ಕಾರ್ಯಕಲಾಪ ಗಳು ನಡೆಯುತ್ತಿರಬೇಕಾದರೆ ಇದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕ ಗುತ್ತದೆ. ಇಲ್ಲದಿದ್ದರೆ ನಾವು ನಮ್ಮ ಅನಿಸಿಕೆಗಳನ್ನು ಯಾರಲ್ಲಿ ಹೇಳಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಮಗೆ ಗೊತ್ತಿದ್ದ ಹಾಗ, ಈ ಸದನದ ಕಾರ್ಯಕ್ರಮ ಬದಲಾವಣೆ ಯಾಗಿದೆ. ಅವರು ಸದನದ ಕಾರ್ಯಕ್ರಮ ಬದಲಾವಣೆಯಾಗುವ ಮೊದಲೇ ಹೋಗಿದ್ದಾರೆ. ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ವಯಸ್ಕರ ಶಿಕ್ಷಣ ಸಂಸ್ಥೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲ ಎಷ್ಟರಮಟ್ಟಿಗೆ ಅಕ್ಷರ ಜ್ಞಾನವನ್ನು ಕೊಡಬೇಕಾಗಿತ್ತೋ ಅಷ್ಟರ ಮಟ್ಟಿಗೆ ಅವರು ಕೆಲಸ ಮಾಡುತ್ತಿಲ್ಲ. ಗುಲ್ಬರ್ಗ, ಬೀದರ್, ರಾಯಚೂರ್ ಎಲ್ಲೇ ಆಗಲಿ ನಾನು ಅನೇಕ ಕಡೆ ಹೋದಾಗ ಕೇಳುತ್ತೇನೆ. ವಯಸ್ಕರ. ಶಿಕ್ಷಣ ಸಂಸ್ಥೆ ಕೆಲಸ ಮಾಡುತ್ತಿದೆಯೇ ? ಅಂತ ಕೇಳಿದರೆ ಒಂದು ಊರಿಗೆ ಅವರು ಹೋಗಿಲ್ಲ. ಮತ್ತೆ ವಯಸ್ಕರ ಶಿಕ್ಷಣ ಸಂಸ್ಥೆಯ ಕೇಂದ್ರಗಳು ಇರುವಂತಹ ಕಡೆಯಲ್ಲೂ 4 ಜನರಿಗೆ ಅಕ್ಷರ ಜ್ಞಾನವನ್ನು ಅವರು ಕಲಿಸಿಲ್ಲ. ತಾವು ಸುಮ್ಮನೆ ಯಾರೋ ಕೆಲವರಿಗೆ ಕೆಲಸ ಕೊಡಬೇಕಾಗಿದೆ, ಅವಕ್ಕಾಗಿ ಇರಬೇಕು ಎನ್ನುವು ದಾದರೆ, ಇದನ್ನು ಕೂಡಲೇ ಅಬಾಲಿಷ್ ಮಾಡಿ. ಇಲ್ಲ ಇದಕ್ಕೆ ಒಂದು ಹೊಸ ಚೈತನ್ಯವನ್ನು ತುಂಬಿ. ಒಂದು ಹೊಸ ಶಕ್ತಿಯನ್ನು ತುಂಬಿ ಅದನ್ನು ಚೈತನ್ಯಗೊಳಿಸಿ. ಇದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ನಿಮ್ಮ ಡಿ.ಡಿ.ಪಿ.ಐ.ರವರನ್ನು ಕಳುಹಿಸಿ. ಇಲ್ಲ ನೀವೇ ಸ್ವತಃ ನೋಡಬೇಕೆಂದು ಕಾರ್ಯಕ್ರಮವನ್ನು ಕೊಟ್ಟರೆ, ಅವರು ಅಲ್ಲಿ ಆ ಹಳ್ಳಿಯಲ್ಲಿರುವ ನಾಲ್ಕಾರು ಜನರನ್ನು ಹಿಡಿದುಕೊಂಡು ಬಂದು ನಿಮ್ಮ ಕಾರ್ಯಕ್ರಮ ಆಗುವವರೆಗೆ ನಿಮ್ಮ ಮುಂದೆ ಕೂರಿಸುತ್ತಾರೆ. ನಮ್ಮಲ್ಲಿ ಇವತ್ತಿನವರೆಗೆ ಅಕ್ಷರ ಜ್ಞಾನ ಇರತಕ್ಕಂತಹವರು ಎಷ್ಟು ಇದ್ದಾರೆ ಎಂದರೆ 38 ಪರ್ಸೆಂಟ್ ಇರಬಹುದು. ಅದರಲ್ಲಿ ವೀಕರ್ ಸೆಕ್ಷನ್ ಅಂತ ಏನು ಕರೆಯುತ್ತೇವೆ, 18 ಪರ್ಸೆಂಟ್ ರಿಸರ್ವೇಷನ್ ಏನು ಇಟ್ಟಿದ್ದೇವೆ, ಅವರು ಇನ್ನೂ ಅಲ್ಲೇ ಇದ್ದಾರೆ. ಜನರಲ್ಲಾಗಿ ತೆಗೆದು ಕೊಂಡರೆ 38 ಪರ್ಸೆಂಟ್ ಅಕ್ಷರಜ್ಞಾನ ಇರುವುದು. ಇನ್ನೂ 62 ಪರ್ಸೆಂಟ್ ಜನ ಅಕ್ಷರ ಜ್ಞಾನವೂ ಇಲ್ಲದವರು ಇದ್ದಾರೆ. ಈ ಸಮಾಜದಲ್ಲಿರುವ ಇತರೇ ಜನರನ್ನು ಸೇರಿಸಿದರೆ 50 ಪರ್ಸೆಂಟ್‌ಗಿಂತ ಮೇಲೆ ಇದ್ದಾರೆ. ಇವರಿಗೆಲ್ಲಾ ಅಕ್ಷರ ಜ್ಞಾನವನ್ನು ಕಲಿಸಬೇಕಾದರೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದ ಕ್ಕಾದರೂ ಬೇಕಲ್ಲ ಯೋಜನೆ. ಆ ರೀತಿಯ ಯಾವುದಾದರೂ ಯೋಜನೆಯನ್ನು ಇಟ್ಟಿದ್ದೀರಾ ? ಯಾವ ರೀತಿ ಸಾಧನೆ ಮಾಡುತ್ತೀರಿ ? ಅದನ್ನೂ ಕೂಡ ಸ್ಪಷ್ಟಪಡಿಸಬೇಕಾಗಿದೆ. ಇಲ್ಲದಿದ್ದರೆ ಸುಮ್ಮನೆ ಕೊಟ್ಟಿದ್ದೇವೆ. ವಯಸ್ಕರ ಶಿಕ್ಷಣ ಸಂಸ್ಥೆ ಇದೆ, ಅದಕ್ಕೆ ಒಬ್ಬರು ಅಧ್ಯಕ್ಷರು ಇದ್ದಾರೆ ಅಂತ ಹೇಳಿಕೊಂಡರೆ ಅದು ಅಷ್ಟು ಸಮರ್ಪಕವಾಗಿ ಆಗುವುದಿಲ್ಲ.

ಕೊನೆಯದಾಗಿ ಜ್ಯೂನಿಯರ್ ಕಾಲೇಜುಗಳನ್ನು ಮಾಡಿದ್ದೀರಿ. ಕೆಲವು ಕಡೆ ಇಂಡಿಪೆಂಡೆಂಟ್ ಜ್ಯೂನಿ ಯರ್ ಕಾಲೇಜು ಅಂತ ಇದೆ. ನಾನು ಮೊದಲಿನಿಂದಲೂ ಇದಕ್ಕೆ ಸ್ವಲ್ಪ ವಿರೋಧ ಮಾಡುತ್ತಾ ಬಂದಿದ್ದೇನೆ. ಏಕೆಂದರೆ ಎಲ್ಲಿ ಹೈಸ್ಕೂಲುಗಳು ಇವೆಯೋ ಅಲ್ಲಿ ಅದನ್ನು ಅಪ್‌ಗ್ರೇಡ್ ಮಾಡಿ ಜ್ಯೂನಿಯರ್ ಕಾಲೇಜನ್ನು ಕೊಟ್ಟರೆ ಅದಕ್ಕೇನಾದರೂ ಅರ್ಥ ಬರುತ್ತದೆ. ಅಥವಾ ಡಿಗ್ರಿ ಕಾಲೇಜುಗಳು ಇರುವ ಕಡೆ ಜ್ಯೂನಿಯರ್ ಕಾಲೇಜುಗಳು ಮಾಡಿದರೆ ಅದಕ್ಕೂ ಅರ್ಥ ಬರುತ್ತದೆ. ಆದರೆ ಇವೆರಡೂ ಅನುಕೂಲಗಳು ಇಲ್ಲದ ಕೆಲವು ಕಡೆ ಇಂಡಿಪೆಂಡೆಂಟ್ ಜ್ಯೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದೀರಿ. ಅವರಿಗೆ ಯಾರ ಸಂಪರ್ಕವೂ ಇರು ವುದಿಲ್ಲ. ಒಂದು ಕಡೆ ಹೈಸ್ಕೂಲಿನ ಸಂಪರ್ಕವೂ ಇರುವುದಿಲ್ಲ. ಮತ್ತೊಂದು ಕಾಲೇಜುಗಳ ಸಂಪರ್ಕವೂ ಇರುವುದಿಲ್ಲ. ಇವರಿಗೆ ಯಾವುದೇ ಸಹಾಯವನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಇಂಡಿಪೆಂಡೆಂಟ್ ಜ್ಯೂನಿಯರ್ ಕಾಲೇಜುಗಳನ್ನು ಕೊಡತಕ್ಕಂತಹ ವ್ಯವಸ್ಥೆಯನ್ನೇ ತೆಗೆದುಹಾಕಿಬಿಡಿ. ಆ ರೀತಿ ಜ್ಯೂನಿಯರ್ ಕಾಲೇಜುಗಳನ್ನು ಕೊಡುವುದಾದರೆ ಹೈಸ್ಕೂಲು ಇರುವ ಕಡೆ ಅದನ್ನು ಅಪ್‌ಗ್ರೇಡ್ ಮಾಡಿ ಕೊಡಿ. ಇಲ್ಲ, ಡಿಗ್ರಿ ಕಾಲೇಜುಗಳು ಇರುವ ಕಡೆ ಜ್ಯೂನಿಯರ್ ಕಾಲೇಜುಗಳನ್ನು ಕೊಡಿ. ಜ್ಯೂನಿಯರ್ ಕಾಲೇಜಿಗೆ ಪ್ರತ್ಯೇಕ ಕಟ್ಟಡ ಬೇಕು. ಟೀಚರ್ಸ್ ಬೇಕು. ಆದರೆ ಒಂದಕ್ಕೂ ಕಟ್ಟಡ ಇಲ್ಲ. ಅವರು ಅಲ್ಲೇ ಇರುವ ಹೈಸ್ಕೂಲು ಅಥವಾ ಡಿಗ್ರಿ ಕಾಲೇಜು ಕಟ್ಟಡದ ಒಂದು ಭಾಗದಲ್ಲಿ 4 ರೂಮುಗಳನ್ನು ತೆಗೆದುಕೊಂಡು ಮಾಡುತ್ತಿದ್ದಾರೆ. ಅವುಗಳನ್ನೇ ಇಂಡಿಪೆಂಡೆಂಟ್ ಜ್ಯೂನಿಯರ್ ಕಾಲೇಜು ಅಂತ ತೋರಿಸುತ್ತಾರೆ. ಪ್ರತ್ಯೇಕ ಪ್ರಿನ್ಸಿಪಾಲ್, ಒಂದಷ್ಟು ಜನ ಗುಮಾಸ್ತರು ಸಿಕ್ಕುತ್ತಾರೆಂದು ಈ ರೀತಿ ಮಾಡುತ್ತಿದ್ದಾರೆ. ಆದ್ದರಿಂದ ಈ ವ್ಯವಸ್ಥೆಯನ್ನೇ ಸಂಪೂರ್ಣವಾಗಿ ತೆಗೆದುಹಾಕಬೇಕು.

ಶ್ರೀ ಸಿ. ಬೈರೇಗೌಡ,—ರಾಷ್ಟ್ರೀಕರಣ ಮಾಡಿದರೆ ಹೇಗೆ... ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಎಲ್ಲ ಹೈಸ್ಕೂಲುಗಳನ್ನೂ ಸರ್ಕಾರದವರೇ ವಹಿಸಿಕೊಂಡು ನಡೆಸ ಬೇಕೆಂದು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ಒಂದು ವೇಳೆ ನಿಮ್ಮ ಕೈಯಲ್ಲಿ ಆ ರೀತಿ ನಡೆಸುವುದಕ್ಕೆ ಆಗದಿದ್ದರೆ, ನೀವು ಬೇರೆಯವರಿಗೆ ಸಹಾಯಮಾಡುವಾಗ, ಯಾರು ವೀಕರ್ ಸೆಕ್ಷನ್ ಅಂತ ಇರುತ್ತಾರೋ

ಅವರು ಏಕೆ ಇದನ್ನು ಮಾಡಬಾರದು ? ಎಂಬುದಾಗಿ ಪ್ರಶ್ನೆ ಕೇಳುತ್ತೇನೆ. ಕ್ಯಾಪಿಟೇಷನ್ ಫೀಯನ್ನು ತೆಗೆದು ಹಾಕಿ. ರಾಷ್ಟ್ರೀಕರಣ ಮಾಡಿ. ಮಾನ್ಯ ಸದಸ್ಯರಿಗೆ ಏನೊಂದು ಸಂಶಯ ಇದೆ ಅಂದರೆ ನಮ್ಮ ಕಾಲದಲ್ಲಿ ಹರಿಜನ-ಗಿರಿಜನರಿಗೆ ಒಂದೆರಡು ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜೊಂದನ್ನು ಕೊಟ್ಟರಲ್ಲ, ಅದು ಅವರ ತಲೆಯಲ್ಲಿರಬಹುದು. ತಾವೂ ಒಂದೆರಡು ಸಲ ನನ್ನ ಹತ್ತಿರ ಬಂದಿದ್ದೀರಿ. ನನಗೆ ಗೊತ್ತು. ಇವತ್ತು ನಮ್ಮದು ಒಂದು ಇಂಜಿನಿಯರಿಂಗ್ ಕಾಲೇಜ್ ಇದೆ. ಆದರೆ ಸರ್ಕಾರ ರಾಷ್ಟ್ರೀಕರಣ ಮಾಡಿದರೆ ನಮ್ಮಂತೆ ಇರುವ ಇತರೇ 40 ಕಾಲೇಜುಗಳನ್ನೂ ರಾಷ್ಟ್ರೀಕರಣ ಮಾಡಬೇಕಾಗುತ್ತದೆ. ಆ ರೀತಿ ರಾಷ್ಟ್ರೀಕರಣ ಮಾಡಿದಾಗ ಅಲ್ಲೂ ನಮಗೆ 18 ಪರ್ಸೆಂಟ್ ಸಿಕ್ಕುತ್ತದೆ. ಆ ರೀತಿ ಮಾಡುವುದಕ್ಕೆ ನಮಗಿಂತ ನೀವು ಮೊದಲು ಬನ್ನಿ. ಇವತ್ತು ನಾವೇ ಕೊಟ್ಟಿರತಕ್ಕಂತಹ ಅಂಕಿ ಅಂಶಗಳನ್ನು ನೋಡುವುದಾದರೆ, ಸಾವಿರಾರು ಖಾಸಗಿ ಹೈಸ್ಕೂಲುಗಳು ರಾಜ್ಯದಲ್ಲಿವೆ. ಆದರೆ ಹರಿಜನ-ಗಿರಿಜನ ನಡೆಸತಕ್ಕಂತಹ ಖಾಸಗಿ ಹೈಸ್ಕೂಲುಗಳು ಎಷ್ಟು ಇವೆ ಎಂದರೆ, ಕೇವಲ 17 ಹೈಸ್ಕೂಲುಗಳನ್ನು ಮಾತ್ರ ಹರಿಜನ-ಗಿರಿಜನರು ನಡೆಸುತ್ತಿದ್ದಾರೆ. ನನಗೆ ಗೊತ್ತಿರುವ ಪ್ರಕಾರ ರಾಜ್ಯದಲ್ಲಿರುವ ಖಾಸಗಿ ಹೈಸ್ಕೂಲುಗಳು 2540. ಆದ್ದರಿಂದ ರಾಷ್ಟ್ರೀಕರಣ ಮಾಡುವುದಾದರೆ ಮೊದಲು ಮಾಡಿ. ಅದಕ್ಕೆ ನಾನು ಹಿಂಜರಿಯುತ್ತಿಲ್ಲ. ಆದರೆ ತಮ್ಮಲ್ಲಿ ಆ ಶಕ್ತಿ ಇದೆಯೆ ? ಆ ಕೆಲಸವನ್ನು ಮಾಡುವುದಕ್ಕೆ ಶಕ್ತಿ ಬಂದಾಗ ಮಾಡಿ. ಮನಸ್ಸು ಬಂದ ಹಾಗೆ ಖಾಸಗಿ ಹೈಸ್ಕೂಲುಗಳನ್ನು ಕೊಡುತ್ತಿದ್ದೀರಿ. ಅದರ ಬದಲು ಪಾಲಿಟೆಕ್ನಿಕನ್ನು ಮಾಡಬೇಕು. ಅದನ್ನು ಮಾಡುವಾಗಲೂ ಅವರ ಜೊತೆ ಬೇರೆ ಸಮಾಜ ಬೆಳೆಯಬೇಕು. ನಾನು ಏತಕ್ಕಾಗಿ ಈ ಮಾತನ್ನು ಹೇಳು, ತ್ತಿದ್ದೇನೆಂದರೆ, ಮೀಸಲಾತಿಯನ್ನು ಮಾಡಿದಂಥ ಮಹಾಪುರುಷ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಹೆಚ್ಚಿನ ಮಹತ್ವವನ್ನು ವಿದ್ಯಾಭ್ಯಾಸಕ್ಕಾಗಿ ಕೊಟ್ಟಿದ್ದಾರೆ.' ಅವರು ಇದಕ್ಕೆ ಕೊಟ್ಟ ಕಾರಣವೇನೆಂದರೆ ನಮಗೆ ಭೂಮಿ ಬೇಕಿಲ್ಲ, ಐಶ್ವರ್ಯ ಬೇಕಿಲ್ಲ. ನನ್ನ ಜನರಿಗೆ ಶಿಕ್ಷಣ ಬೇಕೆಂಬ ಒಂದೇ ಒಂದು ಮಾತನ್ನು ಅವರು ಹೇಳಿದ್ದು. ಆ ರೀತಿ ಅವರು ಹೇಳಿ 'ಪೀಪಲ್ಸ್ ಎಜುಕೇಷನ್ ಸೊಸೈಟಿ' ಎಂಬುದಾಗಿ 1942-43 ರಲ್ಲಿ ಔರಂಗಾಬಾದ್ ಎಂಬ ಊರಿನಲ್ಲಿ ಸ್ಥಾಪನೆ ಮಾಡಿದರು.

ಆ ಒಂದು ದೊಡ್ಡ ಸಂಸ್ಥೆ ಅಲ್ಲಿದ್ದರೂ ಇವರ ಹೆಸರಿನಲ್ಲಿ ಒಂದು ಯೂನಿವರ್ಸಿಟಿ ಸ್ಥಾಪನೆಯಾಗಬೇಕು ಎಂದು ಹೇಳಿದಾಗ ಅಲ್ಲಿ ದೊಡ್ಡ ಗಲಾಟೆಯಾಯಿತು. ಅವರ ಬಗ್ಗೆ ಸ್ಲೋಗನ್ ಹಾಡಿದ್ದಾರೆಯೇ ವಿನಾ ಏನೂ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ನಾನು ಈ ಸಂದರ್ಭದಲ್ಲಿ ಹೇಳಳುವುದೇನೆಂದರೆ ನನ್ನ ಜನಾಂಗಕ್ಕೆ ಮತ್ತು ನನ್ನ ಜನಾಂಗದ ಬಡವರಿಗೆ ಬೇಕಾದ್ದು ಏನು ಎಂದರೆ ಶಿಕ್ಷಣ. ಈ ಶಿಕ್ಷಣವನ್ನು ಈ ಜನಾಂಗಕ್ಕೆ ಕೊಟ್ಟರೆ ಆವಾಗ ಈ ಸಮಾಜ ತನ್ನಷ್ಟಕ್ಕೆ ತಾನೇ ಮುಂದೆ ಬರುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗದೆ ವಿದ್ಯಾಭ್ಯಾಸ ಹಳ್ಳಿಗಳಲ್ಲಿ ಮುಂದುವರೆಯದು ಅಂತ ಹೇಳಿದರಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :—ಮಾನ್ಯ ಸೂರ್ಯನಾರಾಯಣ ರಾವ್ ಅವರಿಗೆ ಮತ್ತು ತಮ್ಮೆಲ್ಲರಿಗೂ ಸಹ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ಪಾಪ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರೂ ಕೂಡ ಅದರಲ್ಲಿ ಉತ್ತರ ಕರ್ನಾಟಕ ಭಾವಗನ್ನು ಎಸ್. ಆರ್. ಬೊಮ್ಮಾಯಿಯವರು ಹಂಚಿಕೊಂಡಿದ್ದಾರೆ, ದಕ್ಷಿಣ ಕರ್ನಾಟಕ ಭಾಗವನ್ನು ಶ್ರೀಮಾನ್ ಹೆಚ್. ಡಿ. ದೇವೇಗೌಡರು ಹಂಚಿಕೊಂಡಿದ್ದಾರೆ ಎಂದು ಹೇಳುತ್ತೇನೆ. ಪಾಪ ಅವರೇನೋ ಇಲ್ಲಿ ಶಿಕ್ಷಣ ಸಚಿವರಾಗಿದ್ದಾರೆ. ಅವರ ಕಾಲದಲ್ಲಾದರೂ ಕೂಡ ನಾನು ಹೇಳಿದಂತಹ ಸಲಹೆಗಳಿಗೆ ಗಮನ ಕೊಟ್ಟು ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಈ ಜನಾಂಗಕ್ಕೆ ಬಹಳ ಮುಖ್ಯವಾಗಿ ಬೇಕಾದ್ದು. ಅದೂ ಅಲ್ಲದೆ ಅತೀ ಮಹತ್ವದ್ದಾಗಿರತಕ್ಕಂಥಾದ್ದು ಶಿಕ್ಷಣ. ಅವನಿಗೆ ಈ ಶಿಕ್ಷಣವನ್ನು ಕೊಟ್ಟರೆ ತನ್ನಷ್ಟಕ್ಕೆ ತಾನೇ ಆರ್ಥಿಕವಾಗಿಯೂ ಮುಂದೆ ಬರುತ್ತಾನೆ. ಇಲ್ಲದೆ ಹೋದರೆ ಅವನು ಮುಂದೆ ಬರುವುದು ಕಷ್ಟ. ನಿಮಗೆ ಒಂದು ಉದಾಹರಣೆ ಹೇಳಬೇಕಾದರೆ, ತೆಂಗಾಲಿ ಅನ್ನುವ ಒಂದು ಗ್ರಾಮದಲ್ಲಿ ಈ ಸಮಾಜದವನು ಏನಾದರೂ ಒಂದು ಹೋಟೆಲ್ ಇಟ್ಟರೆ ಅಲ್ಲಿ ಟೀ ಕುಡಿಯುವುದಕ್ಕೆ ಯಾರೂ ಬರುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ನಾನು ಕುಡಿಯುತ್ತೇನೆ.

ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳಿದ್ದು ನಿಮ್ಮನ್ನಲ್ಲ. ಜನರಲ್ ಆಗಿ ಹೇಳಿದ್ದು. ಆ ಹೋಟೆಲ್‌ಗೆ ಯಾರೂ ಕೂಡ ಟೀ ಕುಡಿಯುವುದಕ್ಕೆ ಹೋಗುವುದಿಲ್ಲವಾದ್ದರಿಂದ ಅವನು ಅಲ್ಲಿ ತನ್ನ ಅಂಗಡಿಯನ್ನು ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ನಾನು ಹೇಳುವುದು ಈ ಶಿಕ್ಷಣವನ್ನು ಈ ಸಮಾಜಕ್ಕೆ ಕೊಡುವುದೇ ಆದರೆ ಆವಾಗ ಆ ಸಮಾಜದ ಆರ್ಥಿಕ ಸುಧಾರಣೆಯೂ ಸಹ ತನ್ನಷ್ಟಕ್ಕೆ ತಾನೇ ಆಗುತ್ತದೆ. ಅವರನ್ನು ಈ ರೀತಿಯಾಗಿ ಸುಧಾರಣೆ ಮಾಡಲು ತಾವು ಯಾವ ರೀತಿಯಾದ ಕಾರ್ಯಕ್ರಮ ಹಾಕಿಕೊಂಡರೂ ಕೂಡ ನಾವು ಬೇಡ ಅನ್ನುವುದಿಲ್ಲ. ನಮ್ಮ ಸಮಾಜದ ವ್ಯವಸ್ಥೆ ಇವತ್ತಿನ ದಿವಸ ಹೀಗೆ ಇದೆ. ಎಲ್ಲಿ ನೋಡಲಿ ಜಾತಿ ಮತ್ತು ಕ್ಲಾಸ್ ಈ ಎರಡು ವ್ಯವಸ್ಥೆಯನ್ನು ಮುಂದೆ ತಂದೊಡ್ಡುತ್ತಾರೆ. ಆದುದರಿಂದ ಈ ಸಮಾಜ ಮುಂದಕ್ಕೆ ಬರಬೇಕಾದರೆ ನಾನು ಹೇಳಿದ ಹಾಗೆ ಅವರ ಬಗ್ಗೆ ತಾವು ಪ್ರಗತಿಪರವಾದ ಕಾರ್ಯಕ್ರಮಗಳನ್ನು ಹಾಕಬೇಕು ಎಂದು ಹೇಳುತ್ತೇನೆ. ಕೆಲವರು 22-23 ವರ್ಷ

ದಿಂದಲೂ ಇಲ್ಲಿ ಆಡಳಿತ ಮಾಡಿದವರೇ ಆ ಪಕ್ಷಕ್ಕೆ ಹೋಗಿ ಕುಳಿತಿದ್ದಾರೆ. ಆದುದರಿಂದ ನಾನು ಈ ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ. ಏನೆಂದರೆ ನಾವು ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳುತ್ತಾರೆಯೇ ವಿನಹ ನೀವು ಏನೂ ಮಾಡುವುದಿಲ್ಲ ಅನ್ನುವ ಮಾತನ್ನು ಹೇಳಬೇಕಾಗಿದೆ. ಅಲ್ಲಿ ಕೆಲವರು ಇದ್ದಾರೆ. ಅವರಿಗೆ ಶಕ್ತಿ ಇದೆ. ಅವರಾದರೂ ಕೂಡ ಇವರ ಬಗ್ಗೆ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಜಾರಿಗೆ ತರಲಿ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರು ಜಾತಿ ಮತ್ತು ವರ್ಗದ ವಿಷಯ ಹೇಳಿದರು. ಬಹುಶಃ ಅವರು ಮರೆತಂತೆ ಕಾಣುತ್ತದೆ. ನಾನು ಹೇಳುತ್ತೇನೆ. ಈ ಜಾತಿ ಮತ್ತು ವರ್ಗ ಯಾವುದು ಎಂದರೆ ಯಾವುದು ಚಲನೆ ಇದೆಯೋ ಅದು ಒಂದು ವರ್ಗ; ಯಾವುದು ಚಲನೆ ಇಲ್ಲವೋ ಅದು ಜಾತಿ. ತಮಗೆ ಇಂಗ್ಲೀಷ್‌ನಲ್ಲಿ ಹೇಳಬೇಕಾದರೆ ಡಾ|| ರಾಮ ಮನೋಹರ ಲೋಹಿಯಾರವರು ಈ ರೀತಿ ಹೇಳಿದ್ದಾರೆ. ಅದು ಏನೆಂದರೆ Caste is an immobile class; class is a mobile caste ಎಂದು. ನಮ್ಮ ದೇಶದಲ್ಲಿ ಈ ರೀತಿಯಾದ ಒಂದು ಮೊಬೈಲಿಟಿ ಇನ್ನೂ ಬಂದಿಲ್ಲ. ಏತಕ್ಕೆಂದರೆ 20–30 ವರ್ಷದಿಂದ ರಾಜ್ಯದ ಆಡಳಿತ ಅವರು ನಡೆಸಿ ಈ ರೀತಿಯಾಗಿ ವರ್ಗ ಮತ್ತು ಜಾತಿ ಬೆಳೆಸಿಟ್ಟಿದ್ದರಿಂದ ಇನ್ನೂ ಮೊಬೈಲಿಟಿ ಬಂದಿಲ್ಲ. ತಮ್ಮ ತಪ್ಪನ್ನು ನಮ್ಮ ಮೇಲೆ ಇಟ್ಟಿದ್ದಾರೆ. ಅವರು ಇದನ್ನು ಹಾಳುಮಾಡಿ ಇಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾವು 25–30 ವರ್ಷ ಇದ್ದು ಇದನ್ನು ಹಾಳುಮಾಡಿದೆವು ಎಂದು ಹೇಳಿದ್ದಾರೆ. ಆದುದರಿಂದಲೇ ನಾನು ಹೇಳಿದ್ದು ಇಲ್ಲಿ 25–30 ವರ್ಷ ಇದ್ದು ಆಡಳಿತ ನಡೆಸುತ್ತಿದ್ದರಲ್ಲಾ ಮತ್ತೆ ಅವರ ಕೈಯಲ್ಲೇ ಮತ್ತೆ ಅಧಿಕಾರ ಬಂದಿದೆ. ಆದ್ದರಿಂದ ಅವರು ಈಗಲೂ ಏನೂ ಮಾಡುವುದಿಲ್ಲ ಎಂದು ಹೇಳಿದ್ದು. ಅದಕ್ಕೆ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ, ಈ ಕಡೆ ಬನ್ನಿ ಹೋರಾಟ ಮಾಡೋಣ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ನೀವಿಬ್ಬರೂ ಬೇಡ. ಸರಿಯಿಲ್ಲ. ನೀವುಗಳು ನಮ್ಮ ಹತ್ತಿರ ಬನ್ನಿ, ಅವರ ಬಗ್ಗೆ ಹೋರಾಟ ಮಾಡೋಣ.

ಉಪಾಧ್ಯಕ್ಷರು.—ಮಧ್ಯೆ ಮಧ್ಯೆ ಈ ರೀತಿ ಮಾತನಾಡುವುದು ಬೇಡ. ತಾವು ಬೇಗನೆ ಮುಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಮೊದಲೇ ಹೇಳಿದ ಹಾಗೆ ನಮ್ಮ ಜನಾಂಗಕ್ಕೆ ಶಿಕ್ಷಣ ಅನ್ನುವುದು ಬಹಳ ಮಹತ್ವದ್ದು. ಆದುದರಿಂದ ಈ ಹರಿಜನ–ಗಿರಿಜನರಿಗೆ ಶಿಕ್ಷಣ ಕೊಡುವುದರ ಕಡೆಗೆ ಮಾನ್ಯ ಶಿಕ್ಷಣ ಸಚಿವರು ಹೆಚ್ಚಿನ ಗಮನ ಕೊಡಬೇಕು ಎಂದು ಹೇಳುತ್ತೇನೆ. ತಾವು ಇದರ ಬಗ್ಗೆ ಜಗಳ ಆದಿ ಹೆಚ್ಚು ಹಣ ತೆಗೆದುಕೊಳ್ಳಬೇಕು. ಹೆಚ್ಚು ಹಣ ಇಲ್ಲ ಎಂದು ಹೇಳುವುದಾಗಲಿ, ಅಥವಾ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಹೇಳಿ ಇವರ ಬಗ್ಗೆ ತೆಗೆದುಕೊಂಡಂಥಾ ಕಾರ್ಯಕ್ರಮಗಳಿಗೆ ಹಣಕಾಸಿನ ನೆರವನ್ನು ತಾವು ದೊರಕಿಸಿಕೊಳ್ಳದೇ ಹೋದರೆ ತಾವು ರೆಸಿಗ್ನೇಷನ್ ಕೊಟ್ಟು ಮನೆಗೆ ಹೋಗಿ. ನಿಮ್ಮ ಚಾಮರಾಜನಗರಕ್ಕೆ ಹೋಗಿ ಅಲ್ಲಿ ವ್ಯವಸಾಯ ಮಾಡಿ. ತಾವು ಈಗ ಈ ಶಿಕ್ಷಣ ಖಾತೆ ಏನು ವಹಿಸಿಕೊಂಡಿದ್ದೀರೋ ಇದರ ಬಗ್ಗೆ ನೀವು ಸರಿಯಾಗಿ ಕೆಲಸವನ್ನು ನಿರ್ವಹಿಸದೇ ಹೋದರೆ, ಈ ಜನಾಂಗಕ್ಕೆ ಏನು ಕೆಲಸ ಮಾಡಬೇಕಾಗಿತ್ತೋ ಆ ಕೆಲಸವನ್ನು ನಿರ್ವಹಿಸದೇ ಹೋದರೆ ನಿಮಗೆ ಕೆಟ್ಟ ಹೆಸರು ಬರುತ್ತದೆ. ಈ ಜನಾಂಗದ ಆರ್ಥಿಕ ಸ್ಥಿತಿ ಬಗ್ಗೆ ಏನಾದರೂ ಹೊಂದಾಣಿಕೆ ಮಾಡದೆ ಹೋದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ತಾವು ಇದರ ಬಗ್ಗೆ ಜವಾಬ್ದಾರಿ ಹೊತ್ತುಕೊಂಡು ಈ ಸಮಾಜವನ್ನು ಮುಂದಕ್ಕೆ ತರುವ ರೀತಿಯಲ್ಲಿ ಕೆಲಸ ಮಾಡದೇ ಹೋದರೆ ನಿಮಗೆ ಕೆಟ್ಟ ಹೆಸರು ಬರುತ್ತದೆ ಅಂತ ಹೇಳಿ, ನಾನು ಈ ಬೇಡಿಕೆಗಳನ್ನು ವಿರೋಧ ಮಾಡಿ ಮಾನ್ಯ ಉಪಾಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಹೆಚ್. ಎ. ನಾರಾಯಣ ಗೌಡ (ಚಿಕ್ಕಮಗಳೂರು).— ಸನ್ಮಾನ್ಯ ಉಪಾಧ್ಯಕ್ಷರೇ, ಈ ಒಂದು ಇಲಾಖೆಯ ಬೇಡಿಕೆಗಳ ಬಗ್ಗೆ ನಾನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮುಖಾಂತರ ಈ ಸದನದ ಮುಂದೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾಜಿ ಶಿಕ್ಷಣ ಸಚಿವರೂ ಹಾಗೂ ಅನುಭವ ಇರತಕ್ಕಂಥ ಶಾಸಕರೂ ಆದ ಶ್ರೀ ಮಲ್ಲಿಕಾರ್ಜುನ ಖಾರ್ಗೆಯವರಿಗೆ ನಾನು ಮೊಟ್ಟಮೊದಲನೆಯದಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏತಕ್ಕೆಂದರೆ ಕೊನೆಯಪಕ್ಷ ಒಂದು ವರ್ಷದ ಮೇಲಾದರೂ ಕೂಡ ಈ ಭಾಗದ ಕಡೆಗೆ ಅಂದರೆ ಹಳ್ಳಿಯವರ ಕಡೆಗೆ ಗಮನ ಕೊಟ್ಟು, ಅವರ ಬಗ್ಗೆ ಬಹಳ ಕಳಕಳಿ ಇಟ್ಟು, ಬಹಳ ಆಸ್ಥೆ ವಹಿಸಿ ಮಾತನಾಡುವುದಕ್ಕೆ ಈಗಲಾದರೂ ಜ್ಞಾನೋದಯ ಬಂತಲ್ಲಾ ಎಂದು. ಈಗ ಅವರಲ್ಲಿ ಈ ಒಂದು ಮನೋಭಾವ ಏನು ಬಂದಿದೆ ಅದಕ್ಕಾಗಿ ನಾನು ಅವರಿಗೆ ಮತ್ತೊಮ್ಮೆ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಂದುವರೆಸುತ್ತೇನೆ. ಮೊಟ್ಟಮೊದಲನೆಯದಾಗಿ ಹೇಳಬೇಕಾದರೆ ಪ್ರಾಥಮಿಕ ಪಾಠಶಾಲೆಗಳ ಬಗ್ಗೆ, ಅವುಗಳ ಸ್ಥಿತಿಗತಿಗಳ ಬಗ್ಗೆ ಮಾನ್ಯ ಸದಸ್ಯರು ಚೆನ್ನಾಗಿ ವಿವರಿಸಿ ಹೇಳಿದ್ದಾರೆ. ಅದನ್ನು ನಾವು

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಒಪ್ಪುವವರಾಗಿದ್ದರೂ ಸಹ 35 ವರ್ಷದ ಅವರ ಒಂದು ಅವಧಿಯಲ್ಲಿ ಅಂದರೆ ಈ ಹಿಂದಿನ ಸರ್ಕಾರ ಹಳ್ಳಿಯವರ ಜೀವನದ ಬಗ್ಗೆ ಅದರಲ್ಲೂ ಅವರ ಶಿಕ್ಷಣದ ಬಗ್ಗೆ ಅವರ ಒಂದು ವಿದ್ಯಾಭ್ಯಾಸದ ಮಟ್ಟವನ್ನು ಯೋಚನೆಮಾಡಿ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಮಾಡಿದ್ದರೆ ಬಹುಶಃ ಇಲ್ಲಿಯವರೆಗೆ ನಾವೆಲ್ಲಾ ಒಂದು ಸುಧಾರಿತ ಮಟ್ಟಕ್ಕೆ ತಲುಪಿತ್ತಿದ್ದೆವೋ ಏನೋ ? ಮಾನ್ಯ ಸದಸ್ಯರು 25–30 ವರ್ಷದಿಂದಲೂ ಏನುನಡೆಯುತ್ತಾ ಇದೆ ಅನ್ನುವ ಮಾತನ್ನು ಹೇಳಿದ್ದಾರೆ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅವರು ದಾರುಣ ಪರಿಸ್ಥಿತಿಯಲ್ಲಿ ಇದ್ದಾರೆ, ಅವರ ಸ್ಥಿತಿ ಬಹಳ ಕೆಳಮಟ್ಟದಲ್ಲಿದೆ ಅನ್ನುವ ಮಾತನ್ನು ಹೇಳಿದ್ದಾರೆ. ನಾನೂ ಸಹ ಕಣ್ಣಾರೆ ನೋಡಿದ್ದೇನೆ. ನನಗೆ ಅವರ ಬಗ್ಗೆ ಬಹಳ ನಿಕಟ ಸಂಪರ್ಕ ಇದೆ. 30 ವರ್ಷದಿಂದಲೂ ಕೂಡ ನನ್ನ ಜೀವನದಲ್ಲಿ ಅವರ ಒಂದು ಸ್ಥಿತಿ ಬಗ್ಗೆ ಕಣ್ಣು ಮುಂದೆ ಕಟ್ಟಿದಂತೆ ನಿಂತಿದೆ. ಮಾನ್ಯ ಸದಸ್ಯರು ಈ ಬಗ್ಗೆ ಸಲಹೆಗಳನ್ನು ನೀಡಿದಾಗ ಆ ಪ್ರಾಥಮಿಕ ಪಾಠಶಾಲೆಗಳ ಮತ್ತು ವಿದ್ಯಾರ್ಥಿಗಳ ಒಂದು ಸಂಕಟವನ್ನು ನೋಡಿದಾಗ ಬಹುಶಃ ತೋಟದಲ್ಲಿ ಕುರಿಗಳನ್ನು ಕಟ್ಟಿದ ಹಾಗೆ ಹಾಕಿ ಪಾಠ ಮಾಡುತ್ತಿದ್ದುದು ನೋಡಿದ್ದೇನೆ. ಅವರು ಈ ಹಿಂದೆ ಆಡಳಿತ ನಡೆಸುತ್ತಿದ್ದಾಗಲೇ ಇಂತಹ ದುರಾಡಳಿತ ನಡೆದಿದೆ ಎಂದು ಹೇಳಿದರೆ ತಪ್ಪಾಗ ಲಾರದು. ಅವರು ಇದರ ಬಗ್ಗೆ ಏನನ್ನೂ ಸುಧಾರಣೆ ಮಾಡಲಿಲ್ಲ. ನಮ್ಮ ಸರ್ಕಾರ ಬಂದಮೇಲೆ ಆ ರೀತಿ ಯಾಗಿ ದೊಡ್ಡಿಗಳಲ್ಲಿ ಕುರಿಗಳನ್ನು ಕಟ್ಟದೇ ಇದ್ದ ಹಾಗೆ ಮಾಡಿ ಅದನ್ನು ಪ್ರೈಮರಿ ಶಾಲೆಯಲ್ಲೇ ಕಟ್ಟುವ ಹಾಗೆ ಮಾಡಿದ್ದೇವೆ. ಅಲ್ಲದೆ ಈ ಹಿಂದಿನ ಸರ್ಕಾರ ಈ ಶಿಕ್ಷಣ ಮಟ್ಟವನ್ನು ಏನು ಇಳಿಸಿದ್ದರೋ, ನಮ್ಮ ಸರ್ಕಾರ ಬಂದಮೇಲೆ ಅದನ್ನು ಉತ್ತಮ ಮಾಡಿದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆಗೆ ಹೇಳಬೇಕಾದರೆ ಹಳ್ಳಿಗಳಲ್ಲಿರುವ ಶಾಲೆಗಳು ಹಾಗೂ ಅಧ್ಯಾಪಕರ ಸಂಖ್ಯೆ ಇವೆರಡನ್ನೂ ಹೋಲಿಸಿ ನೋಡಿ ದಾಗ ಈ ಹಿಂದಿನ ಸರ್ಕಾರದಲ್ಲಿ ಯಾವ ರೀತಿಯಾದ ಒಂದು ವ್ಯವಸ್ಥೆ ಇತ್ತು ಎಂದರೆ 100–200 ಜನ ಇರತಕ್ಕಂಥಾ ಶಾಲೆಗಳಲ್ಲಿ 1–2 ಉಪಾಧ್ಯಾಯರುಗಳು ಇರುವ ಚಿತ್ರವನ್ನೂ ನೋಡಿದ್ದೇವೆ. ಅದೇ ಪಟ್ಟಣ ಗಳಲ್ಲಿರತಕ್ಕಂಥಾ ಶಾಲೆಗಳನ್ನು ಈ ರೀತಿಯಾಗಿ ನೋಡಿದಾಗ 40 ಕ್ಕೆ ಒಬ್ಬ ಉಪಾಧ್ಯಾಯರು ಇರತಕ್ಕಂಥಾ ಚಿತ್ರವನ್ನೂ ಸಹ ನೋಡಿದ್ದೇವೆ. ಇವರು ಮಾಡಿದ್ದಾರೆ ಎಂದು ಹೇಳಿದರೆ ಬಹುಶಃ ಇದನ್ನು ಎಲ್ಲರ ಒಪ್ಪಿಕೊಳ್ಳುತ್ತಾರೆ ಎಂದು ನನಗೆ ಅನಿಸುತ್ತದೆ. ಇದು ವಾಸ್ತವಾಂಶವಾದ ವಿಚಾರ.

ಹೀಗಿರುವಾಗ 100–200 ಹುಡುಗರು ಇರತಕ್ಕ ಶಾಲೆಗಳಲ್ಲಿ ಒಬ್ಬರು ಇಬ್ಬರು ಅಧ್ಯಾಪಕರು ಇದ್ದರೆ ಎಷ್ಟರಮಟ್ಟಿಗೆ ಪಾಠ ಪ್ರವಚನಗಳು ನಡೆಯುತ್ತವೆ ಎನ್ನತಕ್ಕದ್ದನ್ನು ಯೋಚನೆ ಮಾಡಿದರೆ ಬಹುಶಃ ಮಕ್ಕಳು ಮನೆಯಲ್ಲಿ ಗಲಾಟೆ ಮಾಡುತ್ತವೆಯೆಂದು ಸ್ಕೂಲಿಗೆ ಕಳುಹಿಸುತ್ತಿದ್ದಾರೆಂದು ನಾವು ಊಹಿಸಬೇಕಾಗುತ್ತದೆ. ಈ ರೀತಿಯಾಗಿ ಮಕ್ಕಳನ್ನು ತಂದೆತಾಯಿಗಳು ಸ್ಕೂಲಿಗೆ ಕಳುಹಿಸಿ ತಾವು ದೈನಂದಿನ ಕೆಲಸದಲ್ಲಿ ನಿರತರಾಗಬಹುದು ಎಂದು ನಾವು ತಿಳಿದುಕೊಳ್ಳಬೇಕಾಗಿದೆ. ಇಂಥ ಒಂದು ಸನ್ನಿವೇಶವನ್ನು ನಿರ್ಮಾಣ ನಿರ್ಮಾಣ ಮಾಡಿ ನಮ್ಮ ಮಕ್ಕಳು ಸರಿಯಾಗಿ ವಿದ್ಯಾಭ್ಯಾಸವನ್ನು ಮಾಡಲಿಕ್ಕೆ ಅವಕಾಶ ಕೊಡದೆ ಹಿಂದಿನವರು ಆಡಳಿತ ಮಾಡಿ ಹೋದರು. ಇವರು ನಮ್ಮ ಮಕ್ಕಳು ಸರಿಯಾಗಿ ವಿದ್ಯಾಭ್ಯಾಸವನ್ನು ಮಾಡಲಿ ಎಂದು ಒಳ್ಳೆಯ ದೃಷ್ಟಿಯನ್ನಿಟ್ಟುಕೊಂಡು ಶಾಲೆಗಳನ್ನು ಮಾಡಿದರು ಎಂದೂ ನಾನಂತೂ ಒಪ್ಪುವುದಿಲ್ಲ. ಇವತ್ತಿನ ದಿವಸ ಎಂಜಿನಿಯರಿಂಗ್ ಕಾಲೇಜು ಗಳಲ್ಲಿ, ಮೆಡಿಕಲ್ ಕಾಲೇಜುಗಳಲ್ಲಿ ಅಥವಾ ವೃತ್ತಿಪರ ಶಿಕ್ಷಣವನ್ನು ಕೊಡುವಾಗ ಅಂಕೆಗಳ ಆಧಾರದ ಮೇಲೆ ಪ್ರವೇಶ ದೊರೆಯುತ್ತಿದೆ. ಎಲ್ಲಾ ಮಟ್ಟದಲ್ಲಿಯೂ ಸಹ ಅಂಕಗಳ ಆಧಾರದ ಮೇಲೆಯೇ ಪ್ರವೇಶಾವಕಾಶ ದೊರೆಯುತ್ತಿದೆ. ಇದರಲ್ಲಿ ರೋಸ್ಟರ್ ಸಿಸ್ಟಂ ಕೂಡ ಮಾಡಿಕೊಂಡಿದ್ದಾರೆ. ಎಸ್.ಸಿ. ಎಸ್.ಟಿ. ಮತ್ತು ಬಿ.ಸಿ.ಎಂ. ವರ್ಗದಲ್ಲಿಯೂ ಸಹ ಮೆರಿಟ್ ಆಧಾರದ ಮೇಲೆ ತೀರ್ಮಾನ ಮಾಡುತ್ತಾರೆ. ಎಲ್ಲಾ ವರ್ಗದವರಿಗೂ ಅವಕಾಶವನ್ನು ಕೊಡುತ್ತೇವೆಂದು ಹೇಳಿ, ಎಲ್ಲಾ ವರ್ಗದಲ್ಲಿಯೂ ಮೆರಿಟ್ ಆಧಾರದ ಮೇಲೆ ಪ್ರವೇಶವನ್ನು ಕೊಡತಕ್ಕದ್ದು ಜಾರಿಗೆ ಬಂದಿದೆ. ಉದಾಹರಣೆಗೆ ನಾನು ಇಲ್ಲಿ ಅಂಶವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಎಸ್.ಸಿ. ವರ್ಗದಲ್ಲಿಯೂ ಪ್ರವೇಶ ಸಿಕ್ಕಬೇಕಾದರೆ ಅವರ ಮಕ್ಕಳಲ್ಲಿ ಯಾವ ಮಕ್ಕಳು ಹೆಚ್ಚಿನ ಅಂಕಗಳನ್ನು ಪಡೆದಿದ್ದಾರೆ ಅವರಿಗೆ ಪ್ರವೇಶ ದೊರೆಯುವ ಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಈ ವರ್ಗದಲ್ಲಿಯೂ ಸಹ ನಮ್ಮ ಹಳ್ಳಿಗಾಡಿನ ಮಕ್ಕಳಿಗೆ ಅದೇ ಕೋಮಿನ ಮಕ್ಕಳಿಗೆ ಪ್ರವೇಶ ದೊರೆಯುವುದಿಲ್ಲ. ಪಟ್ಟಣದಲ್ಲಿರತಕ್ಕ ದೊಡ್ಡ ಅಧಿಕಾರಿಗಳ ಮಕ್ಕಳು ಯಾವ ಒಂದು ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿರುತ್ತಾರೋ ಆ ವ್ಯವಸ್ಥೆಯಲ್ಲಿ ಆ ಪರಿಸರದಲ್ಲಿ ನಮ್ಮ ಹಳ್ಳಿಯ ಎಸ್.ಸಿ. ಮಕ್ಕಳು ವಿದ್ಯಾಭ್ಯಾಸ ಮಾಡಿದ್ದಾರೆಯೇ, ಅವರುಗಳು ತೆಗೆದಿರತಕ್ಕ ಅಂಕಗಳನ್ನು ನಮ್ಮ ಹಳ್ಳಿಯ ಮಕ್ಕಳು ತೆಗೆಯುವುದಕ್ಕೆ ಸಾಧ್ಯವೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಇದೇ ರೀತಿಯಲ್ಲಿ ನಮ್ಮ ಆರ್ಥಿಕ ಸ್ಥಿತಿಯ ಬಗ್ಗೆ ನಾವು ಸ್ವಲ್ಪ ಅವಲೋಕನ ಮಾಡಬೇಕಾಗುತ್ತದೆ. ಇವೆಲ್ಲದರ ಜೊತೆಗೆ ನಾವು ಪತ್ರಿಕೆಗಳಲ್ಲಿ ನೋಡುತ್ತಿರುವಂತೆ ಪ್ರಶ್ನೆ ಪತ್ರಿಕೆಗಳು ಪಟ್ಟಣದ ಮಕ್ಕಳಿಗೆ ದೊರೆಯುತ್ತವೆ, ಮತ್ತು ಇದನ್ನೆಲ್ಲಾ ಪರೀಕ್ಷೆಯ ಫಲಿತಾಂಶಗಳನ್ನು ಪಡೆಯುವಲ್ಲಿಯೂ ಸಹ ಮ್ಯಾನ್ಯುಪ್ಯುಲೇಷನ್ ನಡೆಯುತ್ತಿದೆ. ಪಟ್ಟಣ ದವರು ಉಪಯೋಗ ಮಾಡಿಕೊಂಡು 100ಕ್ಕೆ 80 ಅಂಕಗಳನ್ನು, 90 ಅಂಕಗಳನ್ನು ಪಡೆದುಕೊಂಡು ಎಲ್ಲಾ ರಂಗಗಳಲ್ಲಿಯೂ ಮುಂದೆ ಬಂದರೆ ನಮ್ಮ

ಮಕ್ಕಳು ಇದು ಯಾವುದನ್ನೂ ತಿಳಿಯದೆ. ಒಳ್ಳೆಯ ಪರಿಸರ ಇಲ್ಲದೆ ಮುಂದೆ ಬರುವುದಕ್ಕೆ ಹೇಗೆ ಸಾಧ್ಯ ? ಹೆಚ್ಚಿನ ಅಂಕಗಳನ್ನು ಪಡೆಯುವುದಂತೂ ಕನಸಿನ ಮಾತು. ಇವರು ಕಷ್ಟಪಟ್ಟು ದುಡಿಯಬೇಕು. ಹೊಲದಲ್ಲಿ ಕೆಲಸ ಮಾಡಬೇಕು, ಕೆಲಸ ಮಾಡತಕ್ಕ ತಂದೆತಾಯಿಗಳಿಗೆ ಬುತ್ತಿಯನ್ನು ತೆಗೆದುಕೊಂಡು ಹೋಗಬೇಕು ಮತ್ತು ಮನೆಯಲ್ಲಿ ಅಡಿಗೆ ಮಾಡಬೇಕು, ದನ ಕಾಯಬೇಕು, ಮತ್ತೆ ಶಾಲೆಗೂ ಹೋಗಬೇಕು. ಇಂಥ ಒಂದು ಪರಿಸರವನ್ನು ಅಲ್ಲಿ ನಿರ್ಮಾಣ ಮಾಡಿರುವುದು ಒಂದು ದುರುದ್ದೇಶದಿಂದ ಎಂದು ನಾನಾದರೂ ಬಹಳ ನೊಂದು ಹೇಳಬೇಕಾಗಿದೆ. ಸರ್ಕಾರದವರು ಈ ವಿಷಯದ ಬಗ್ಗೆ ಬೇಕಾದರೆ ಒಂದು ಸರ್ವೆ ಮಾಡಿ ನೋಡಿದರೂ ಸಹ ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳು, ದೊಡ್ಡ ದೊಡ್ಡ ಅಧಿಕಾರಿಗಳಾಗಿದ್ದಾರೆ. ರಾಜಕಾರಣಿಗಳ ಮಕ್ಕಳು ದೊಡ್ಡ ದೊಡ್ಡ ಅಧಿಕಾರಿಗಳಾಗಿದ್ದಾರೆ. ಮತ್ತು ಇತರೆಯವರು ಉನ್ನತ ವರ್ಗದಲ್ಲಿರುವವರು ಅವರ ಮಕ್ಕಳನ್ನು ಉನ್ನತ ವರ್ಗಕ್ಕೆ ಕಳುಹಿಸಿರುತ್ತಾರೆ. ನಮ್ಮ ರೈತರ ಮಕ್ಕಳು ಮಾತ್ರ ಇಲ್ಲಿ ಜವಾನರಾಗಿದ್ದಾರೆ. ಇಲ್ಲಿ ಕೆಲಸ ಮಾಡತಕ್ಕ ಜವಾನರೆಲ್ಲಾ ನಮ್ಮ ರೈತರ ಮಕ್ಕಳು. ನಮ್ಮ ರೈತರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಜವಾನರಾಗಿರುವುದಕ್ಕೆ ಇದೇ ಸಾಕ್ಷಿ. ಇದಕ್ಕೆ ಕಾರಣ ನಮಗೆ ದೊರೆತಿರತಕ್ಕ ತಳಹದಿ ಏನು ಇದೆ ಅದು ಸರಿಯಾಗಿಲ್ಲ. ಪಟ್ಟಣಗಳಲ್ಲಿ ಮೇಲ್ದರ್ಜೆಯ ಜನರು ಸೇರಿಕೊಂಡು ನಮ್ಮನ್ನು ಶೋಷಣೆ ಮಾಡುತ್ತಿದ್ದಾರೆ. ಎಲ್ಲಾ ಜನಾಂಗದವರೂ ಇಲ್ಲಿ ಸೇರಿಕೊಂಡು ಹಳ್ಳಿಯವರನ್ನು ಅಲ್ಲಿರುವ ಜಿಲ್ಲಾ ಜನಾಂಗದವರನ್ನು ಶೋಷಣೆ ಮಾಡುತ್ತಿದ್ದಾರೆ. ಎಲ್ಲಾ ರಂಗದಲ್ಲಿಯೂ ಈ ರೀತಿಯ ಶೋಷಣೆ ನಡೆದುಕೊಂಡು ಬಂದಿದೆ. ಹುದ್ದೆಗಳನ್ನು ಪಡೆಯುವ ವಿಷಯದಲ್ಲಾಗಲೀ, ವಿದ್ಯಾಭ್ಯಾಸಕ್ಕೆ ಪ್ರವೇಶವನ್ನು ಪಡೆಯುವ ವಿಷಯದಲ್ಲಾಗಲೀ, ರಾಜಕೀಯ ರಂಗದಲ್ಲಿ ಆಗಲೀ ಎಲ್ಲಾ ರಂಗದಲ್ಲಿಯೂ ಈ ಮೇಲ್ದರ್ಜೆಯ ಜನರು ನಮ್ಮನ್ನು ಶೋಷಣೆ ಮಾಡಿಕೊಂಡು ಬಂದಿದ್ದಾರೆ, ಯಾವ ರೀತಿಯಲ್ಲಿಯೂ ಹಳ್ಳಿಯ ಜನ ಇವರೊಡನೆ ಸ್ಪರ್ಧೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ, ಸ್ಪರ್ಧೆ ಮಾಡತಕ್ಕ ಶಕ್ತಿಯನ್ನು ಇವರು ತಲುಪುವುದಕ್ಕೆ ಅವಕಾಶ ಕೊಟ್ಟಿಲ್ಲ. ಆದ್ದರಿಂದ ನನ್ನ ಸಲಹೆ ಎಂದರೆ, ಇಲ್ಲಿರತಕ್ಕ ಶಾಸಕ ವರ್ಗದವರೂ ಸಹ ಇಂಥ ಮನೋಭಾವನೆಯನ್ನು ತಾಳದೆ ಹಳ್ಳಿಯ ಜನರ ಶಿಕ್ಷಣ ಮಟ್ಟವನ್ನು ಸುಧಾರಿಸುವುದಕ್ಕೆ ತಕ್ಕ ಪ್ರೋತ್ಸಾಹ ಕೊಡಬೇಕು. ಇನ್ನೊಂದು ಅಂಶವನ್ನು ನಾನು ಉದಾಹರಣೆಯಾಗಿ ಹೇಳುವುದಾದರೆ, ಹಳ್ಳಿಯಲ್ಲಿರತಕ್ಕ ಬ್ರಾಹ್ಮಣ ಜನಾಂಗದವರನ್ನು ತೆಗೆದುಕೊಂಡರೂ ಸಹ ಅವರು ಪಟ್ಟಣದ ಬ್ರಾಹ್ಮಣ ಮಕ್ಕಳೊಂದಿಗೆ ಸ್ಪರ್ಧೆ ಮಾಡತಕ್ಕ ಅವಕಾಶ ಇಲ್ಲ, ಇದಕ್ಕೆ ಅವರಿಗೆ ತಳಹದಿಯೂ ಇಲ್ಲ, ಹಳ್ಳಿಯಲ್ಲಿ ಇವರು ಏನು ತಮ್ಮ ಕಸುಬನ್ನು ಮಾಡಿಕೊಂಡಿರುತ್ತಾರೋ ಅದಕ್ಕೆ ಸ್ಪರ್ಧೆ ಮಾಡಲಾರದೆ ವಾಪಸ್ ಹೋಗಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಬಹು ಮುಖ್ಯವಾಗಿ ಹಳ್ಳಿಯ ಜನರಿಗೆ ಪ್ರಾಥಮಿಕ ವಿದ್ಯಾಭ್ಯಾಸದ ಗುಣಮಟ್ಟ ಹೆಚ್ಚಿಸುವ ರೀತಿಯಲ್ಲಿ ಸರ್ಕಾರದವರು ನೋಡಿಕೊಳ್ಳಬೇಕು. ಇಲ್ಲದೇ ಹೋದರೆ ಪಟ್ಟಣದ ಮಕ್ಕಳೊಂದಿಗೆ ಇವರು ಸ್ಪರ್ಧೆ ಮಾಡದೆ ಯಾವ ರೀತಿಯಲ್ಲೂ ಮುಂದೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಹಳ್ಳಿಯಲ್ಲಿರತಕ್ಕ ಶಾಲೆಗಳಲ್ಲಿ ಈಗಿರುವ ಉಪಾಧ್ಯಾಯರ ಸಂಖ್ಯೆ ಬಹಳ ಕಡಿಮೆ. ಇರುವಂಥ ಉಪಾಧ್ಯಾಯರನ್ನು ಸರ್ಕಾರದವರು ವರ್ಷದಲ್ಲಿ ಆರು ತಿಂಗಳು ಕ್ಯಾಟಲ್ ಸೆನ್ಸಸ್. ಚುನಾವಣೆ, ಮತ್ತಿತರ ಕೆಲಸಗಳಿಗೆ ನೇಮಕ ಮಾಡಿಕೊಂಡು ಅವರು ಅಲ್ಲಿಯೂ ಸರಿಯಾಗಿ ಪಾಠ ಪ್ರವಚನೆಗಳನ್ನು ಮಾಡದೆ ಇರುವ ರೀತಿಯಲ್ಲಿ ಇದುವರೆಗೂ ಹೇಳುವವರು ಯಾರೂ ಇಲ್ಲದೆ, ಕೇಳುವವರು ಯಾರೂ ಇಲ್ಲದೆ ನಡೆದುಕೊಂಡು ಬಂದಿದ್ದಾರೆ. ವರ್ಷದಲ್ಲಿ ಅರ್ಧ ಭಾಗ ಸ್ಕೂಲುಗಳನ್ನು ಮುಚ್ಚಿಕೊಂಡು ಮಕ್ಕಳಿಗೆ ಪಾಠ ಮಾಡದೆ ಇರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ಇಲ್ಲಿ ನನ್ನ ಸಲಹೆ ಎಂದರೆ. ಹೆಚ್ಚಿನ ಸಂಖ್ಯೆಯಲ್ಲಿ ಹಳ್ಳಿಯ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡಬೇಕು, ಅದೂ ಒಳ್ಳೆಯ ಉಪಾಧ್ಯಾಯರನ್ನು ನೇಮಕ ಮಾಡಬೇಕು. ಇನ್ನೊಂದು ಅಂಶವನ್ನು ನಾನು ಸಭೆಯ ಗಮನಕ್ಕೆ ಇಲ್ಲಿ ತರಬೇಕಾಗಿದೆ. ಪಟ್ಟಣಗಳಿಗೆ ಹತ್ತಿರದಲ್ಲಿರತಕ್ಕ ಹಳ್ಳಿಗಳ ಉಪಾಧ್ಯಾಯರು ಟೌನಿನಲ್ಲಿ ವಾಸ ಮಾಡಿಕೊಂಡು ಬಸ್‌ಗಳನ್ನು ಕಾಯ್ದುಕೊಂಡು ಸಮಯಕ್ಕೆ ಸರಿಯಾಗಿ ಶಾಲೆಗೆ ಬರದೆ ಉದಾಸೀನತೆಯನ್ನು ತೋರಿರುವುದು ನಮ್ಮಗಳ ಗಮನಕ್ಕೆ ಬಂದಿರುತ್ತದೆ. ಹತ್ತು ಗಂಟೆಗೆ ಶಾಲೆಯನ್ನು ತೆಗೆಯಬೇಕಾದರೆ ಒಂದು ಗಂಟೆಯಾದರೂ ತೆಗೆದಿರುವುದಿಲ್ಲ. ಐದು ಗಂಟೆಯಲ್ಲಿ ಶಾಲೆಯನ್ನು ಮುಚ್ಚಬೇಕಾದರೆ ಮೂರು ಗಂಟೆಗೇ ಶಾಲೆಯನ್ನು ಮುಚ್ಚಿ ಇವರುಗಳನ್ನು ಬಸ್‌ಗಾಗಿ ಕಾಯುತ್ತಿರುವುದನ್ನು ನಾವು ಕಂಡಿದ್ದೇವೆ. ಈ ವ್ಯವಸ್ಥೆಯಲ್ಲಿ ನಮ್ಮ ಹಳ್ಳಿಯ ಮಕ್ಕಳು ಯಾವ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಬೇಕು ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗಿದೆ. ಈಗತಾನೇ ನಮ್ಮ ಹಳ್ಳಿಯ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಬಹಳ ಕಳಕಳಿಯಿಂದ ಮಾತನಾಡಿದ ಸದಸ್ಯರು ಅವರು ಅಧಿಕಾರದಲ್ಲಿರುವಾಗ ಸ್ವಲ್ಪ ಮನಸ್ಸು ಮಾಡಿದ್ದರೆ ನಾವು ಈ ಸ್ಥಿತಿಯಲ್ಲಿ ಇರುತ್ತಿರಲಿಲ್ಲ. ರೈತರು, ಕಾರ್ಮಿಕರು, ಮತ್ತು ಬಡವರು ಇವರುಗಳಿಗೆ ಈ ರೀತಿಯಾದ ಅನ್ಯಾಯವಾಗಿರುವಾಗ ಅದೂ ವಿದ್ಯಾಭ್ಯಾಸದಲ್ಲಿ ಆಗಿರುವಾಗ ಇದನ್ನು ಸರಿಪಡಿಸಬೇಕಾದ್ದು ಮತ್ತು ಒಳ್ಳೆಯ ವಿದ್ಯಾಭ್ಯಾಸವನ್ನು ಅವರಿಗೆ ಒದಗಿಸಿಕೊಡತಕ್ಕದ್ದು ತಮ್ಮ ಆದ್ಯ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ವಯಸ್ಕರ ಶಿಕ್ಷಣದ ಬಗ್ಗೆ ನಾನು ಬಹಳ ವರ್ಷಗಳಿಂದ ಇದನ್ನು ನೋಡುತ್ತಿದ್ದೇನೆ. ಕಳೆದ 25–30 ವರ್ಷಗಳಿಂದ ಇದರಲ್ಲಿ ನನಗೆ ಬಹಳ ಆಳವಾದ ಅನುಭವ ಇದೆ ನಾನು ಅಡ್ಲ್ಟ್ ಎಜುಕೇಷನ್ ಕೌನ್ಸಿಲ್‌ನಲ್ಲಿ

ಕೆಲವು ವರ್ಷಗಳ ಕಾಲ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ ಹಿಂದಿನ ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸ, ವಯಸ್ಕರ ವಿಧಾಭ್ಯಾಸ ಎಂದು ಹೇಳಿಕೊಂಡು ಒಂದು ನಾಟಕ ಮಾಡಿದರು ಎಂದು ನನಗನ್ನಿಸುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೆ: ಹಳ್ಳಿಯಲ್ಲಿ ಯಾರೂ ವಿದ್ಯಾವಂತರು ಇರಕೂಡದು, ಹಳ್ಳಿಯವರು ವಿದ್ಯಾವಂತರಾದರೆ ನಮ್ಮನ್ನು ಪ್ರತಿಭಟನೆ ಮಾಡುತ್ತಾರೆ. ಇವರು ದಡ್ಡರಾಗಿಯೇ ಉಳಿಯಬೇಕು, ದಡ್ಡರಾದರೆ ನಮಗೆ ವೋಟು ಹಾಕುತ್ತಾರೆ, ಯಾವುದೋ ಒಂದು ಫೋಟೋ ತೋರಿಸಿದರೆ ಓಟು ಹಾಕುತ್ತಾರೆ ಎನ್ನುವಂಥ ದುರುದ್ದೇಶವನ್ನು ಇವರು ಇಟ್ಟುಕೊಂಡು ಹಿಂದೆ ಆಡಳಿತ ಮಾಡಿದಂಥವರು ನಮ್ಮನ್ನು ಕೆಳಗೆ ತುಳಿದುಬಿಟ್ಟಿದ್ದಾರೆ. 35 ವರ್ಷಗಳಲ್ಲಿ ಈ ವಯಸ್ಕರ ಶಿಕ್ಷಣದ ಬಗ್ಗೆ ಇವರು ಏನು ಮಾಡಿದ್ದಾರೆ? ಇದರ ಬಗ್ಗೆ ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದಾಗ ರಾಜ್ಯದಲ್ಲಿ ಕೇವಲ 28–30 ಪರ್ಸೆಂಟ್ ಅಕ್ಷರಸ್ಥರು ಇದ್ದಾರೆ, ಉಳಿದವರೆಲ್ಲರೂ ಅಂದರೆ ಸುಮಾರು 70 ಪರ್ಸೆಂಟ್ ಜನರು ಅನಕ್ಷರಸ್ಥರು ಇದ್ದಾರೆ. ಇದನ್ನು ನೋಡಿದಾಗ ಎಲ್ಲಾ ಕನ್ನಡಿಗನೂ ಸಹ ತಲೆ ತಗ್ಗಿಸಬೇಕಾದ ಪರಿಸ್ಥಿತಿ ಇದೆಯೆಂದು ನಾನು ಹೇಳಬೇಕಾಗಿದೆ. ಇದಕ್ಕೆ ಕಾರಣರು ಯಾರು? ಇದರ ಬಗ್ಗೆ ಪ್ರಯತ್ನ ಪಟ್ಟರೆ ನೂರಕ್ಕೆ ನೂರರಷ್ಟು ವಿದ್ಯಾವಂತರಾಗುತ್ತಾರೆ. ಕಂಪಲ್ಸರಿ ಎಜುಕೇಷನ್ ಒಂದು ಕಡೆ ಇದೆ, ಇನ್ನೊಂದು ಕಡೆ ಅಡಲ್ಟ್ ಎಜುಕೇಷನ್ ಇದೆ. ಇವೆರಡೂ ಸೇರಿದಾಗ ಕೇವಲ 35 ಪರ್ಸೆಂಟ್ ಅಂದರೆ ಇದರ ಹಿನ್ನೆಲೆಯಲ್ಲಿ ದುರುದ್ದೇಶ ಇದೆಯೇ ಎನ್ನುವ ಭಾವನೆ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಚಿಕ್ಕಮಗಳೂರಿನಲ್ಲಿರುವ ಪಾಲಿಟೆಕ್ನಿಕ್ಕನ್ನು ತೆಗೆದುಕೊಂಡರೆ ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ಇವತ್ತಿನ ದಿವಸ ಹಳ್ಳಿಯ ಮಕ್ಕಳಿಗೆ ಒಂದು ಸೀಟನ್ನೂ ಕೊಡಿಸಲಿಕ್ಕೆ ನಾನು ಶಾಸಕನಾಗಿ ಆಗಲಿಲ್ಲ. 45 ರಷ್ಟು ಅಂಕಗಳು ಇದ್ದರೆ ಪ್ರವೇಶಾವಕಾಶ ಕೊಡಬೇಕು ಎಂದು ಹೇಳಿದ್ದೀರಿ. ಆದರೆ ಒಂದೆರಡು ಸಾವಿರ ಅರ್ಜಿಗಳು ಬಂದಾಗ ಯಾವ ರೀತಿ ಕರೆಯಬೇಕು? ಸಂಬಂಧಪಟ್ಟ ಅಧಿಕಾರಿಗಳು ಯೋಚನೆ ಮಾಡಿ 1:10 ಕರೆಯಿರಿ ಎಂದು ಹೇಳುತ್ತಾರೆ. ಅಂಕೆಗಳ ಆಧಾರದ ಮೇಲೆ ಕರೆಯಬೇಕು. 60–65 ಪರ್ಸೆಂಟ್ ಇರತಕ್ಕವರಿಗೆ ಇಂಟರ್‌ವ್ಯೂಗೆ ಹೋಗತಕ್ಕ ಅವಕಾಶವಿದೆ. ಹೀಗಾದರೆ ಹಳ್ಳಿಯ ಮಕ್ಕಳಿಗೆ ಯಾವ ರೀತಿ ಅವಕಾಶ ಸಿಗುತ್ತದೆ? ಹಳ್ಳಿಯ ಮಕ್ಕಳಿಗೆ 60–65 ಪರ್ಸೆಂಟ್ ಅಂಕಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ? 45 ಪರ್ಸೆಂಟ್ ಇದ್ದರೆ ಸೀಟು ಕೊಡಿ ಎಂದು ವ್ಯವಸ್ಥೆ ಮಾಡಿದ್ದೀರಿ. ಹರಿಜನ–ಗಿರಿಜನರು 30–35 ಪರ್ಸೆಂಟ್ ತೆಗೆದಿದ್ದರೆ ಅವಕಾಶ ಕೊಟ್ಟಿದ್ದೇವೆಂದು ಹೇಳಿದಿರಿ. ಆದರೆ ಇಂಟರ್‌ವ್ಯೂಗೆ ಕರೆಯುವಾಗ 45 ಪರ್ಸೆಂಟ್ ಇರತಕ್ಕವರೆಲ್ಲರನ್ನೂ ಇಂಟರ್‌ವ್ಯೂಗೆ ಕರೆಯಬೇಕೇ? 100–200 ಅರ್ಜಿಗಳು ಬಂದಾಗ ಕರೆಯಬಹುದು, ಸಾವಿರಾರು ಅರ್ಜಿಗಳು ಬಂದಾಗ 60–70 ಪರ್ಸೆಂಟ್ ಇರತಕ್ಕವರನ್ನು ಮಾತ್ರ ಕರೆಯಬೇಕಾಗುತ್ತದೆ. ಹೀಗಾಗಿ ಹಳ್ಳಿಯ ಜನರಿಗೆ ಮಹತ್ತರವಾದ ಅನ್ಯಾಯ ಮಾಡಿದ್ದಾರೆ. ಇವತ್ತಿನ ದಿವಸ ಹಳ್ಳಿಯಲ್ಲಿ ನೂರಕ್ಕೆ 80 ಜನ ಇದ್ದೇವೆ. ಆದುದರಿಂದ ತಾಂತ್ರಿಕ ಕಾಲೇಜುಗಳಲ್ಲಾಗಲೀ, ವೈದ್ಯಕೀಯ ಕಾಲೇಜುಗಳಲ್ಲಾಗಲೀ, ಪಾಲಿಟೆಕ್ನಿಕ್‌ನಲ್ಲಾಗಲೀ ಹಳ್ಳಿಯವರಿಗೆ 50 ಭಾಗವಾದರೂ ಕೊಟ್ಟೇ ತೀರಬೇಕು; ಕೊಡದೇಹೋದರೆ ರೈತರು ಪ್ರತಿಭಟನೆ ಮಾಡುವ ಮಟ್ಟಕ್ಕೆ ಹೋಗುತ್ತಾರೆ. ಅದಕ್ಕೆ ಅವಕಾಶ ನಮ್ಮ ಮಂತ್ರಿಗಳು ಕೊಡುವುದು ಬೇಡ. ನಮ್ಮ ಸರ್ಕಾರ ಅದಕ್ಕೆ ಅವಕಾಶ ಕೊಡುವುದು ಬೇಡ, ನಮ್ಮ ಮಂತ್ರಿಗಳು ಅವಕಾಶ ಕೊಡುವುದಿಲ್ಲ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. 100 ಕ್ಕೆ 80 ಭಾಗ ರೈತಕಾರ್ಮಿಕರು ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ. ಆದ್ದರಿಂದ ನಮಗೆ 100 ಕ್ಕೆ 80 ರಷ್ಟು ಅವಕಾಶ ಕೇಳತಕ್ಕ ಹಕ್ಕು ಇದೆ. ಆದರೆ ಒಂದು ಸೌಹಾರ್ದತೆಯ ದೃಷ್ಟಿಯಿಂದ, ಯಾರೇ ಆಗಲಿ ನಮ್ಮಲ್ಲಿ ದ್ವೇಷ ಮಾಡುವುದು ಬೇಡ ಎನ್ನತಕ್ಕ ದೃಷ್ಟಿಯಿಂದ 100 ಕ್ಕೆ 50 ಭಾಗವನ್ನಾದರೂ ಹಳ್ಳಿಯ ಜನರಿಗೆ ಮೀಸಲಾತಿ ಕೊಡಬೇಕು. ಎಲ್ಲಾ ಶಾಲಾ ಕಾಲೇಜುಗಳಲ್ಲೂ ಪ್ರವೇಶಾವಕಾಶ ಮತ್ತು ಕೆಲಸವಲ್ಲೂ ಕೊಡಬೇಕು. ಕೆಲಸಕ್ಕೆ ಇಂಟರ್‌ವ್ಯೂಗೆ ಕರೆದಾಗ ಅವರು ಪರೀಕ್ಷೆಯಲ್ಲಿ ಎಷ್ಟು ಅಂಕೆಗಳನ್ನು ತೆಗೆದಿರುತ್ತಾರೋ ಆ ಅಂಕೆಗಳ ಆಧಾರದ ಮೇಲೆ ಕೆಲಸ ಕೊಡಲಿಕ್ಕೆ ಪ್ರಯತ್ನಮಾಡುತ್ತೀರಿ. ಆಗ ಹಳ್ಳಿಯವರಿಗೆ ಏನೂ ಅವಕಾಶ ಸಿಕ್ಕುವುದಿಲ್ಲ. ಹೀಗಾಗಿ ಹಳ್ಳಿಯವರು ನೂರಕ್ಕೆ ನೂರು ವಂಚಿತರಾಗಿದ್ದಾರೆ. ಹಳ್ಳಿಯವರು ಎಲ್ಲಾ ಮಾಡುತ್ತಾರೆ, ಹೈಸ್ಕೂಲು ಓದುತ್ತಾರೆ, ಮೆಟ್ರಿಕ್ಯುಲೇಷನ್ ಪಾಸ್ ಮಾಡುತ್ತಾರೆ, ಪದವೀಧರರಾಗುತ್ತಾರೆ, ಎಲ್ಲೂ ಕೂಡ ಇಂಟರ್‌ವ್ಯೂಗೆ ಬರುವುದಿಲ್ಲ. ಅಂತಹ ರೈತನ ಮಗ ಇವತ್ತು ಏನು ಮಾಡಬೇಕು? ಪದವೀಧರನಾಗಿರುತ್ತಾನೆ, ಅವರು ಹಳ್ಳಿಯಲ್ಲಿ ಹೊಲದಲ್ಲಿ ಹೋಗಿ ಬೇಸಾಯ ಮಾಡುವುದಕ್ಕೆ ಅವಮಾನ. ಅವನು ಅಲ್ಲಿ ಇಲ್ಲಿ ಸುತ್ತಾಡಿ ನ್ಯಾಯವೋ ಅನ್ಯಾಯವೋ ಪ್ರತಿಭಟನೆ ಮಾಡುತ್ತಾನೆ; ಮಾಡದೇ ವಿಧಿಯಿಲ್ಲ. ಇವತ್ತಿನ ದಿವಸ ನಮ್ಮ ರೈತ ಸ್ನೇಹಿತರು ಕೊಟ್ಟ ಸಾಲ ಕೊಡುವುದಿಲ್ಲ., ಆ ಸಾಲ ಬಿಡಿ ಎಂದು ಹೇಳುತ್ತಾರೆ. ಇದನ್ನು ನಾವು ಯಾರೂ ಕೇಳುವುದೇ ಬೇಕಾಗಿಲ್ಲ. ನಾವು ಭಿಕ್ಷೆ ಬೇಡಬೇಕಾಗಿಲ್ಲ. ರೈತರೂ ಯಾವತ್ತೂ ಮೇಲಿರಬೇಕು., ಕೈಚಾಚಬೇಕಾಗಿಲ್ಲ. ರೈತರು ಅನ್ನ ಕೊಡತಕ್ಕವರು, ಸರ್ಕಾರವನ್ನು ರಚನೆ ಮಾಡತಕ್ಕವರು. ಹಾಗಿರುವಾಗ ರೈತ ಯಾವತ್ತೂ ಕೂಡ ಕೈ ಚಾಚಬೇಕಾಗಿಲ್ಲ. ತೆರಿಗೆ ಕೊಟ್ಟು ಸರ್ಕಾರ ನಡೆಸತಕ್ಕವರು ನಾವು ನಮಗೆ ಕೇಳತಕ್ಕ ಹಕ್ಕು ಇದೆ, ಶಕ್ತಿ ಇದೆ. ಇದುವರೆಗೆ ಏನು ವಂಚಿತರಾಗಿದ್ದಾರೋ ಮುಂದೆ ಆ ರೀತಿ ವಂಚಿತರಾಗುವುದಕ್ಕೆ ತಾವು ಅವಕಾಶ ಕೊಡಬಾರದು ಎಂದು ನಾನು ತಮ್ಮಲ್ಲಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ತಾವು ಸಾಕಷ್ಟು ಹೈಸ್ಕೂಲುಗಳನ್ನು ಕೊಟ್ಟಿದ್ದೀರಿ, 250–300 ಹೈಸ್ಕೂಲುಗಳನ್ನು ಕೊಟ್ಟಿ

ದ್ದೀರಿ, ಒಂದೇ ವರ್ಷದಲ್ಲಿ ಇಷ್ಟು ಹೈಸ್ಕೂಲುಗಳನ್ನು ಕೊಟ್ಟಿದ್ದೀರಿ, ಹಿಂದಿನ ಸರ್ಕಾರ ಯಾವಾಗಲೂ ಕೂಡ ಇಷ್ಟು ಹೈಸ್ಕೂಲುಗಳನ್ನು ಕೊಟ್ಟಿರಲಿಲ್ಲ. ಪ್ರೈವೇಟಾಗಿ ಹೈಸ್ಕೂಲುಗಳನ್ನು ತೆಗೆಯುವುದಕ್ಕೆ ಅವಕಾಶ ಕೊಟ್ಟಿದ್ದೀರಿ; ಸರ್ಕಾರಿ ಹೈಸ್ಕೂಲುಗಳಿಗೂ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ಹಳ್ಳಿಯ ಮಿತ್ರರ ಪರವಾಗಿ ಮತ್ತು ವೈಯುಕ್ತಿಕವಾಗಿ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಹರಿಜನರು ಹೈಸ್ಕೂಲುಗಳನ್ನು ತೆಗೆಯುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಮಾನ್ಯ ಖಾರ್ಗೆಯವರು ಒಂದು ಕಡೆ ಹೇಳಿದರು. ಏನೆಂದರೆ, ಜಾಬ್ ಓರಿಯೆಂಟೆಡ್ ಕೋರ್ಸಸ್ ಹೆಚ್ಚಿಗೆ ತೆರೆಯಬೇಕು ಎಂದು ಹೇಳಿದರು. ಇದು ಉತ್ತಮವಾದ ಸಲಹೆ. ಅವರು ಸಲಹೆ ಕೊಡುವ ಮಾರ್ಗದಲ್ಲಿದ್ದಾರೆ. ಅವರಿಗೆ ಈಗ ಜ್ಞಾನೋದಯವಾಗಿದೆ, ಹಿಂದೆ ಮಾಡಿದ ಕರ್ಮದ ಫಲದಿಂದ ಅಲ್ಲಿದ್ದಾರ, ಈಗಲಾದರೂ ಒಳ್ಳೆಯ ಕಾರ್ಯ ಮಾಡಿದರೆ ಸ್ವಾಗತ. ಒಳ್ಳೆಯ ಕಾರ್ಯ ಮಾಡಿ, ಜನಗಳಿಗೆ ಒಳ್ಳೆಯದು ಮಾಡತಕ್ಕ ಸದ್ಭಾವನೆ ಬಂದು ಒಳ್ಳೆಯ ಬುದ್ಧಿ ಮೂಡಿದಾಗ ಒಳ್ಳೆಯ ಕೆಲಸಗಳು ಆಗುತ್ತವೆ. ಆದರೆ ಅವರು ಮಾಡಿದ ಕರ್ಮಫಲದಿಂದ ಈಗ ಜ್ಞಾನೋದಯವಾಗುತ್ತಿದೆ; ಸಂತೋಷ. ಅವರು ಜಾಬ್ ಓರಿಯೆಂಟೆಡ್ ಕೋರ್ಸಸ್ ತೆರೆಯಬೇಕು ಎಂದು ಹೇಳಿದರು. ನಾವು ದನಗಳನ್ನು ಸಾಕುತ್ತೇವೆ. ಕುರಿಗಳನ್ನು ಸಾಕುತ್ತೇವೆ, ಕೋಳಿಗಳನ್ನು ಸಾಕುತ್ತೇವೆ ಮತ್ತು ಇತರೆ ಕೆಲಸ ಮಾಡುತ್ತೇವೆ. ಆದುದರಿಂದ ತಮ್ಮ ತಮ್ಮ ಕಸುಬುಗಳ ಬಗ್ಗೆ ಒಂದೆರಡು ವರ್ಷ ತರಬೇತಿ ಕೊಡತಕ್ಕ ವ್ಯವಸ್ಥೆ ಆಗಬೇಕು. ಆಗ ತಮ್ಮ ಸ್ವಂತ ಕಸುಬು ಮಾಡಿ, ಸ್ವತಂತ್ರವಾಗಿ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವುದಕ್ಕೆ ಬಲ ಬರುತ್ತದೆ; ನಮ್ಮ ಮಕ್ಕಳಿಗೆ ಜವಾನರಾಗತಕ್ಕ ಪರಿಸ್ಥಿತಿ ಬೇಡ. ನಾನು ಶಾಸಕರ ಭವನದಲ್ಲಿ ಜವಾನರನ್ನು ಯಾರಪ್ಪ ನೀನು ಎಂದು ಕೇಳಿದರೆ ನಾನು ರೈತನ ಮಗ, ಆ ಹಳ್ಳಿ, ಈ ಹಳ್ಳಿ ಎಂದು ಹೇಳುತ್ತಾರೆ. ಅದೇ ಮೇಲಿನ ಹುದ್ದೆಗಳಲ್ಲಿರುವವರನ್ನು ಕೇಳಿದರೆ, ಅಧಿಕಾರಿಗಳ ಮಗ, ರಾಜಕಾರಣಿಗಳ ಮಗ ಎಂದು ಹೇಳುತ್ತಾರೆ. ಆದುದರಿಂದ ನಾನು ಕೇಳಿಕೊಳ್ಳುವುದೇನೆಂದರೆ, ನಮ್ಮನ್ನು ಜವಾನರನ್ನಾಗಿ ಮಾಡಬೇಡಿ ಎಂದು. 50 ಪರ್ಸೆಂಟ್ ಅಷ್ಟು ನಮ್ಮ ಮಟ್ಟಕ್ಕೆ ತೆಗೆದುಕೊಂಡು ಬನ್ನಿ. ಈ ಒಂದು ಜಾಬ್ ಓರಿಯೆಂಟೆಡ್ ಕೋರ್ಸಸ್‌ನಿಂದ ನಮ್ಮ ಕುಲಕಸುಬುಗಳ ಬಗ್ಗೆ ಕೊನೇಪಕ್ಷ ಒಂದೆರಡು ವರ್ಷ ತರಬೇತಿ ಕೊಡತಕ್ಕ ಸಂಸ್ಥೆಗಳನ್ನು ಸ್ಥಾಪನೆ ಮಾಡಿ, ಅಲ್ಲಿ ನಮ್ಮ ಮಕ್ಕಳಿಗೆ ತರಬೇತಿ ಕೊಡತಕ್ಕ ವ್ಯವಸ್ಥೆ ಮಾಡಿ, ಅವರು ಸ್ವತಂತ್ರವಾಗಿ, ಆರ್ಥಿಕವಾಗಿ, ಸದೃಢರಾಗಿ ನಿಲ್ಲತಕ್ಕ ಮಟ್ಟಕ್ಕೆ ತನ್ನಿ; ಇವತ್ತು ಜಗತ್ತು ಯಾವ ಕಡೆ ಹೋಗುತ್ತಿದೆ, ರಾಜಕಾರಣಿಗಳು, ಅಧಿಕಾರಿಗಳು ಯಾವ ಕಡೆ ಹೋಗುತ್ತಿದ್ದಾರೆ ಎಂದು ನೋಡಿ ತಿಳಿದುಕೊಳ್ಳತಕ್ಕ ಶಕ್ತಿ ಅವರಿಗೆ ಬರುತ್ತದೆ. ನಮಗೆ ಎಲ್ಲಿಯವರೆಗೆ ಆರ್ಥಿಕ ಸ್ವಾತಂತ್ರ್ಯ ಸಿಕ್ಕುವುದಿಲ್ಲವೋ ಅಲ್ಲಿಯವರೆಗೆ ಯಾವ ರೀತಿಯ ದಾಸ್ಯದಿಂದಲೂ ನಾವು ಪಾರಾಗುವುದಕ್ಕೆ ಆಗುವುದಿಲ್ಲ. ಇಲ್ಲದೇಹೋದರೆ ರಾಜಕಾರಣಿಗಳ ಮೇಲೆ ಅವಲಂಬಿತವಾಗಬೇಕಾಗುತ್ತದೆ. ಬುದ್ಧಿವಂತರ ಮೇಲೆ ಅವಲಂಬಿತವಾಗಬೇಕಾಗುತ್ತದೆ, ಇಲ್ಲದೇ ಹೋದರೆ ಅಧಿಕಾರಿಗಳ ಮೇಲೆ ಅವಲಂಬಿತವಾಗಬೇಕಾಗುತ್ತದೆ. ಆರ್ಥಿಕ ಸ್ವಾತಂತ್ರ್ಯ ದೊರಕಿದರೆ ಅವರು ನಿರ್ಭಯವಾಗಿ ಯೋಚನೆ ಮಾಡತಕ್ಕಂಥ ಒಂದು ಮಟ್ಟಕ್ಕೆ ತಲುಪುತ್ತಾರೆ. ಆದುದರಿಂದ ಈ ಒಂದು ಜಾಬ್ ಓರಿಯೆಂಟಡ್ ಕೋರ್ಸಸ್ ತೆರೆಯಲಿಕ್ಕೆ ಅವಕಾಶ ಮಾಡಿಕೊಡಿ. ಈ ರೀತಿ ಮಾಡಿ, ರೈತ ಜನಾಂಗವನ್ನು ಅವರ ಕಾಲ ಮೇಲೆ ಅವರು ನಿಂತುಕೊಳ್ಳತಕ್ಕ ಶಕ್ತಿಗೆ ತಂದರೆ ಅವರು ತಾವೇ ತಾವಾಗಿ ಮುಂದೆ ಬರುವುದಕ್ಕೆ ಅನುಕೂಲವಾಗುತ್ತದೆ. ಜೊತೆಗೆ ಜ್ಞಾನಮಟ್ಟದ ಅಡಿಗಲ್ಲಾದ ಪ್ರಾಥಮಿಕ ಶಾಲೆಗಳು ಏನಿವೆ ಈ ಶಾಲೆಗಳಲ್ಲಿ ಉತ್ತಮಮಟ್ಟದ ಉಪಾಧ್ಯಾಯರನ್ನು ಹಾಕಬೇಕು. ಸಾಮಾನ್ಯವಾಗಿ ಅಧ್ಯಾಪಕರುಗಳು ಪೇಟೆಗಳಲ್ಲಿ ಕೇಂದ್ರೀಕೃತರಾಗುತ್ತಾರೆ. ಯಾರು ಪಟ್ಟಣ ಬೇಡ ಎಂದು ಹೇಳುವಂಥ ಜನ ಇದ್ದಾರೆ ಅವರು ಮಾತ್ರ ಹಳ್ಳಿಗಳಿಗೆ ಹೋಗುತ್ತಾರೆ. ನಾವು ಆತ್ಮಶೋಧನೆ ಮಾಡಿಕೊಳ್ಳೋಣ. ಶಾಸಕರಾಗಲೀ, ಮಂತ್ರಿಗಳಾಗಲೀ, ಅಧಿಕಾರಿಗಳಾಗಲೀ, ನಮ್ಮ ಮಕ್ಕಳನ್ನು ಎಲ್ಲಿ ಓದಿಸುತ್ತಿದ್ದೇವೆ, ಕಾನ್ವೆಂಟ್‌ಗಳಲ್ಲಿ, ಪ್ರೈವೇಟ್ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಓದಿಸುತ್ತಿದ್ದೇವೆ. ಇದು ನಗ್ನ ಸತ್ಯ. ಹಳ್ಳಿಗಳಲ್ಲಿರುವ ಶಾಲೆಗಳಲ್ಲಿ ವಿದ್ಯಾಭ್ಯಾಸದ ಮಟ್ಟ ಏನಿದೆ ಅದು ಸರಿಯಿಲ್ಲ.

ಇದು ಎಲ್ಲರಿಗೂ ಗೊತ್ತಿರತಕ್ಕ ವಸ್ತುಸ್ಥಿತಿ, ಆದರೆ ಇದನ್ನು ಮರೆಮಾಚುವದು ಏತಕ್ಕೆ? ಇದನ್ನು ಸರಿಮಾಡುವುದಕ್ಕೆ ಅಧಿಕಾರಿಗಳ ಕೈಯಲ್ಲಿ ಅಧಿಕಾರ ಇಲ್ಲವೇ? ಆಡಳಿತ ನಡೆಸುತ್ತಿರತಕ್ಕಂಥ ಸರ್ಕಾರದವರ ಕೈಯಲ್ಲಿ ಅಧಿಕಾರ ಇಲ್ಲವೇ? ಆದರೆ ಇಲ್ಲಿಯವರೆಗೆ ಏನಾಗಿತ್ತು ಎಂದರೆ ನಮ್ಮ ಮಕ್ಕಳೂ ಸಹ ಚೆನ್ನಾಗಿ ಓದಿ ವಿದ್ಯಾವಂತರಾದರೆ ಅವರು ಮುಂದುವರಿದುಬಿಡುತ್ತಾರೆ ಎನ್ನತಕ್ಕ ದೃಷ್ಟಿಯಿಂದ ಇದನ್ನು ಮಾಡುತ್ತಿರಲಿಲ್ಲ. ಆದುದರಿಂದ ಈಗ ಬಂದಿರತಕ್ಕ ಮಾನ್ಯ ಸಚಿವರಿಗೆ ಇದರ ಬಗ್ಗೆ ಕಳಕಳಿ ಇದೆ. ಅವರ ಕಾಲದಲ್ಲಿ ಯಾದರೂ ಈ ಎಲ್ಲಾ ನ್ಯೂನತೆಗಳನ್ನೂ ಸರಿಪಡಿಸುತ್ತಾರೆಂದು ನಾನಾದರೂ ಭಾವಿಸಿದ್ದೇನೆ. ನಮ್ಮ ಎದುರು ಪಕ್ಷದ ಸದಸ್ಯರು ನೀವು ಏನು ಮಾಡಿದ್ದೀರಿ. ನೀವು ಏನು ಮಾಡಿದ್ದೀರಿ ಎನ್ನತಕ್ಕ ಪ್ರಶ್ನೆಗಳನ್ನು ಹಾಕಿದರು, ಬಹುಶಃ ಅವರು ಈ ಪ್ರಶ್ನೆಯನ್ನು ಹಾಕಬಾರದಾಗಿತ್ತು. ಏತಕ್ಕೆಂದರೆ ಕಳೆದ 35 ವರ್ಷಗಳಿಂದ ಅವರು ಅಧಿಕಾರದಲ್ಲಿದ್ದಾಗ ವಿದ್ಯಾರಂಗದಲ್ಲಿ, ಶಿಕ್ಷಣ ರಂಗದಲ್ಲಿ ಏನು ಕೊಡುಗೆಯನ್ನು ಕೊಟ್ಟಿದ್ದಾರೆಂಬುದನ್ನು ಮೊದಲು ನೋಡಿಕೊಳ್ಳಬೇಕಾಗಿದೆ. ಆದುದರಿಂದ ಅವರು ಏನೇ ಮಾಡಿರಲಿ ಈಗಿನ ನಮ್ಮ ಮಂತ್ರಿಗಳವರು ಚೆನ್ನಾಗಿ ಅರಿತು ನುರಿತವರಾಗಿರತಕ್ಕವರಿಂದ ಮತ್ತು ಅನುಭವೀ ಮಂತ್ರಿಗಳಾಗಿರುವುದರಿಂದ ಮಾನ್ಯ ಸದಸ್ಯರುಗಳೇನು ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳನ್ನೆಲ್ಲಾ ಜಾರಿಗೆ ತರುವುದಕ್ಕೆ ಪ್ರಯತ್ನ

ಮಾಡಬೇಕೆಂದು ಹೇಳಿ, ಈ ಬೇಡಿಕೆಯನ್ನು ಹೃತ್ಪೂರ್ವಕವಾಗಿ ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾಮಂತ್ರಿಗಳವರು ಮಂಡಿಸಿರತಕ್ಕ ಬೇಡಿಕೆಯನ್ನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ತಮಗೆಲ್ಲರಿಗೂ ಗೊತ್ತಿರುವಂತೆ ಮನುಷ್ಯರಲ್ಲಿ ಉತ್ತಮ ಗುಣ ಮತ್ತು ಕೆಟ್ಟ ಗುಣ ಎಂದು ಎರಡು ಗುಣಗಳು ಇವೆ. ಉತ್ತಮ ಗುಣದ ಮನುಷ್ಯನಾಗಬೇಕಾಗಿದ್ದರೆ ಅದು ವಿದ್ಯೆಯಿಂದ ಮಾತ್ರ ಸಾಧ್ಯವೆಂದು ಅನೇಕ ತತ್ವಜ್ಞಾನಿಗಳು ಹೇಳಿದ್ದಾರೆ. ಆ ದೃಷ್ಟಿಯಿಂದ ಹಿಂದಿನ ಕಾಲದಿಂದಲೂ ವಿದ್ಯೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟುಕೊಂಡು ಬಂದಿದ್ದಾರೆ. ಚೈನಾ ದೇಶದಲ್ಲಿ ಒಂದು ಗಾದೆ ಇದೆ. ಅದು ಏನೆಂದರೆ ದವಸ ಧಾನ್ಯಗಳನ್ನು 10 ದಿವಸಗಳಲ್ಲಿ ಬೆಳೆಯಬಹುದು, ಹಣ್ಣು ಹಂಪಲುಗಳನ್ನು 10 ವರ್ಷಗಳಲ್ಲಿ ಬೆಳೆಯಬಹುದು, ಆದರೆ ಉತ್ತಮ ಗುಣಮಟ್ಟದ ಮನುಷ್ಯನನ್ನಾಗಿ ಮಾಡಬೇಕಾಗಿದ್ದರೆ ಹತ್ತಾರು ವರ್ಷಗಳೇ ಬೇಕಾಗುತ್ತದೆಂದು ಹೇಳಿದ್ದಾರೆ. ಆದುದರಿಂದ ತಾವು ತರಾತುರಿಯಾಗಿ ಯಾವುದೇ ಒಂದು ಕೆಲಸವನ್ನು ಮಾಡುವುದಕ್ಕೆ ಹೋದರೆ ಅದಕ್ಕೆ ಅನೇಕ ಅಡ್ಡಿ ಅಡಚಣೆಗಳು ಉಂಟಾಗುತ್ತವೆ. ಮಾನ್ಯ ಸಚಿವರಿಗೆ ಗೊತ್ತಿರುವ ಹಾಗೆ ಅನೇಕ ಪೂರ್ವಪ್ರಾಥಮಿಕ ಶಾಲೆಗಳನ್ನು ತೆಗೆಯುವ ಉದ್ದೇಶವನ್ನಿಟ್ಟುಕೊಂಡಿದ್ದಾರೆ. ಆದರೆ ಈಗಾಗಲೇ ತಾಲ್ಲೂಕ್ ಬೋರ್ಡ್‌ನವರು ಮತ್ತು ಕೆಲವು ಸ್ಥಳೀಯ ಸಂಸ್ಥೆಗಳವರು ಪ್ರಿಪ್ರೈಮರಿ ಸ್ಕೂಲ್‌ಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅದರಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರುಗಳ ಸಂಬಳ ಬಹಳಷ್ಟು ಕಡಿಮೆ ಇದೆ. ಅಲ್ಲಿ ಫರ್ನೀಚರ್ ಇವೆ, ಸ್ಕೂಲ್ ಬಿಲ್ಡಿಂಗ್ ಇದೆ, ಟ್ರೈನ್ಡ್ ಆದ ಟೀಚರ್ಸ್ ಇದ್ದಾರೆ, ಅವರಿಗೆ ಸಂಬಳವನ್ನು ಕೊಡುತ್ತಿದ್ದೀರಿ. ಹೀಗಿರುವಾಗ ಅಂಥಾ ಸ್ಕೂಲುಗಳನ್ನೆಲ್ಲಾ ಸರ್ಕಾರದವರೇ ತೆಗೆದುಕೊಂಡು ಏತಕ್ಕೆ ನಡೆಸಬಾರದು ? ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮಡಿಕೇರಿಯಲ್ಲಿ 3 ಶಾಲೆಗಳು ಇವೆ. ಆ ಶಾಲೆಗಳಿಗೆ ಸರ್ಕಾರದವರು ಗ್ರಾಂಟನ್ನು ಕೊಡುತ್ತಿದ್ದಾರೆ, ಅಧ್ಯಾಪಕರಿಗೆ ಸಂಬಳ ಹೋಗುತ್ತಿದೆ. ಆದರೆ ಅವರಿಗೆ ಪೆನ್‌ಷನ್ ಮಾತ್ರ ಸಿಗುತ್ತಿಲ್ಲ. ಇದರ ಕಡೆಗೆ ಸರ್ಕಾರದವರು ಗಮನ ಕೊಟ್ಟು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಯಸ್ಕರ ಶಿಕ್ಷಣದ ಬಗ್ಗೆ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೀರಿ, ಅದಕ್ಕಾಗಿ ಖರ್ಚು ಮಾಡುವಂಥಾ ಹಣ 70 ಲಕ್ಷ ರೂಪಾಯಿ ಎಂದು ತಾವೇ ಒದಗಿಸಿರತಕ್ಕ ಅಂಕಿ ಅಂಶಗಳಿಂದ ಗೊತ್ತಾಗುತ್ತಿದೆ. ಆದರೆ ಇದರಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗಿದೆ ಎಂಬುದನ್ನೂ ಸಹ ನಾವು ನೋಡಬೇಕಾಗಿದೆ. ಇವತ್ತಿನ ದಿವಸ ಈ ವಯಸ್ಕರ ಶಿಕ್ಷಣದಲ್ಲಿ ಬೋಧನೆ ಮಾಡತಕ್ಕ ಅಧ್ಯಾಪಕರು ಇದ್ದಾರೆ. ಅವರಿಗೆ ಕೇವಲ 51 ರೂಪಾಯಿಗಳ ಸಂಭಾವನೆಯನ್ನು ಕೊಡುತ್ತಿದ್ದೀರಿ. ಅದು ಏನೇನೂ ಸಾಲುವುದಿಲ್ಲ. ಅದನ್ನು ಜಾಸ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ಅಧ್ಯಾಪಕರುಗಳಿಗೆ ಯಾವ ಉತ್ತೇಜನವೂ ಇಲ್ಲ. ಆದುದರಿಂದ ಅವರಿಗೆ ಏನಾದರೂ ಇನ್‌ಸೆಂಟಿವ್ಸ್ ಕೊಡಬೇಕೆಂದು ಹೇಳಬಯಸುತ್ತೇನೆ. ಇದರ ಜೊತೆಗೆ ಅಲ್ಲಿ ಏನಾಗಿದೆ ಎಂದರೆ ವಯಸ್ಕರ ಶಿಕ್ಷಣದಲ್ಲಿ ಯುವಕರನ್ನು ಬಲವಂತವಾಗಿ ಎಳೆದುಕೊಂಡು ಬಂದು ಪಾಠಪ್ರವಚನಗಳನ್ನು ಮಾಡಬೇಕಾಗಿದೆ. ಅದಕ್ಕೋಸ್ಕರವಾಗಿ ಅವರಿಗೆ ಇದರಲ್ಲಿ ಆಸಕ್ತಿ ಬರುವ ಹಾಗೆ ಮಾಡಲು ಸಾಂಸ್ಕೃತಿಕ ಚಟುವಟಿಕೆಗಳನ್ನೂ ಮತ್ತು ಮನೋರಂಜನಾ ಕಾರ್ಯಕ್ರಮಗಳನ್ನೂ ಸಹ ಏರ್ಪಡಿಸಿದರೆ ಒಳ್ಳೆಯದೆಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಮ್ಮ ಮಿತ್ರರು ಅನೇಕರು ಮಿಡ್ಡೇ ಮೀಲ್ಸ್ ಬಗ್ಗೆ ಹೇಳಿದರು. ಇದು ಬಹಳ ಅವಶ್ಯಕವಿದೆ. ಆದರೆ ಕೆಲವು ಕಡೆಗಳಲ್ಲಿ ಏನಾಗುತ್ತಿದೆ ಎಂದರೆ ಎ.ಇ.ಒ. ಆಫೀಸ್‌ಗಳಲ್ಲಿ ಆಹಾರವನ್ನು ತಯಾರುಮಾಡಿ ಇತರೇ ಸ್ಕೂಲುಗಳಿಗೆ ರಿಕ್ಷಾದಲ್ಲಿ, ಬಸ್‌ಗಳಲ್ಲಿ, ಸೈಕಲ್‌ಗಳಲ್ಲಿ ಕೊಂಡುಹೋಗಿ ಹಂಚತಕ್ಕಂಥ ವ್ಯವಸ್ಥೆ ಇದೆ. ಇದು ಸರಿಯಲ್ಲ. ಮಕ್ಕಳಿಗೆ ಆಯಾಯ ಸ್ಥಳಗಳಲ್ಲಿಯೇ ಸ್ವಚ್ಛವಾದ ರುಚಿಯಾದ ಮಧ್ಯಾಹ್ನದ ಊಟವನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅನೇಕ ಶಾಲೆಗಳಿಗೆ ಕಟ್ಟಡಗಳು ಇವೆ. ಅಲ್ಲಿ ತೋಟಗಾರಿಕೆ ಮಾಡಿರುತ್ತಾರೆ. ಹಣ್ಣು ಹಂಪಲನ್ನು ಹುಡುಗರು ಮತ್ತು ಅಧ್ಯಾಪಕರು ಸೇರಿ ಬೆಳೆಸಿರುತ್ತಾರೆ. ಆದರೆ ಈಗ ಶಾಲೆಗಳಲ್ಲಿ ಜವಾನರನ್ನು ನೇಮಿಸತಕ್ಕ ಪದ್ಧತಿ 1970 ರಿಂದ ನಿಂತುಹೋಗಿರುವುದರಿಂದ, ಶಾಲಾ ಕಟ್ಟಡವನ್ನು ಮತ್ತು ಹೂವಿನ ತೋಟ, ಗಿಡಗಳನ್ನು ನೋಡಿಕೊಳ್ಳಲು ಅಲ್ಲಿ ಯಾರೂ ಇಲ್ಲದ ಹಾಗಾಗಿದೆ. ಇನ್ನು ಆಶಾಲೆಗಳಲ್ಲಿ ದಾನಿಗಳು ಕೊಟ್ಟಿರತಕ್ಕ ಗಡಿಯಾರ, ರೇಡಿಯೋ ಮುಂತಾದವೂ ಸಹ ಇರುತ್ತವೆ. ಸ್ಕೂಲ್ ಮುಗಿದ ನಂತರ ಹುಡುಗರು ಮತ್ತು ಅಧ್ಯಾಪಕರು ಬೀಗ ಹಾಕಿಕೊಂಡು ಹೋಗಿಬಿಡುತ್ತಾರೆ. ಆದರೆ ಆನಂತರ ಏನಾದರೂ ದನಗಳು, ಮೇಕೆಗಳು ಬಂದು ಅವರು ಬೆಳೆಸಿರತಕ್ಕ ಹಣ್ಣು ಹಂಪಲನ್ನು ಮತ್ತು ತರಕಾರಿಯನ್ನು ತಿಂದು ಹೋಗಿಬಿಡುತ್ತವೆ. ಮತ್ತು ಸ್ಕೂಲಿನ ಸಾಮಾನುಗಳನ್ನು ಭದ್ರವಾಗಿ ನೋಡಿಕೊಳ್ಳಲು ಅಲ್ಲಿ ಯಾರೂ ಇರುವುದಿಲ್ಲ. ಆದುದರಿಂದ ಇದಕ್ಕೆ ತಾವು ಸೂಕ್ತವಾದ ವ್ಯವಸ್ಥೆಯನ್ನು ಮಾಡ

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬೇಕೆಂದು ಹೇಳಬಯಸುತ್ತೇನೆ. ಇನ್ನು ತಮಗೆಲ್ಲಾ ಗೊತ್ತಿರುವಹಾಗೆ ಅಧ್ಯಾಪಕರೂ ಸಹ ಎಸ್.ಎಸ್.ಎಲ್.ಸಿ. ಟಿ.ಸಿ.ಎಚ್. ಮಾಡಿರುತ್ತಾರೆ. ಅನೇಕರೀಗೆ ಪ್ರಮೋಷನ್ ಸಿಗದೇ ನಿವೃತ್ತಿಯಾಗುತ್ತಾರೆ. ಅಂಥವರಿಗೆ 10–15 ವರ್ಷ ಸರ್ವಿಸ್ ಆದಮೇಲೆ ಸ್ಪೆಷಲ್ ಸೆಲೆಕ್ಷನ್ ಗ್ರೇಡನ್ನು ಕೊಡುವುದು ಸೂಕ್ತವೆಂದು ಹೇಳಿಬಯಸುತ್ತೇನೆ. ಇನ್ನು ಅನೇಕ ಸಂದರ್ಭಗಳಲ್ಲಿ ಯಾರು ಗ್ರಾಜುಯೇಟ್ ಟೀಚರ್ಸ್ ಇರುತ್ತಾರೆ ಅಂಥವರನ್ನು ಪ್ರೈಮರಿ ಸ್ಕೂಲ್‌ಗಳಲ್ಲಿ ಹೆಡ್ ಮಾಸ್ಟರರನ್ನಾಗಿ ಮಾಡಿರುತ್ತಾರೆ. ಆದರೆ ಯಾರು ಸರ್ವೀಸ್‌ನಲ್ಲಿ ಸೀನಿಯರ್ ಆಗಿರುತ್ತಾನೋ ಅಂಥವನಿಗೆ ಪ್ರಮೋಷನ್ ಸಿಕ್ಕುವುದಿಲ್ಲ. ಆದುದರಿಂದ ಅಂಥವರಿಗೆ ಅನ್ಯಾಯವಾಗದ ಹಾಗೆ ಸ್ಪೆಷಲ್ ಸ್ಕೇಲನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇನ್ನು ಸ್ಕೂಲ್ ಇನ್ಸ್‌ಪೆಕ್ಟರ್ಸ್‌ಗೆ ಫಿಕ್ಸೆಡ್ ಟಿ.ಎ.–ಡಿ.ಎ.ಯನ್ನು 100 ರೂ. ಎಂದು ನಿಗದಿ ಮಾಡಿದ್ದಾರೆ. ಆದರೆ ಅವರು ಎಷ್ಟು ಊರುಗಳನ್ನು ಸುತ್ತಬೇಕಾಗಿರುತ್ತದೆ, ಅದಕ್ಕೆ ಎಷ್ಟು ಖರ್ಚು ವೆಚ್ಚ ತಗಲುತ್ತದೆ ಎಂಬುದನ್ನೆಲ್ಲಾ ನಾವು ಲೆಕ್ಕ ಹಾಕಿದರೆ, ಅವರು ಎಲ್ಲಾ ಕಡೆಗಳಲ್ಲಿಯೂ ವಿಜಿಟ್ ಮಾಡುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಎ.ಇ.ಒ.ರವರ ಆಫೀಸಿನಲ್ಲಿ ಜೀಪ್ ಇದ್ದರೆ ಅದು ಸಾಮಾನ್ಯವಾಗಿ ತಹಶೀಲ್ದಾರ್‌ರವರು ಮತ್ತಿತರರೇ ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಿರುತ್ತಾರೆ. ಆದುದರಿಂದ ಅವಶ್ಯಕತೆ ಇರುವಂಥ ಕಡೆಗಳಲ್ಲಿ ವಾಹನದ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಹೇಳುತ್ತಾ. ಈ ಸ್ಕೂಲ್ ಇನ್ಸ್‌ಪೆಕ್ಟರ್‌ರವರು ಮತ್ತು ಎ.ಇ.ಒ.ಗಳಿಗೂ ಸಹ ಜೀಪನ್ನು ಒದಗಿಸಬೇಕೆಂದು ಸಲಹೆ ಮಾಡುವುದಕೆ ಇಷ್ಟಪಡುತ್ತೇನೆ. ಇವತ್ತಿನ ದಿನಸ, ಎ.ಇ.ಒ. ಕಛೇರಿಯಲ್ಲಿ ಅನೇಕ ಅಧ್ಯಾಪಕರು ಡೆಪ್ಯುಟೇಷನ್ ಮೇಲೆ ಕೆಲಸ ಮಾಡುತ್ತಿದ್ದಾರೆ. ಆ ಶಾಲೆಯಿಂದ ಈ ಶಾಲೆಯಿಂದ ಉಪಾಧ್ಯಾಯರನ್ನು ಕರೆದುಕೊಂಡು ಬಂದು ಕೆಲಸ ಮಾಡುವ ಪರಿಸ್ಥಿತಿ ಎ.ಇ.ಒ. ಕಛೇರಿಗೆ ಬಂದಿದೆ. ಇದರಿಂದ ಶಾಲೆಗಳಲ್ಲಿ ಸರಿಯಾಗಿ ಪಾಠಪ್ರವಚನಗಳು, ನಡೆಯುವುದಿಲ್ಲ. ಎ.ಇ.ಒ. ಕಛೇರಿಗೆ ಅವಶ್ಯಕವಾಗಿ ಬೇಕಾದ ಪೀಠೋಪಕರಣಗಳು. ಜೀಪು. ಫೋನು, ಟೈಪಿಸ್ಟ್, ಕ್ಲರ್ಕ್ ಇತ್ಯಾದಿಗಳನ್ನು ಕೊಟ್ಟು ಕೆಲಸ ಮಾಡಿ ಎಂದರೆ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ. ಆ ಒಂದು ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೈಸ್ಕೂಲಿನಲ್ಲಿ ಹೆಡ್‌ಮಾಸ್ಟರ್ ಆಗಿರತಕ್ಕವರು ಜೂನಿಯರ್‌ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಆರ್ಟಿಕಲ್ 32 ರ ಪ್ರಕಾರ 6 ತಿಂಗಳ ಅವಧಿಗಿಂತ ಹೆಚ್ಚು ಇರಕೂಡದೆಂದು ಇದೆ. ಅನೇಕ ಜೂನಿಯರ್ ಕಾಲೇಜ್ ಲೆಕ್ಚರರ್‌ಗಳು ಮತ್ತು ಹೆಡ್‌ಮಾಸ್ಟರ್‌ಗಳು ಸುಮಾರು 7–8 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಇವರು ಯಾರೂ ಪರ್ಮನೆಂಟ್ ಆಗಿಲ್ಲ. ಸೀನಿಯಾರಿಟಿ ಲಿಸ್ಟ್ ಮಾಡಿ ಬಡ್ತಿ ಕೊಟ್ಟಿದ್ದರೆ ಅನೇಕರಿಗೆ ಬಡ್ತಿ ಸಿಗುತ್ತಿತ್ತು. ಈಗ ಬಡ್ತಿ ಇಲ್ಲದೆ ಅನೇಕರು ಇನ್‌ಚಾರ್ಜಿನಲ್ಲಿದ್ದಾರೆ. ಅವರಿಗೆ ಹೆಚ್ಚಿಗೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ, ಕ್ಯಾಟಗರಿವೈಸ್ ಲಿಸ್ಟ್ ಮಾಡಿ ಜಾಗ್ರತೆ ಅವರಿಗೆ ಬಡ್ತಿ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಹೈಸ್ಕೂಲಿನ ಮುಖ್ಯೋಪಾಧ್ಯಾಯರು. ಸಬ್ ಇನ್ಸ್‌ಪೆಕ್ಟರು, ಎ.ಇ.ಒ. ಮತ್ತು ಬಿ.ಎಡ್. ಕಾಲೇಜ್ ಲೆಕ್ಚರರ್ಸ್ ಇವರೆಲ್ಲ ಒಂದೇ ಕ್ಯಾಟಗರಿಯಲ್ಲಿ ಬರುತ್ತಾರೆ. ಅವರಿಗೆ ಕಂಪಲ್ಸರಿಯಾಗಿ ಟ್ರೈನಿಂಗ್ ಆಗಿರಬೇಕು. ಆದರೆ ಅವರಿಗೆ ಕೊಡತಕ್ಕ ಸಂಬಳ ಬಿ.ಡಿ.ಒ. ಮತ್ತು ತಹಶೀಲ್ದಾರರಿಗೆ ಕೊಡತಕ್ಕ ಸಂಬಳಕ್ಕಿಂತ ಕಡಿಮೆ. ತಹಶೀಲ್ದಾರರಾಗಬೇಕಾದರೆ ಡಿಗ್ರಿ ಆಗಬೇಕಾಗಿಲ್ಲ. ಇಲಾಖೆಯಲ್ಲಿ ಕ್ಲರ್ಕ್ ಆಗಿ ಸೇರಿದರೆ ತಹಶೀಲ್ದಾರ್, ಬಿ.ಡಿ.ಒ. ಆಗುತ್ತಾರೆ, ಕೊನೆಗೆ ಅಸಿಸ್ಟೆಂಟ್ ಕಮೀಷನರ್ ಕೂಡ ಆಗುತ್ತಾರೆ. ಇವರು ಪದವೀಧರರಾಗಿ ಸೇರಿದರೆ ಇವರಿಗೆ ಯಾವುದೇ ಬಡ್ತಿ ಇಲ್ಲ ಮತ್ತು ಕೊಡತಕ್ಕ ಸಂಬಳ ಕೂಡ ಕಡಿಮೆ. ಈ ರೀತಿಯಾದರೆ ವಿದ್ಯಾ ಇಲಾಖೆಯಲ್ಲಿ ಯಾವ ರೀತಿ ಕೆಲಸ ನಡೆಯುತ್ತದೆ ? ಆದ್ದರಿಂದ, ಅವರಿಗೆ ಇರತಕ್ಕ ಸ್ಕೇಲನ್ನು ಉತ್ತಮಪಡಿಸಿ ಅವರಿಗೆ ಬಡ್ತಿ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ, ಪರೀಕ್ಷಾ ಮಂಡಳಿಗೆ ಹರಿಜನ–ಗಿರಿಜನ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪರೀಕ್ಷಾ ಶುಲ್ಕವನ್ನು ಸರ್ಕಾರ ತುಂಬಿಕೊಡುತ್ತಿಲ್ಲ. ಅದನ್ನು ತುಂಬಿಕೊಡದಿದ್ದರೆ ಮಂಡಳಿಯ ಹಣಕಾಸಿನ ವ್ಯವಸ್ಥೆಗೆ ಬಹಳ ತೊಂದರೆಯಾಗುತ್ತದೆ. ಆದರಿಂದ ಮೌಲ್ಯಮಾಪನ ಮಾಡಿದವರಿಗೆ ಹಣ ಕೊಡುವುದಕ್ಕೆ ಹಣ ಇರುವುದಿಲ್ಲ. ಹೀಗಾಗಿ ಸರ್ಕಾರದ ಆಜ್ಞೆ ಇದ್ದರೂ ಶಿಕ್ಷಕರನ್ನು ಮೌಲ್ಯಮಾಪನ ಮಾಡಲು ಬನ್ನಿ ಎಂದರೆ ಬರುವುದಿಲ್ಲವೆಂದು ಹೇಳುವ ಪ್ರಸಂಗ ಬಂದಿದೆ. ಆದ್ದರಿಂದ ಸರ್ಕಾರದವರು ಬೋರ್ಡಿಗೆ ತುಂಬಿಕೊಡಬೇಕಾದ ಹಣವನ್ನು ಕೂಡಲೇ ಕೊಡಬೇಕೆಂದು ಹೇಳುತ್ತೇನೆ. ಜೂನಿಯರ್ ಕಾಲೇಜುಗಳಲ್ಲಿ ಬೇಕಾದಷ್ಟು (ಸುಮಾರು 50 ಸಾವಿರ) ಪುಸ್ತಕಗಳು ಇವೆ. ಆದರೆ ಅವು ಲೈಬ್ರರಿಯಲ್ಲಿ ಸರಿಯಾಗಿ ದೊರೆಯುವುದಿಲ್ಲ. ಏಕೆಂದರೆ ಅಧ್ಯಾಪಕರಿಗೆ ಬೇರೆ ಕೆಲಸಗಳು ಇರುವುದರಿಂದ ಅವರು ಸರಿಯಾಗಿ ಲೈಬ್ರರಿ ಬೀಗ ತೆಗೆಯುವುದಿಲ್ಲ. ಆದ್ದರಿಂದ ಪ್ರತಿಯೊಂದು ಜೂನಿಯರ್ ಕಾಲೇಜಿಗೂ ಒಬ್ಬೊಬ್ಬ ಲೈಬ್ರರಿಯನ್ ಅನ್ನು ಕೊಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಪುಸ್ತಕಗಳು ಹಾಳಾಗುತ್ತವೆ. ಅವುಗಳ ಉಪಯೋಗ ಯಾರಿಗೂ ಆಗುವುದಿಲ್ಲ. ಇವತ್ತಿನ ದಿವಸ ಅನೇಕ ಶಾಲಾ–ಕಾಲೇಜುಗಳಲ್ಲಿ ಸಭಾಂಗಣಗಳು ಇರುವುದಿಲ್ಲ. ಹೆಚ್ಚಾಗಿ ಸಮಾರಂಭಗಳು ಶಾಲೆಗಳಲ್ಲೇ ಆಗಬೇಕಾಗಿರುತ್ತದೆ. ಮಲೆನಾಡು ಪ್ರದೇಶಗಳಲ್ಲಿ ಯಾವ ಕಾಲದಲ್ಲೂ ಸಭೆಯನ್ನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಅಲ್ಲಿ ಯಾವಾಗ ಮಳೆ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ, ಪ್ರತಿಯೊಂದು ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜುಗಳಿಗೂ ಒಂದೊಂದು

ಸಭಾಂಗಣವನ್ನು ಕಟ್ಟಿಸಿಕೊಡಬೇಕೆಂದು ಹೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿರುವ ಶಾಲೆಗೆ ಸಂಬಂಧಪಟ್ಟ ಹಾಗೆ 50 ಎಕರೆ ಜಾಗ ಇದೆ. ಅದನ್ನು ಈಗ ಖಾಲಿ ಬಿಡಬೇಕಾದ ಪರಿಸ್ಥಿತಿ ಇದೆ. ಕಳೆದ ವರ್ಷ 10 ಎಕರೆ ಯಷ್ಟು ಜಾಗವನ್ನು ಅಫೋರೆಸ್ಟೇಷನ್ ಮಾಡಿಸಿದ್ದೇನೆ. ಉಳಿದ ಜಾಗ ಖಾಲಿ ಇದೆ. ಅದನ್ನು ಯಾರು ಆಕ್ರಮಿಸುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಮಡಕೇರಿ ಜೂನಿಯರ್ ಕಾಲೇಜಿನಲ್ಲಿ ಕಾಂಪೌಂಡ್ ಇದ್ದರೂ ಅಲ್ಲಿ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಪೇಟೆಯ ದನ-ಕರುಗಳೆಲ್ಲ ಅದರೊಳಗೆ ಇರುತ್ತವೆ. ಇದಕ್ಕೆಲ್ಲ ಸರ್ಕಾರದವರು ಹಣ ಸಹಾಯ ಮಾಡಬೇಕಾಗುತ್ತದೆ. ಅನೇಕ ಕಡೆ ಶಾಲಾ-ಕಾಲೇಜುಗಳಲ್ಲಿ ಫ್ಲಷ್ಔಟ್ಸ್ ಇರುವುದಿಲ್ಲ. ಹೆಣ್ಣುಮಕ್ಕಳು ಓದುವ ಕಡೆ ಇದರ ಅಗತ್ಯ ಬಹಳವಾಗಿರುತ್ತದೆ. ಇದಕ್ಕೆಲ್ಲ ವ್ಯವಸ್ಥೆ ಆಗಬೇಕೆಂದು ಹೇಳಬಯಸುತ್ತೇನೆ. ಇವತ್ತಿನ ದಿವಸ ಅಲ್ಲೆಲ್ಲ ಹಳೇ ಕಾಲದ ವ್ಯವಸ್ಥೆ ಇದೆ, ಅದೆಲ್ಲ ಬದಲಾವಣೆ ಆಗಬೇಕೆಂದು ಹೇಳುತ್ತೇನೆ. ಈ ಇಲಾಖೆಯ ಸಚಿವರು ಬಹಳ ಅನುಭವಸ್ಥರು ಇದ್ದಾರೆ. ಅವರು ನಮ್ಮ ಈ ಬೇಡಿಕೆಗಳನ್ನೆಲ್ಲ ಈ ಸಾಲಿನ ಆಯವ್ಯಯದಲ್ಲಿ ಸೇರಿಸಿಕೊಂಡರೆ ನಿಜವಾಗಿ ಒಪ್ಪಬಹುದು. ಇಲ್ಲ ದಿದ್ದರೆ ಬಹಳ ಕಷ್ಟವಾಗುತ್ತದೆ. ನಮ್ಮ ಕೊಡಗಿನಲ್ಲಿ ಒಂದು ಕಾಲೇಜ್ ಆಗಬೇಕೆಂಬ ಬೇಡಿಕೆ ಬಹು ದಿನಗಳಿಂದ ಇದೆ. ಅಲ್ಲಿಗೆ ಇಂಜಿನಿಯರಿಂಗ್ ಅಥವಾ ಮೆಡಿಕಲ್, ಅಥವಾ ವ್ಯವಸಾಯ ಯಾವುದೇ ಕಾಲೇಜನ್ನಾದರೂ ಕೊಟ್ಟರೆ ನಿಮ್ಮ ಸರ್ಕಾರ ಬಂದುದಕ್ಕೆ ನಿಜವಾಗಿ ಸಾರ್ಥಕವಾಗುತ್ತದೆ. ಯಾವುದಾದರೂ ಒಂದು ಕಾಲೇಜನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಮತ್ತೊಮ್ಮೆ ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸಿ ಕೊಳ್ಳುತ್ತೇನೆ.

ಇನ್ನು ಯುವಜನ ಸೇವೆ ಮತ್ತು ಕ್ರೀಡೆಗಳ ಬಗ್ಗೆ ಹೇಳುವುದಾದರೆ; ಇದರ ಬಗ್ಗೆ ಸ್ಪಷ್ಟೀಕರಣ ಬೇಕಾಗುತ್ತದೆ. ಇವತ್ತಿನ ದಿವಸ, ಅಲ್ಲಲ್ಲಿ ಯುವಕರ ಮತ್ತು ಯುವತಿಯರ ಕ್ಲಬ್ಬುಗಳು ಇವೆ. ಯುವಕ-ಯುವತಿಯರಿಗೆ ಆಸಕ್ತಿ ಬಂದಾಗ ಹೊಸ ಹೊಸ ಕ್ಲಬ್ಬುಗಳನ್ನು ಪ್ರಾರಂಭ ಮಾಡುತ್ತಾರೆ. ಅವು ಒಂದೆರಡು ವರ್ಷಗಳು ನಡೆಯುತ್ತವೆ. ಆಮೇಲೆ ಇನ್ನೊಬ್ಬರು ಹೊಸಬರು ಬಂದಾಗ ಇನ್ನೊಂದು ಹೊಸ ಕ್ಲಬ್ಬನ್ನು ಪ್ರಾರಂಭಿಸುತ್ತಾರೆ. ಇದಕ್ಕೆ ಇಲಾಖೆ ಹೆಚ್ಚಿನ ಹಣಕಾಸಿನ ವ್ಯವಸ್ಥೆಯನ್ನೇನೂ ಕೊಡುವುದಿಲ್ಲ. ಕ್ಲಬ್ಬಿನ ಸಲುವಾಗಿ ಒಂದು ಬಿಲ್ಡಿಂಗ್ ಕಟ್ಟಿಸಿಕೊಳ್ಳುತ್ತೇವೆಂದರೆ ಎರಡು ಸಾವಿರ ರೂಪಾಯಿ ಗ್ರಾಂಟ್ ಕೊಡುತ್ತಾರೆ. ಅದರಲ್ಲಿ ಬಿಲ್ಡಿಂಗ್ ಕಟ್ಟುವುದಕ್ಕಾಗುವುದಿಲ್ಲ. ಆದ್ದರಿಂದ ಅದನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಒಬ್ಬರು ಅಧ್ಯಕ್ಷರು ಹೋಗಿ ಮತ್ತೊಬ್ಬರು ಅಧ್ಯಕ್ಷರು ಬಂದಾಗ ಒಂದೊಂದು ಹೊಸ ಹೊಸ ಕ್ಲಬ್ಬುಗಳು ಹುಟ್ಟುವ ಪರಿಸ್ಥಿತಿ ಇದೆ. ಅದನ್ನು ತಪ್ಪಿಸಿ ಸದಾ ಒಂದೇ ಕ್ಲಬ್ಬು ನಡೆಸುತಕ್ಕ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಒಂದೊಂದು ಕ್ರೀಡಾಂಗಣವನ್ನು 10 ಲಕ್ಷ ರೂಪಾಯಿ ವೆಚ್ಚದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ 5 ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಡುತ್ತದೆಂದು ಹೇಳಿದ್ದಾರೆ ಮತ್ತು ಉಳಿದ 5 ಲಕ್ಷ ರೂಪಾಯಿಗಳನ್ನು ಜನರು ವಂತಿಗೆ ಕೊಡಬೇಕೆಂದಿದ್ದಾರೆ. ಆದರೂ ಕೆಲಸ ಪೂರ್ತಿ ಆಗಿಲ್ಲ. ಈ ಕೆಲಸವನ್ನು ಜನರಿಂದ ಹಣ ಬಂದು ಪೂರೈಸುವುದಕ್ಕಾಗುವುದಿಲ್ಲ. ಆದ್ದರಿಂದ, 10 ಲಕ್ಷ ರೂಪಾಯಿ ಆಗಲಿ ಅಥವಾ ಎಷ್ಟು ಹಣ ಖರ್ಚಾಗುತ್ತದೆ ಅಷ್ಟನ್ನೂ ಸರ್ಕಾರವೇ ಕೊಟ್ಟು ಕ್ರೀಡೆಯ ಮತ್ತು ಯುವಜನರ ದೃಷ್ಟಿಯಿಂದ ಮಾಡಿಕೊಡಬೇಕೆಂದು ಹೇಳುತ್ತೇನೆ. ಗ್ರಾಮೀಣ ವ್ಯಾಯಾಮ ಶಾಲೆಗಳ ಸಲುವಾಗಿ 75 ಲಕ್ಷ ರೂಪಾಯಿಗಳ ಕಾರ್ಯಕ್ರಮವನ್ನು ಮಂಜೂರ್ಮಾಡಿದ್ದೇವೆಂದು ಹೇಳಿದ್ದಾರೆ, ಇದನ್ನು ನೋಡಿದರೆ ಈ ಕೆಲಸ ಬೇಗ ಆಗುವುದಿಲ್ಲ. ಇದನ್ನು ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆ ಏನಿದೆ ಅಲ್ಲಿ ತರಬೇತಿ ಕೊಟ್ಟು ಬುದ್ಧಿವಂತರನ್ನು ಉದ್ಯೋಗಕ್ಕೆ ನೇಮಿಸುವ ಯೋಜನೆ ಇದೆ. ಅಲ್ಲಿ ತರಬೇತಾದವರನ್ನು ಜಾಗ್ರತೆ ಎಲ್ಲಿಯಾದರೂ ಸೇರಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮೀಣ ಕ್ರೀಡೆಗಳೇನಿವೆ ಅವನ್ನು ಜಿಲ್ಲಾ ಮಟ್ಟದಲ್ಲಾಗಲೀ, ಅಥವಾ ತಾಲ್ಲೂಕು ಮಟ್ಟದಲ್ಲಾಗಲೀ ನಡೆಸಬೇಕಾದರೆ ಇಲಾಖೆಯಿಂದ ಕೊಡತಕ್ಕ ಹಣ ಸಾಲುವುದಿಲ್ಲ. ಅಲ್ಲಿರತಕ್ಕ ಅಧಿಕಾರಿಗಳು ಭಿಕ್ಷೆ ಬೇಡಬೇಕಾಗಿದ. ಅನೇಕ ಕಡೆ ಭಿಕ್ಷೆ ಬೇಡಿದರೂ ಹಣ ಸಿಗುವುದಿಲ್ಲ. ಇವನ್ನು ಯಾವ ರೀತಿ ನಡೆಸಬೇಕೋ ಆ ರೀತಿ ನಡೆಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಅದಕ್ಕೆ ಹೆಚ್ಚಿಗೆ ಹಣ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಪುಲಿಯ ಹಾಲಿನ ಮೇವು ಚಿತ್ರದಲ್ಲಿರತಕ್ಕ ಕ್ರೀಡೆಗಳನ್ನು ಬಹುಶಃ ತಾವೆಲ್ಲರೂ ನೋಡಿದ್ದಿರಬಹುದು. ಅಂಥ ಕ್ರೀಗಳು ನಮ್ಮಲ್ಲಿ ಬಹಳ ನಡೆಯುತ್ತವೆ. ಅದಕ್ಕೆ ನಮ್ಮ ಊರಿನಲ್ಲಿ 32 ಎಕರೆ ದೊಡ್ಡ ಗದ್ದೆ ಇದೆ. ಅಲ್ಲಿಗೆ ಜೀವಾಜ ಆಳ್ವರವರು ಬಂದಿದ್ದರು. ಆಗ ಅವರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ರೀತಿ ಕ್ರೀಡೆಗಳನ್ನು ನಡೆಸಿಕೊಂಡು ಬಂದಿದ್ದಾರೆಂಬುದು ಗೊತ್ತಾಯಿತು. ಮುಂದೆ ಅದನ್ನು ಯಾವ ರೀತಿ ಪ್ರಗತಿಪಥದಲ್ಲಿ ತೆಗದುಕೊಂಡು ಹೋಗಬೇಕೆಂಬುದನ್ನು ಯೋಚನೆ ಮಾಡಿ ಅದನ್ನು ಮುಂದುವರಿಸಿ ಕೊಂಡು ಹೋಗಬೇಕೆಂದು ಪ್ರಾರ್ಥಿಸುತ್ತೇರಿ. ಉತ್ತಮ ಆಟಗಾರ ಮತ್ತು ಆಟಗಾರ್ತಿಯರಿಗೆ ನಗದು ಬಹುಮಾನ ಕೊಡುತ್ತೇವೆನದು ಹೇಳಿದ್ದಾರೆ. ಅಂಥವರೆನ್ನು ಗುರುತಿಸಿ ಬಹುಮಾನಗಳನ್ನು ಕೊಟಬೇಕೆಂದ ಹೇಳುತ್ತೇನೆ. ಇವತ್ತಿನ ದಿವಸ ಅನೇಕರಿಗೆ ಬಹುವಯಸಗಳು ತಲುಪಿಲ್ಲವೆಂದು ಕೇಳಿದ್ದೇನೆ; ಅವೆಲ್ಲವನ್ನೂ ಗಮನಿಸಿ ಸಂಬಂಧಪಟ್ಟವರಿಗೆ ಬಹುಮಾನಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕಂದು ಕೇಳಿಕೊಳ್ಳುತ್ತೇನೆ. ತಮಗೆಲ್ಲ ಗೊತ್ತಿರುವ ಹಾಗೆ ಕೊಡಗಿನಲ್ಲಿ ಒಂದು ಕ್ರೀಡಾಶಾಲೆ ಇದೆ. ಅಲ್ಲಿ ಸುಮಾರು 166 ಮಕ್ಕಳು

ಇದ್ದರು. ನೀವು ಈ ಸಾರಿ 35 ಮಕ್ಕಳು ಇದ್ದಾರೆಂದು ಹೇಳಿದ್ದೀರಿ. ಅಲ್ಲಿ ಅಧ್ಯಾಪಕರ ಕೊರತೆ ಇದೆ, ಮತ್ತು ಆ ಶಾಲೆಗೆ ಸರಿಯಾದ ಕಟ್ಟಡ ಇಲ್ಲವೆಂದು ದೂರು ಇದೆ. ಇವತ್ತು ಅಲ್ಲಿ ಸ್ನಾನಕ್ಕೂ ನೀರಿಲ್ಲ. ಮಳೆಗಾಲದಲ್ಲಿ ಕೂಡ ತಣ್ಣೀರಿನಲ್ಲಿ ಸ್ನಾನ ಮಾಡಬೇಕಾಗಿದೆ. 9 ರಿಂದ 15 ವಯಸ್ಸಿನ ಮಕ್ಕಳು ಆಟ ಆಡುವುದಕ್ಕೆ, ವ್ಯಾಯಾಮ ಮಾಡುವುದಕ್ಕೆ ಸೌಲಭ್ಯಗಳು ಆಗಬೇಕು. ಅಧ್ಯಾಪಕರ ನೇಮಕ ಆಗಬೇಕು ; ಪುಸ್ತಕಗಳನ್ನು ಒದಗಿಸಬೇಕು. ಅಲ್ಲಿ ಸ್ಥಳ ಸಂಕೋಚ ಇರುವುದರಿಂದ ಆಟಪಾಠಗಳಿಗೆ ಬೇರೆ ಕಡೆ ಅವಕಾಶ ಒದಗಿಸಿಕೊಡಬೇಕು ಎಂದು ಹೇಳಿದ್ದೇನೆ. ನಾಪೋಕ್ಲುನಲ್ಲಿ ವಿಸ್ತಾರವಾದ ಹಾಸ್ಟೆಲ್ ಬಿಲ್ಡಿಂಗ್ ಇದ್ದು ಈಗಾಗಲೇ ಯುವಜನ ಸೇವಾ ಇಲಾಖೆ ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡಿದೆ. ಅಲ್ಲಿ ಇದಕ್ಕೆ ಅಸವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಕೊಡಗಿನಲ್ಲಿ ಉತ್ತಮ ಪರಿಸರ ಇದೆ, ಉತ್ತಮವಾದ ಪ್ರಕೃತಿ ಸಂಪತ್ತಿದೆ. ಜೊತೆಗೆ ಮಕ್ಕಳಲ್ಲಿ ಸ್ವಾಭಾವಕವಾದ ಗುಣ. ನಡತೆ ಇರುವುದರಿಂದ ಅಲ್ಲಿ ಹೆಚ್ಚಿನ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ನಿರುದ್ಯೋಗಿಯಾಗಿರುವ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿಗಾರರಿಗೆ ಹಣಕಾಸು ನೆರವು ನೀಡಿದೆ ಎಂದು ಹೇಳಿದ್ದಾರೆ. ಈಗ ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ನಿರುದ್ಯೋಗಿಯಾಗಿರಬೇಕಾದ ಅವಸ್ಥೆ ಏತಕ್ಕೆ ಬಂತು ? ಪ್ರತಿ ಹಂತದಲ್ಲೂ ಕನ್ನಡವನ್ನು ಜಾರಿಗೆ ತರುತ್ತಿರುವಾಗ ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರನ್ನು ಉದ್ಯೋಗಕ್ಕೆ ತೆಗೆದುಕೊಂಡು ಸರ್ಕಾರದ ಕಾರ್ಯಕ್ಕೆ ನೆರವು ಪಡೆಯಬೇಕೆಂದು ಹೇಳುತ್ತೇನೆ. ಸಾಹಿತಿಗಳು ಮತ್ತು ಇತರ ಕಲಾವಿದರಿಗೆ ಮಾಸಾಶನ ಕೊಡುತ್ತಿದ್ದಾರೆ. ಅವರಿಗೆ ಕೊಡುತ್ತಿರುವ 100 ರೂಪಾಯಿ ಬಹಳ ಕಡಿಮೆ. ಕನಿಷ್ಟ 250 ರೂಪಾಯಿಗಳಾದರೂ ಅವರಿಗೆ ಸಿಗದಿದ್ದರೆ ಹೇಗೆ ? ಆದ್ದರಿಂದ ಅವರಿಗೆ 200–250 ರೂಪಾಯಿಗಳಿಗೆ ಮಾಸಾಶನವನ್ನು ಹೆಚ್ಚಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಜನ ಸಾಹಿತಿಗಳು ಮತ್ತು ಕಲಾವಿದರುಗಳಿದ್ದಾರೆ. ಅಂಥವರನ್ನು ಸರ್ಕಾರದವರೇ ಗುರುತಿಸಿ ಅವರಿಗೆ ಮಾಸಾಶನವನ್ನು ಮಂಜೂರು ಮಾಡಿ ಅಲ್ಲಿಗೇ ಮಾಸಾಶನವನ್ನು ತಲಪಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಎಲ್ಲ ಕೆಲಸಕಾರ್ಯಗಳನ್ನೂ ಸರ್ಕಾರದಿಂದ ನಿರೀಕ್ಷಿಸಿ ಸರ್ಕಾರ ಇದನ್ನು ಮಾಡಿಕೊಟ್ಟರೆ ಸಾರ್ವಜನಿಕರ ಪರವಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯದಲ್ಲಿ ಐತಿಹಾಸಿಕವಾದ ಒಂದು ಬದಲಾವಣೆಯಾಗಿದೆ. ಯಾವಾಗ ನೋಡಿದರೂ ಎರಡೂ ಕಡೆಯ ಸದಸ್ಯರು ಮಾತನಾಡುವಾಗ 35 ವರ್ಷಗಳ ನಂತರ ಬದಲಾವಣೆಯಾಗಿದೆ ಎಂದು ಹೇಳುತ್ತಿದ್ದಾರೆ. ನಾನು 35 ವರ್ಷ ಎಂದು ಹೇಳುವುದಿಲ್ಲ; ಅವನ್ನು ತಿಂಗಳಿಗೆ ಪರಿವರ್ತಿಸಿ 420 ತಿಂಗಳ ನಂತರ ಬದಲಾವಣೆಯಾಗಿದೆ ಎಂದು ಹೇಳುತ್ತೇನೆ. ಇಲ್ಲಿ ಇಷ್ಟು ಬದಲಾವಣೆಯಾದ ಮೇಲೆ ಶಿಕ್ಷಣ ಕ್ಷೇತ್ರದಲ್ಲಿ ಕೂಡ ಬಹಳಷ್ಟು ಬದಲಾವಣೆಯನ್ನು ಸಮಾಜ ನಿರೀಕ್ಷಿಸುತ್ತಿದೆ. ಶಿಕ್ಷಣ ಮಂತ್ರಿಗಳು ಅನೇಕ ಕಡೆ ಸಮಗ್ರ ಶಿಕ್ಷಣ ಮಸೂದೆಯನ್ನು ತರುತ್ತೇವೆಂದು ಹೇಳುತ್ತಿದ್ದರು. ಒಂದು ದಿವಸ ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಬಹಳಷ್ಟು ಸಲ ಸಮಗ್ರ ಶಿಕ್ಷಣ ಮಸೂದೆ ಎಂದು ಹೇಳುತ್ತಿದ್ದರು. ನಾನು ಆಗ ಮಧ್ಯ ಪ್ರವೇಶಿಸಿ ಸಮಗ್ರ ಶಿಕ್ಷಣ ಎಂಬ ಪದವನ್ನು ಉಪಯೋಗಿಸಬೇಡಿ. ಅದು ಬರೀ ಶಿಕ್ಷಣ ಮಸೂದೆ, ಸಮಗ್ರ ಬದಲಾವಣೆಯನ್ನು ಅದರಲ್ಲಿ ತಂದಿಲ್ಲ, ಸಮಗ್ರ ಚಿಂತನೆಯನ್ನು ಈ ಸರ್ಕಾರ ಮಾಡಲಿಕ್ಕೆ ಪ್ರಯತ್ನ ಮಾಡಿಲ್ಲ ಎಂದು ಹೇಳಿದೆ. ಈಗಲಾದರೂ ಸರ್ಕಾರ ಸಮಗ್ರವಾದ ಶಿಕ್ಷಣದ ಬಗ್ಗೆ ಯೋಚನೆ ಮಾಡಿ ಬದಲಾವಣೆ ತರುತ್ತದೆಂದು ಅಪೇಕ್ಷಿಸುತ್ತೇನೆ. ಇವತ್ತು ಶಿಕ್ಷಣ ಇಲಾಖೆ ಬೇಡಿಕೆ ಬಗ್ಗೆ ನಾನು ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳಬೇಕೆಂದರೆ 4 ಕ್ಷೇತ್ರ ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ 43,40,749 ಜನ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಶಿಕ್ಷಕರು 1,08,481 ಜನರಿದ್ದಾರೆ. ಅಂದರೆ ಶಿಕ್ಷಕ ವಿದ್ಯಾರ್ಥಿಯ ಪ್ರಮಾಣ 1:44. 44 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು ಇರತಕ್ಕ ವ್ಯವಸ್ಥೆ ಇದೆ. ಖಾಸಗಿ ಕ್ಷೇತ್ರದಲ್ಲಿ ಅದರ ಸ್ಥಿತಿ ಇನ್ನೂ ಶೋಚನೀಯವಾಗಿದೆ. ಅಲ್ಲಿ 8,15,000 ಜನ ವಿದ್ಯಾರ್ಥಿಗಳಿದ್ದರೆ 17,570 ಜನ ಶಿಕ್ಷಕರಿದ್ದಾರೆ. ಇದರ ಪ್ರಮಾಣ 1 : 50 ಆಗುತ್ತದೆ. ಅಂದರೆ 50 ಜನ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರಿದ್ದಾರೆ. ಶಿಕ್ಷಣ ತಜ್ಞರ ಅಭಿಪ್ರಾಯ 1 : 30 ಅಂದರೆ 30 ಜನ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಇದ್ದರೆ ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ಗಮನ ಹರಿಸಿ ಅವರ ಅಭಿವೃದ್ಧಿಯನ್ನು ನೋಡುತ್ತಾ ಶಿಕ್ಷಣ ನೀಡಬಹುದು ಎಂಬುದಿದೆ. ಇದನ್ನೆಲ್ಲಾ ನೋಡಿದರೆ ಪ್ರಾಥಮಿಕ ಹಂತದಲ್ಲಿ ಶಿಕ್ಷಣದ ವ್ಯವಸ್ಥೆ ಸರಿಯಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಸರ್ಕಾರ ಈ ಬಗ್ಗೆ ಯೋಚನೆ ಮಾಡುತ್ತದೆಂದು ನಾನು ಆಶಿಸುತ್ತೇನೆ. ಇನ್ನು ಶಾಲಾ ಕಟ್ಟಡದ ಬಗ್ಗೆ ಹೇಳುತ್ತೇನೆ. ಈಗ ಮಾತನಾಡಿದ ಶಾಸಕಮಿತ್ರರು ಶಾಲಾ ಕಟ್ಟಡದ ಬಗ್ಗೆ ಹೇಳಿದ್ದಾರೆ. ಯಾವ ಊರಿಗೆ ಹೋದರೂ ಶಾಲಾ ಕಟ್ಟಡ ಇಲ್ಲ ; ಕಟ್ಟಡ ಇದ್ದರೆ ಉಪಾಧ್ಯಾಯರಿಲ್ಲ ; ಉಪಾಧ್ಯಾಯರಿದ್ದರೆ ವಿದ್ಯಾರ್ಥಿಗಳಿರುವುದಿಲ್ಲ ; ಇಂಥ ಪರಿಸ್ಥಿತಿ ಇದೆ. ಕೆಲವು ಶಾಲೆಗಳು ನಡೆಯುತ್ತಿರುವ

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಜಾಗ ಯಾವೆಂದರೆ ಚಾವಡಿಗಳು ; ದೇವಸ್ಥಾನಗಳು ಮತ್ತು ಮಸೀದಿಗಳು. ಈ ಸ್ಥಿತಿ ಕೂಡ ಶೋಚನೀಯ ವಾದುದು. ಒಂದೊಂದು ಕಡೆ 100–200 ವಿದ್ಯಾರ್ಥಿಗಳಿಗೆ ಒಬ್ಬರು ಅಥವಾ ಇಬ್ಬರು ಉಪಾಧ್ಯಾಯ ರಿರುತ್ತಾರೆ. ಪ್ರಾಥಮಿಕ ಶಾಲೆ ವಿಷಯ ಮಾತ್ರವಲ್ಲ; ಮೊನ್ನೆ 'ಮುಂಜಾನೆ' ಪತ್ರಿಕೆಯಲ್ಲಿ ಸೋಮವಾರ ಪೇಟೆ ಕಾಲೇಜಿನ ಬಗ್ಗೆ ಒಂದು ವರದಿ ಬಂದಿತ್ತು. ಅದಕ್ಕೆ ಸರಿಯಾದ ಕಟ್ಟಡ ಇಲ್ಲ ಎಂದು ಅದರಲ್ಲಿ ವರದಿ ಯಾಗಿದೆ. ಕಾಲೇಜಿಗೆ ಕಟ್ಟಡ ಇಲ್ಲ ಎಂದರೆ ಪ್ರಾಥಮಿಕ ಶಾಲಾ ಕಟ್ಟಡದ ಬಗ್ಗೆ ಹೇಳಬೇಕಾಗಿಲ್ಲ. ಶಿಕ್ಷಕರು ಹಳ್ಳಿಗಳಿಗೆ ವರ್ಗ ಮಾಡಿದರೆ ಹೋಗುವುದಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ಕಾರಣ ಏನು ? ಶಿಕ್ಷಕರಿಗೆ ಹಳ್ಳಿಗಳಲ್ಲಿ ಇರುವುದಕ್ಕೆ ವಾಸದ ಮನೆಗಳಿಲ್ಲ. ಒಬ್ಬ ಉಪಾಧ್ಯಾಯನಿಗೆ 8–10 ಕೊಠಡಿ ಇರತಕ್ಕ ಮನೆಯ ಅವಶ್ಯಕತೆ ಇಲ್ಲ. ಎರಡು ಮೂರು ಕೊಠಡಿ ಇರತಕ್ಕ ಮನೆ ಕೊಟ್ಟರೆ ಉಪಾಧ್ಯಾಯರು ಅಲ್ಲಿ ಹೋಗಿ ನೆಲೆಸುತ್ತಾರೆ. ಆ ರೀತಿ ವಸತಿ ಸೌಕರ್ಯ ಮಾಡಿಕೊಟ್ಟರೆ ಉಪಾಧ್ಯಾಯರು ಹಳ್ಳಿಯಲ್ಲಿ ಇದ್ದುಕೊಂಡು ಮಕ್ಕಳಿಗೆ ಪಾಠ ಹೇಳತಕ್ಕ ಸನ್ನಿವೇಶ ನಿರ್ಮಾಣವಾಗಬಹುದು. ಈಗ ಹತ್ತಿರದ ಯಾವುದಾದರೂ ಒಂದು ಊರಿನಲ್ಲಿ ಇದ್ದುಕೊಂಡು ಹಳ್ಳಿಗೆ ಹೋಗಿ ಬರಬೇಕಾಗಿದೆ. ಒಬ್ಬ ಹರಿಜನ ಉಪಾಧ್ಯಾಯರಿಗೆ ವರ್ಗ ಆಗಬೇಕಾಗಿತ್ತು ಎಂದು ಮಂತ್ರಿಗಳ ಹತ್ತಿರ ಕೇಳಿದಾಗ ಅವರು ಮಾಡಿಕೊಟ್ಟರು. ಕಾರಣ ಏನೆಂದರೆ ಆ ಹರಿಜನ ಉಪಾಧ್ಯಾಯ ನಿಗೆ ಯಾರೂ ಹಳ್ಳಿಯಲ್ಲಿ ಮನೆ ಕೊಡತಕ್ಕ ವಾತಾವರಣ ಇರಲಿಲ್ಲ. ಸಾಮಾಜಿಕ ಪರಿಸ್ಥಿತಿ ಹೀಗಿದೆ. ಆ ಕಾರಣಕ್ಕೋಸ್ಕರ ಉಪಾಧ್ಯಾಯರು ಯಾವುದಾದರೂ ನಗರಕ್ಕೆ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ಕೇಳಿದರು. ಮಂತ್ರಿಗಳು ಟ್ರಾನ್ಸ್‌ಫರ್ ಮಾಡಿಕೊಟ್ಟರು. ಇಂಥ ಪರಿಸ್ಥಿತಿ ರಾಜ್ಯದಲ್ಲಿ ಇನ್ನೆಷ್ಟಿದೆಯೋ ಗೊತ್ತಿಲ್ಲ. ಈ ವಸತಿ ಸಮಸ್ಯೆಯಿಂದಾಗಿ ಶಿಕ್ಷಕರು ಹಳ್ಳಿಗಳಿಗೆ ಹೋಗತಕ್ಕ ಸನ್ನಿವೇಶ ಇಲ್ಲ. ಪಟ್ಟಣದಲ್ಲಿರತಕ್ಕ ಶಿಕ್ಷಕರಿಗೆ ಸಿಟಿ ಅಲೋಯನ್ಸ್ ಕೊಟ್ಟಹಾಗೆ ಗ್ರಾಮಾಂತರ ಪ್ರದೇಶದಲ್ಲಿರುವವರಿಗೂ ಗ್ರಾಮಾಂತರ ಭತ್ಯ ಕೊಟ್ಟರೆ ಶಿಕ್ಷಕರು ಹಳ್ಳಿಗಳಿಗೆ ಹೋಗಿ ಪಾಠ ಹೇಳಿ ಇರುವುದಕ್ಕೆ ಪ್ರಯತ್ನ ಮಾಡಬಹುದು. ಅಥವಾ 8–10 ಕಿಲೋಮೀಟರ್ ಹೋಗಿ ಬರುವಾಗ ಬೇರೆ ಇಲಾಖೆಗಳಲ್ಲಿ ಯಾವ ರೀತಿ ಟ್ರಾವಲಿಂಗ್ ಅಲೋಯನ್ಸ್ ಕೊಡುತ್ತಾರೋ ಆ ರೀತಿ ಶಿಕ್ಷಕರಿಗೂ ಅಲೋಯನ್ಸ್ ಕೊಟ್ಟರೆ ಬಹಳಷ್ಟು ಜನ ಹಳ್ಳಿಗಳಿಗೆ ಹೋಗುವುದಕ್ಕೆ ಪ್ರಯತ್ನ ಪಡುತ್ತಾರೆ. ವರ್ಗಾವಣೆ ವಿಷಯದಲ್ಲಿ ಒಂದು ವಿಷಯವನ್ನು ಸದನದಲ್ಲಿ ಹೇಳಬೇಕಾಗಿದೆ. ಎಲ್ಲಾ ಇಲಾಖೆಗಳಿಗೂ ಕೂಡ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ಜನರು ಹೋಗತಕ್ಕ ಪರಿಸ್ಥಿತಿ ಇದೆ. ಮೊನ್ನೆ ಪಿ. ಡಬ್ಲ್ಯು. ಡಿ. ಇಲಾಖೆ ಬೇಡಿಕೆ ಮೇಲೆ ಚರ್ಚೆ ಸಮಯದಲ್ಲಿ ಈ ವರ್ಗಾವಣೆ ವಿಷಯ ಚರ್ಚೆಯಾಗಿ ಆ ಬಗ್ಗೆ ಹಕ್ಕುಬಾಧ್ಯತಾ ನಿರ್ಣಯ ಕೂಡ ಸದನದ ಮುಂದೆ ಬಂತು. ಟೀಚರ್ಸ್ ಟ್ರಾನ್ಸ್‌ಫರ್ಸ್ ಬಗ್ಗೆ ಹೇಳುವು ದಾದರೆ ಸುಮಾರು 25 ಸಾವಿರ ವರ್ಗಾವಣೆ ಅರ್ಜಿಗಳು ಬಂದಿದ್ದವೆಂದು ಅದರಲ್ಲಿ ಸುಮಾರು 16 ಸಾವಿರ ಕಾಲಕ್ಕೆ ಮುಂಚಿತ ವರ್ಗಾವಣೆ ಬಗ್ಗೆ ಅರ್ಜಿಗಳಾಗಿದ್ದವೆಂದು ಮಾನ್ಯ ವಿದ್ಯಾ ಮಂತ್ರಿಗಳಿಂದ. ನಾನು ಕೇಳಿ ತಿಳಿದುಕೊಂಡೆ ಇದಕ್ಕೆ ಕಾರಣ ಏನು ? ಕಾರಣ ಇಷ್ಟೆ: ಆಯಾಯ ಮಂತ್ರಿಗಳಿಗೆ ಆ ಅಧಿಕಾರವನ್ನು ಕೊಟ್ಟಿರುವುದು. ಒಬ್ಬ ಮಂತ್ರಿಗಳ ಹತ್ತಿರ ನಾನು ಕೇಳಿದೆನು, ಏಕೆ ನೀವು ಈ ವರ್ಗಾವಣೆಯ ಅಧಿಕಾರವನ್ನು ಸ್ವೀಕಾರ ಮಾಡಿ ದ್ದೀರಿ ಎಂದು. ಆ ಬಗ್ಗೆ ಆ ಮಂತ್ರಿಗಳು ಹೇಳಿದ್ದನ್ನು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡು ತ್ತೇನೆ. ನಾವು ಮಂತ್ರಿಗಳು, ಸರ್ಕಾರ ಉಳಿಯಬೇಕಾದರೆ ಎಂ.ಎಲ್.ಎ.ಗಳ ಮೇಲೆ ಡಿಪೆಂಡ್ ಆಗಬೇಕು. ಎಂ.ಎಲ್.ಎ. ಗಳಿಗೆ ಟ್ರಾನ್ಸ್‌ಫರ್‌ಗಳ ಬಗ್ಗೆ ಅಧಿಕಾರ ಕೊಡದೆ ಹೋದರೆ ಸರ್ಕಾರ ಹೇಗೆ ಉಳಿಯುತ್ತದೆ ಎಂದು ಆ ಮಂತ್ರಿಗಳು ಹೇಳಿದರು. ನಿಜವಾಗಿಯೂ ಇದು ಒಳ್ಳೆಯದು ಅಲ್ಲ. ನಾನು ಹೇಳುತ್ತೇನೆ, ಯಾವ ಶಾಸಕರಿಗೇ ಆಗಲೀ ಟ್ರಾನ್ಸ್‌ಫರ್‌ಗೆ ರೆಕಮೆಂಡ್ ಮಾಡುವ ಅಧಿಕಾರವನ್ನು ತಪ್ಪಿಸಬೇಕು. ಇದನ್ನು ತಪ್ಪಿಸ ದಿದ್ದರೆ ನಾನು ಹೇಳುತ್ತೇನೆ, ಕಳೆದ 8 ತಿಂಗಳಿಂದ ನಾವು ವರ್ಗಾವಣೆ ವಿಷಯ ಬಿಟ್ಟರೆ ಬೇರೆ ಕೆಲಸವನ್ನು ಮಾಡುವುದಕ್ಕೇ ಆಗಿಲ್ಲ. ಈ ಬಗ್ಗೆ ಪ್ರತಿನಿತ್ಯ ಶಾಸಕರ ಭವನದ ಕೊಠಡಿಗಳ ಮುಂದೆ ದೊಡ್ಡ ಜಾತ್ರೆ, ಮಂತ್ರಿಗಳ ಮನೆಗಳ ಮುಂದೆ ಜಾತ್ರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟ್ರಾನ್ಸ್‌ಫರ್ ಮಾಡದೆ ಹೋದರೆ ಸರ್ಕಾರ ಉಳಿಯುವು ದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಟ್ರಾನ್ಸ್‌ಫರ್ ಮಾಡಿ, ಮಾಡಿ ಸರ್ಕಾರವನ್ನು ಉಳಿಸಿಕೊಂಡರೆ ?

ಶ್ರೀ ಎಂ. ಆನಂದರಾವ್.— ಈ ವರ್ಗಾವಣೆ ಎನ್ನುವುದು ಸ್ಟಿಲ್‌ಓವರ್ ಆಗಿದೆ. ಈ ವರ್ಗಾವಣೆ ಗಳ ಬಗ್ಗೆ ನಾನು ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಶಿವಮೊಗ್ಗ ನಗರದಲ್ಲಿನ ಉಪಾಧ್ಯಾಯರ ಲಿಸ್ಟನ್ನು ನಾನು ತರಿಸಿದ್ದೇನೆ. 128 ಜನ ಉಪಾಧ್ಯಾಯರು 6 ವರ್ಷದಿಂದ 20 ವರ್ಷಗಳವರೆಗೆ ಶಿವಮೊಗ್ಗದಲ್ಲೇ ಕೆಲಸ ಮಾಡುತ್ತಿದ್ದಾರೆ. ಇದರ ಅರ್ಥ ಏನೆಂದರೆ ರಾಜಾಜಿನಗರ, ಇಸ್ಲಾಂಪುರ, ಮಿಳಗಟ್ಟೆ ಹೀಗೆ ಇಲ್ಲಿಲ್ಲೇ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುತ್ತಾ ಇಲ್ಲಿಲ್ಲೇ ಕೆಲಸ ಮಾಡುತ್ತಿದ್ದಾರೆ. ಬೇರೆಯವರು ನಗರ ಗಳಲ್ಲಿ ಕೆಲಸ ಮಾಡಲು ಅಪೇಕ್ಷೆ ಪಟ್ಟರೆ ಅವರಿಗೆ ಅವಕಾಶ ಇಲ್ಲ. ಆದ್ದರಿಂದ ಈ ವರ್ಗಾಗಣೆ ನೀತಿಯನ್ನು ಸರ್ಕಾರ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಯಾವುದೇ ಒಂದು ಊರಿನಲ್ಲಿ ಸರ್ಕಾರಿ ನೌಕರ ನಾಗಲೀ, ಟೀಚರ್ ಆಗಲೀ ಆ ಊರಿನಲ್ಲಿ ಎಷ್ಟು ವರ್ಷಗಳಿಂದ ಅಲ್ಲಿ ಕೆಲಸದಲ್ಲಿ ಇದ್ದಾನೆ ಎಂಬುದನ್ನು ಪರಿಗಣಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ಪಠ್ಯಪುಸ್ತಕಗಳ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾ

ಗಿದೆ. ಈಗ ಪ್ರತಿ ವರ್ಷವೂ ಶಾಲಾ ಕಾಲೇಜುಗಳು ಪ್ರಾರಂಭವಾದ ಕೂಡಲೇ ಮಕ್ಕಳಿಗೆ ಪಠ್ಯಪುಸ್ತಕಗಳು ಸರಿಯಾಗಿ ಸಿಗುತ್ತಾ ಇಲ್ಲ. ಇದಕ್ಕೆ ಕಾರಣಗಳು ಅನೇಕ ಇವೆ. ನಮ್ಮ ಶಿವಮೊಗ್ಗ ಪುಸ್ತಕ ಭಂಡಾರದಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿಯಷ್ಟು ಬೆಲೆ ಬಾಳುವ ಉಪಯೋಗಕ್ಕೆ ಬಾರದ ಪುಸ್ತಕಗಳು ಇರ ಬೇಕಾದರೆ ಇನ್ನು ರಾಜ್ಯದ ಎಲ್ಲಾ ಕಡೆ ಎಷ್ಟು ಇಂತಹ ಪುಸ್ತಕಗಳು ಇರಬಹುದೆಂದು ಕೇಳಲಾಗಿ ಆ ರೀತಿ ಸುಮಾರು 25 ರಿಂದ 30 ಲಕ್ಷ ರೂಪಾಯಿವರೆಗೆ ಪುಸ್ತಕಗಳು ಕೊಳೆಯುತ್ತಾ ಬಿದ್ದಿವೆಯೆಂದು ತಿಳಿದುಬಂತು. ಇವನ್ನು ಅಲ್ಲಿ ಇಟ್ಟುಕೊಂಡಿರುವುದರಿಂದ ಅಲ್ಲಿ ಬಂದ ಹೊಸ ಪುಸ್ತಕಗಳನ್ನು ಇಡಲು ಜಾಗವಿಲ್ಲದೆ. ಈ ಹಳೇ ಪುಸ್ತಕಗಳನ್ನು ತೂಕಕ್ಕೆ ಹಾಕಿ ಮಾರಾಟ ಮಾಡಬೇಕೆಂದರೆ ಅದಕ್ಕೆ ಅವರಿಗೆ ಅಧಿಕಾರ ಇಲ್ಲ. ಕಾರಣ ಅವು ಹಾಗೆ ಮಾರಾಟವಾಗಬೇಕಾದರೆ ಕೇಂದ್ರಸ್ಥಳಕ್ಕೆ ಬಂದು ಅಲ್ಲಿಂದ ಡಿಸ್‌ಪೋಸ್ ಆಗಬೇಕು. ಇದು ಬೇಗ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ರೀತಿ ಪುಸ್ತಕಗಳು ಕೆಲಸಕ್ಕೆ ಬಾರದವು ಏಕೆ ಆಗುತ್ತಿವೆ ಎಂದರೆ ಕೇವಲ 2 ಅಥವಾ 3 ವರ್ಷಗಳಲ್ಲಿ ಇವರ ಪುಸ್ತಕಗಳನ್ನು ಬದಲಾವಣೆ ಮಾಡುವ ನೀತಿ ಇಟ್ಟುಕೊಂಡಿರು ವುದು. ಯಾವುದಾದರೂ ಒಬ್ಬ ಲೇಖಕ, ಪಬ್ಲಿಷರ್ ಹೊಸ ಪುಸ್ತಕ ಬರೆದು ಅದನ್ನು ಪಬ್ಲಿಷ್ ಮಾಡಿ ಅದನ್ನು ಪಠ್ಯಪುಸ್ತಕವನ್ನಾಗಿ ತೆಗೆದುಕೊಳ್ಳುವ ಬಗ್ಗೆ ಸರ್ಕಾರದಲ್ಲಿ ತನ್ನ ಪ್ರಭಾವ ಬೀರುತ್ತಾನೆ. ಆಗ ಅದು ಪಠ್ಯಪುಸ್ತಕವಾಗಿ ಹಿಂದಿನ ಪುಸ್ತಕಗಳು ಹಾಗೇ ಉಳಿಯುತ್ತವೆ. ಹಾಗೂ ಹೊಸ ಪುಸ್ತಕಗಳು ಬಿಡುಗಡೆ ಆದಾಗಲೂ ಸಹ ಅವು ಸಕಾಲಕ್ಕೆ ವಿದ್ಯಾರ್ಥಿಗಳ ಕೈ ಸೇರುವುದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರ ಒಂದು ನೀತಿಯನ್ನು ಅನುಸರಿಸಬೇಕು. ಕನಿಷ್ಟಪಕ್ಷ 10 ವರ್ಷಗಳವರೆಗೆ ಸರ್ಕಾರ ಪುಸ್ತಕಗಳನ್ನು ಬದಲಾವಣೆ ಆಗದಹಾಗೆ ನೋಡಿಕೊಳ್ಳಬೇಕು. ವಿಜ್ಞಾನ, ಗಣಿತ ಇಂತಹ ವಿಷಯಗಳಲ್ಲಿ ಆಗಾಗ ವಿಷಯಗಳ ಬದಲಾವಣೆ ಆಗುತ್ತಿರುತ್ತವೆ. ಇಂತಹ ಪುಸ್ತಕಗಳನ್ನು ಬೇಕಾದರೆ ಬದಲಾವಣೆ ಮಾಡಿ ಮಿಕ್ಕ ಸಾಮಾನ್ಯ ವಿಷಯದ ಪಠ್ಯಪುಸ್ತಕಗಳು 10 ವರ್ಷಗಳವರೆಗೆ ಬದಲಾವಣೆ ಆಗದಹಾಗೆ ನೋಡಿಕೊಳ್ಳಬೇಕು. ಇನ್ನು ಶಿಕ್ಷಕರ ಬೇಡಿಕೆ ಗಳು ಬಹಳ ಇದ್ದು ಅವರ ಬೇಡಿಕೆಗಳಿಗೆ ಸರ್ಕಾರ ಗಮನ ನೀಡಿ ಅವುಗಳನ್ನು ಪೂರೈಕೆ ಮಾಡಿಲ್ಲವೆಂದು ಹೇಳು ತ್ತೇನೆ. ಕಾಲ ನಿಯಮಿತ ಬಡ್ತಿಯನ್ನು ಖಾಸಗಿ ಶಾಲಾ ನೌಕರರಿಗೂ ವಿಸ್ತರಿಸಬೇಕೆಂದು ಹೇಳುತ್ತೇನೆ. ಕೆಲವು ಜಿಲ್ಲೆಗಳಲ್ಲಿ ಖಾಸಗಿ ಶಾಲಾ ನೌಕರರಿಗೂ ಈ ಕಾಲ ನಿಯಮಿತ ಬಡ್ತಿ ಕೊಟ್ಟಿದ್ದು ಕೆಲವು ಜಿಲ್ಲೆಗಳಲ್ಲಿ ಕೊಟ್ಟಿರುವುದಿಲ್ಲ. ಹೆಡ್ಮಾಸ್ಟರ್ಸ್ ಹಾಗೂ ಪ್ರಿನ್ಸಿಪಾಲ್ಸ್ ಏನಿದ್ದಾರೆ ಅವರು ರಜಾ ದಿನಗಳಲ್ಲೂ ಶಾಲೆಗೆ ಬಂದು ಕೆಲಸ ಮಾಡಬೇಕಾಗಿದೆ. ಆದರೆ ಇತರ ಟೀಚರ್ಸ್ ಹಾಗೂ ನೌಕರವರ್ಗದವರು ರಜಾ ದಿನಗಳಲ್ಲಿ ಶಾಲೆಗೆ ಬರಬೇಕಾದ ಪ್ರಮೇಯವಿರುವುದಿಲ್ಲ. ಆದ್ದರಿಂದ ಇವರಿಗೂ ಕೂಡ ರಜಾ ಸೌಲಭ್ಯವನ್ನು ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ವಿದ್ಯಾರ್ಥಿನಿಲಯಗಳ ಬಗ್ಗೆ ನಮ್ಮ ಮಿತ್ರರು ಹೇಳಿದ್ದಾರೆ. ಮೊನ್ನೆ ಶಿವಮೊಗ್ಗ ಹಾಗೂ ಬೆಂಗಳೂರಿನಲ್ಲಿ ಒಂದೇ ವೇಳೆಯಲ್ಲಿ ಎರಡು ಘಟನೆಗಳು ನಡೆದಿವೆ. ಬೆಂಗಳೂರಿನಲ್ಲಿ ವಿದ್ಯಾರ್ಥಿನಿಲಯದ ಹುಡುಗ ರನ್ನು ಹೊರಗಡೆ ಹಾಕಿದಘಟನೆ ನಡೆಯಿತು. ಶಿವಮೊಗ್ಗದಲ್ಲಿ ಕೂಡಾ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಕ್ಕಾಗಿ ಕಟ್ಟಿಡದ ಬೀಗ ಒಡೆದು ಒಳಗೆ ಹೋಗಿ ವಿದ್ಯಾರ್ಥಿನಿಲಯದ ಕಟ್ಟಡವನ್ನು ತಮ್ಮ ಕೈಗೆ ತೆಗೆದುಕೊಂಡಿದ್ದಾರೆ. ಆದ್ದರಿಂದ ಹೇಳುತ್ತೇನೆ. ವಿದ್ಯಾರ್ಥಿನಿಲಯಗಳು ಸರ್ಕಾರಿ ಕಟ್ಟಡದಲ್ಲಿಯೇ ಇರಬೇಕು ಎಂದು. ಮಾನ್ಯ ವಿದ್ಯಾ ಮಂತ್ರಿಗಳು ಈ ಬಗ್ಗೆ ಗಮನ ಹರಿಸಬೇಕು. ಇನ್ನು ಓಟರ್ಸ್‌ಲಿಸ್ಟ್ ಮಾಡುವ ಬಗ್ಗೆ ಹಾಗೂ ಸೆನ್ಸಸ್ ಮಾಡುವ ಬಗ್ಗೆ ಶಾಲಾ ಉಪಾಧ್ಯಾಯರನ್ನು ನೇಮಿಸಿಕೊಳ್ಳುವುದರಿಂದ ಶಾಲೆಗಳಲ್ಲಿ ಪಾಠ ಪ್ರವಚನಗಳು ಕಡಿಮೆ ಆಗುತ್ತಿವೆ. ಒದಸಲ ವೋಟರ್ಸ್ ಲಿಸ್ಟ್ ತಯಾರಿಸಲು ಟೀಚರ್ಸ್ ನೇಮಕ ಮಾಡಿಕೊಂಡಿದ್ದರಿಂದ ಸುಮಾರು 2 ತಿಂಗಳ ಕಾಲ ಶಾಲೆಗಳನ್ನು ಮುಚ್ಚತಕ್ಕ ಪರಿಸ್ಥಿತಿ ಬಂತು. ಆದ್ದರಿಂದ ಕಾರ್ಯಗಳ ಬಗ್ಗೆ ಇವರನ್ನು ನೇಮಕ ಮಾಡದೇ ಈ ಬಗ್ಗೆ ಹಂಗಾಮಿ ನೌಕರರನ್ನು ನೇಮಿಸಿಕೊಂಡು ಕೆಲಸ ಮಾಡಿಸಬೇಕೆಂದು ಸಂಬಂಧಪಟ್ಟ ಇಲಾಖೆಯವರಿಗೆ ಸೂಚನೆ ಕೊಡಬೇಕೆಂದೂ, ಇದರಿಂದಾಗಿ ವಿದ್ಯಾರ್ಥಿಗಳಿಗೆ ಸಿಗತಕ್ಕ ಶಿಕ್ಷಣಕ್ಕೆ ಇದು ಒಂದು ಅಡ್ಡಿ ಆಗಬಾರದೆಂದು ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಬೇಕಾದರೆ ಇವರು ಬೇರೆ ಇಲಾಖೆಯ ನೌಕರರನ್ನು ಈ ಬಗ್ಗೆ ಉಪಯೋಗ ಮಾಡಿಕೊಳ್ಳಲಿ. ಎಲ್ಲಾ ಇಲಾಖೆಗಳಿಗಿಂತಲೂ ಮುಖ್ಯವಾದ ಇಲಾಖೆ ವಿದ್ಯಾ ಇಲಾಖೆ. ಸಂಪುಟದಲ್ಲಿ ಕೂಡ ವಿದ್ಯಾಮಂತ್ರಿಗಳಿಗೆ ಎರಡನೆಯ ಸ್ಥಾನ ಕೊಡ ಬೇಕಾಗಿತ್ತು. ಒಟ್ಟಿನಲ್ಲಿ ಶಿಕ್ಷಣಕ್ಕೆ ಸರ್ಕಾರ ಸರಿಯಾದ ಬುನಾದಿ ಹಾಕಲಿ ಎಂದು ಹೇಳಿ, ನನಗೆ ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಶಿಕ್ಷಣ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳಿಗೆ ನನ್ನ ಒಪ್ಪಿಗೆಯನ್ನು ಸೂಚಿಸುತ್ತಾ ಒಂದೆರಡು ಅಭಿಪ್ರಾಯ ಗಳನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ಹಿಂದಿನ ಸರ್ಕಾರವಾಗಲೀ ಅಥವಾ ಈಗ ಇರತಕ್ಕಂಥ ಸರ್ಕಾರವಾಗಲೀ ಖಾಸಗೀ ಶಿಕ್ಷಣವನ್ನು ರಾಷ್ಟ್ರೀಕರಣ ಮಾಡತಕ್ಕಂಥ ಯೋಜನೆ ಯನ್ನು ಹಾಕಿಕೊಳ್ಳಲಿಲ್ಲ. ರಾಷ್ಟ್ರೀಕರಣ ಮಾಡದಿದ್ದರೆ, ಸಾಮಾನ್ಯ ಜನರಿಗೆ ಶಿಕ್ಷಣ ಲಭಿಸುವುದು ಬಹಳ

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಷ್ಟ. ಶಿಕ್ಷಣ ಪದ್ಧತಿ ಬದಲಾವಣೆಯಾಗಬೇಕೆಂದು ನಾವೆಲ್ಲಾ ಹೇಳುತ್ತಿದ್ದೇವೆ. ಆದರೆ, ಬದಲಾವಣೆಯಾಗುವಂಥ ಪದ್ಧತಿಯನ್ನು ಅನುಸರಿಸುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಶಿಕ್ಷಣ ಸಚಿವರು ಬಹಳ ಅನುಭವಿಗಳು ಇದ್ದಾರೆ; ಇವತ್ತು ನಾವು ಕೊಡುವಂಥ ಶಿಕ್ಷಣ ಬರೀ ಗುಮಾಸ್ತರನ್ನು ತಯಾರು ಮಾಡುವಂಥಾದ್ದು ಏನಿದೆ ಅದನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ರಾಜ್ಯದ ಅನೇಕ ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲ. ಇದರಿಂದ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅಡಚಣೆಯಾಗುತ್ತದೆ, ಇದನ್ನು ತುಂಬುವುದಕ್ಕೆ ಏನು ಕೊರತೆ ಇದೆಯೋ ಗೊತ್ತಿಲ್ಲ; ಇದರ ಕಡೆಗೂ ಸರ್ಕಾರ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಇವತ್ತು ಎಲ್ಲಕ್ಕಿಂತಲೂ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ಕೊಡುವುದು ಅಗತ್ಯ. ನಮ್ಮ ದೇಶ ಸ್ವಾತಂತ್ರ್ಯ ಪಡೆದು 37 ವರ್ಷಗಳಾದರೂ, ಶೇಕಡ 35 ರಷ್ಟು ಮಾತ್ರ ವಿದ್ಯಾವಂತರ ಸಂಖ್ಯೆ ಇದೆ. ಇದಕ್ಕೆ ಕಾರಣ ಏನು ? ಇದರ ಬಗ್ಗೆ ಸರ್ಕಾರದವರನ್ನು ಕೇಳಿದರೆ ಹಣದ ಕೊರತೆ; ಮತ್ತಿತರ ಇನ್ನೂ ಅನೇಕ ಕೊರತೆಗಳನ್ನು ಹೇಳುತ್ತಾರೆ. ಯಾವುದಕ್ಕೆ ಕೊರತೆ ಇದ್ದರೂ ವಿದ್ಯಾಭ್ಯಾಸಕ್ಕೆ ಮಾತ್ರ ಕೊರತೆಯನ್ನು ತೋರಿಸಬಾರದೆಂದು ಹೇಳುತ್ತೇನೆ. ಉದಾಹರಣೆಗೆ ರಷ್ಯಾ ದೇಶದ ಬಗೆ ಹೇಳುವುದಾದರೆ, 1917 ರಲ್ಲಿ ಅಲ್ಲಿ ಕ್ರಾಂತಿಯಾಗಿ ಅವರು ಸ್ವಾತಂತ್ರ್ಯವನ್ನು ಪಡೆದರು. ಸ್ವಾತಂತ್ರ್ಯ ಬಂದಾಗ ಆ ದೇಶದಲ್ಲಿ 7 ಪರ್ಸೆಂಟ್ ಮಾತ್ರ ವಿದ್ಯಾವಂತರಿದ್ದರು. ಇವತ್ತು ಆ ದೇಶದಲ್ಲಿ ನೂರಕ್ಕೆ ನೂರರಷ್ಟು ವಿದ್ಯಾವಂತರಾಗಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು 37 ವರ್ಷಗಳಾಯಿತು. ಸುಮಾರು 37 ವರ್ಷಗಳಾದರೂ ಕೂಡ, ಶೇಕಡ 35 ರಷ್ಟು ಮಾತ್ರ ವಿದ್ಯಾವಂತರಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾತಂತ್ರ್ಯ ಬಂದು ಸುಮಾರು 37 ವರ್ಷಗಳಾಯಿತು ಎಂದು ಹೇಳಿದರು. ನಮಗೆ ಸ್ವಾತಂತ್ರ್ಯ ಬಂದು ಸುಮಾರು 37 ವರ್ಷಗಳಾಯಿತು.

ಶ್ರೀ ಪಂಪಾಪತಿ.—ಸುಮಾರು ವರ್ಷಗಳನ್ನು ಒಳ್ಳೆಯ ವರ್ಷಗಳನ್ನಾಗಿ ಮಾರ್ಪಡಿಸಬೇಕು. ಇವತ್ತು ವಿದ್ಯಾ ಇಲಾಖೆಯ ಕರ್ತವ್ಯ ಏನು ? ಉತ್ತಮವಾಗಬೇಕಾದರೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ನಾನು ಆಗಲೇ ಹೇಳಿದಂತೆ ರಾಷ್ಟ್ರೀಕರಣ ಮಾಡದ ಹೊರತು ಎಲ್ಲರಿಗೂ ವಿದ್ಯಾಭ್ಯಾಸ ಕೊಡುವುದಕ್ಕಾಗುವುದಿಲ್ಲ.

(ಶ್ರೀ ಪಿ. ರಾಂದೇವ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ನಮ್ಮ ದೇಶದ ಪರಿಸ್ಥಿತಿ ಯಾವ ರೀತಿ ಇದೆ ಅಂದರೆ ಉಳ್ಳವರಿಗೆ ಎಲ್ಲಾ ಸೌಕರ್ಯಗಳೂ ಉಂಟು. ಇಲ್ಲದವರಿಗೆ ಯಾವ ಸೌಕರ್ಯಗಳೂ ಇಲ್ಲ. ಈ ಮನೆಯಲ್ಲಿ ನಮ್ಮ ನಾಯಕರ ಫೋಟೋಗಳನ್ನು ಹಾಕಿಕೊಂಡು ಕೂತಿದ್ದೇವೆ. ಅವರ ಉದ್ದೇಶ ಏನಿತ್ತು ? ಶಾಸಕರಾಗಿ, ಮಂತ್ರಿಗಳಾಗಿ ಅಧಿಕಾರ ನಡೆಸಬೇಕೆಂಬ ಉದ್ದೇಶ ಇರಲಿಲ್ಲ. ನಮ್ಮ ದೇಶದಲ್ಲಿ ಬಡತನ ಇದೆ; ನಿರುದ್ಯೋಗ ಇದೆ. ಅವಿದ್ಯಾವಂತರಿದ್ದಾರೆ, ಇದನ್ನೆಲ್ಲಾ ಹೋಗಲಾಡಿಸಬೇಕೆಂಬ ಕಳಕಳಿ ಇದ್ದುದರಿಂದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ, ನಮಗೆ ಸ್ವಾತಂತ್ರ್ಯ ಗಳಿಸಿಕೊಟ್ಟರು. ಆದರೂ ಇವತ್ತು ನಾವು ಪರಕೀಯರ ಒಂದು ದಾರಿಯಲ್ಲಿಯೇ ಮುಂದುವರೆಯುತ್ತಿದ್ದೇವೆ. ಇವತ್ತು ಮನಸ್ಸು ಮಾಡಿದರೆ ನಮ್ಮ ರಾಜ್ಯದಲ್ಲಿರತಕ್ಕ ಪ್ರತಿಯೊಂದು ಮಗುವಿಗೂ ವಿದ್ಯಾಭ್ಯಾಸ ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮಲ್ಲಿರತಕ್ಕ ನಿರುದ್ಯೋಗಿಗಳನ್ನು ಉಪಯೋಗ ಮಾಡಿಕೊಂಡು ಅವರ ಮೂಲಕ ವಿದ್ಯಾಭ್ಯಾಸವನ್ನು ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಶಾಲೆಗಳಿಗೆ ಕಟ್ಟಡಗಳನ್ನು ಒದಗಿಸುವ ಬಗ್ಗೆ ಮಹತ್ವ ಕೊಡಬೇಕೆಂದು ಹೇಳುತ್ತೇನೆ. ಅದರಲ್ಲಿಯೂ ಹಳ್ಳಿಗಾಡಿನ ಮಕ್ಕಳಿಗೆ ಶಾಲಾ ಕೊಠಡಿಗಳನ್ನು ಏರ್ಪಾಡು ಮಾಡಬೇಕು. ಪಟ್ಟಣದಲ್ಲಿರುವವರು ಹೇಗಾದರೂ ಮಾಡಿ, ಕಟ್ಟಡಗಳನ್ನು ಕಟ್ಟಿಸಿಕೊಳ್ಳುತ್ತಾರೆ. ಪ್ರಭಾವ ಬೀರಿ ವಂತಿಗೆಯನ್ನು ಕೂಡಿಸಿಕೊಂಡು ಕಟ್ಟಡಗಳನ್ನು ಕಟ್ಟಿಸುತ್ತಾರೆ. ಈಗ ಈ ಮಧ್ಯಾಹ್ನದ ಉಪಾಹಾರವನ್ನು ಮಕ್ಕಳಿಗೆ ಕೊಡುತ್ತಾರೆ. ಅದು ಕೇರ್ ಸಂಸ್ಥೆಯಿಂದ ಅಮೇರಿಕಾದವರು ಕಳುಹಿಸುವಂಥಾದ್ದು. ನಮ್ಮ ದೇಶ, ನಮ್ಮ ರಾಜ್ಯ, ಅನೇಕ ಹಳ್ಳಿಗಳಿಂದ ಕೂಡಿರತಕ್ಕದ್ದು. ಹಳ್ಳಿಗಳಲ್ಲಿ ರೈತರು, ಕೃಷಿಕಾರ್ಮಿಕರು ಇದ್ದಾರೆ. ಇವರ ಮಕ್ಕಳಿಗೆ ಊಟ ಕೊಡಲಿಕ್ಕೆ ಅವರಿಗೆ ಆಗುವುದಿಲ್ಲ, ಅವರಿಗೆ ಊಟ ಕೊಡತಕ್ಕ ಶಕ್ತಿ ಇರುವುದಿಲ್ಲ. ಆದ್ದರಿಂದ, ಅವರು ತಮ್ಮ ಮಕ್ಕಳನ್ನು ದನಗಳನ್ನು ಕಾಯಲಿಕ್ಕೆ, ಕುರಿಗಳನ್ನು ಕಾಯಲಿಕ್ಕೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಅಂತಹ ಮಕ್ಕಳಿಗೆ ಊಟ ಕೊಟ್ಟು ವಿದ್ಯಾಭ್ಯಾಸ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಅವರು ಆ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ತಮಿಳುನಾಡಿನಲ್ಲಿ ಈ ವ್ಯವಸ್ಥೆ ಮಾಡಿದ್ದಾರೆ. ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡತಕ್ಕ ವ್ಯವಸ್ಥೆಯನ್ನು ನಮ್ಮ ಸರ್ಕಾರ ಏತಕ್ಕೆ ಮಾಡಬಾರದು ? ಇವರು ಕಡ್ಡಾಯ ಶಿಕ್ಷಣ ಎಂದು ಹೇಳುತ್ತಾರೆ, ಇವರ ಕಡ್ಡಾಯ ಶಿಕ್ಷಣ ಪದ್ಧತಿ ನೋಡಿದರೆ, ಕಡ್ಡಾಯವೂ ಇಲ್ಲ, ಶಿಕ್ಷಣವೂ ಇಲ್ಲ, ಇದಕ್ಕೆ ಯಾವ ವ್ಯವಸ್ಥೆಯೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ನಿಮ್ಮ ಸರ್ಕಾರವೇ ?

ಶ್ರೀ ಪಂಪಾಪತಿ.—ಇದು ನಮ್ಮ ಸರ್ಕಾರವೇ, ಅದಕ್ಕೆ ಸಲಹೆ ಕೊಡುತ್ತಿದ್ದೇನೆ. ನಮ್ಮ ಸರ್ಕಾರದಿಂದ ಈ ಕೆಲಸ ಮಾಡಿಸತಕ್ಕ ಶಕ್ತಿಯನ್ನು ಪಡೆದಿದ್ದೇವೆ. ಅದಷ್ಟು ಜಾಗ್ರತೆ ಮಾಡಿಸುತ್ತೇವೆ. ಹಿಂದೆ ತಮ್ಮ ಸರ್ಕಾರ ಇತ್ತು, ತಾವು ಮಂತ್ರಿಗಳಾಗಿದ್ದಿರಿ, ಆಗ ಏನು ಪರಿಸ್ಥಿತಿ ಇತ್ತು; ಅದಕ್ಕಿಂತಲೂ ಉತ್ತಮ ಪರಿಸ್ಥಿತಿ

ಇವತ್ತು ಉಂಟಾಗಿದೆ. ಮತ್ತು ಉಂಟಾಗುತ್ತದೆ ಎನ್ನುವ ಭರವಸೆ ಇಟ್ಟುಕೊಂಡು ನಾವು ಮುನ್ನಡೆಯುತ್ತಿದ್ದೇವೆ. ಶಿಕ್ಷಣದ ಬಗ್ಗೆ ಮಾನ್ಯ ಸಚಿವರಲ್ಲಿ ಒಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ದಾವಣಗೆರೆಯ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಕೆ.ಬಿ. ಬಡಾವಣೆಯಲ್ಲಿ ಒಂದು ಹೈಸ್ಕೂಲು ಈಗಾಗಲೇ ಕಟ್ಟಿದ್ದಾರೆ. ಹಿಂದಿನ ಸರ್ಕಾರದವರು ಹೈಸ್ಕೂಲು ಕೊಟ್ಟಿದ್ದರು. ಅದಕ್ಕೆ ಕಟ್ಟಡ ಇಲ್ಲ. ಅದನ್ನು ಕಟ್ಟಿಸಲಿಕ್ಕೆ ದಾನಿಗಳು ಮುಂದೆ ಬಂದಿದ್ದಾರೆ. ಆ ಕಟ್ಟಡಕ್ಕೆ ಆಗತಕ್ಕ ಅರ್ಧ ಹಣವನ್ನು ಕೊಡುತ್ತಾರೆ, ಅವರ ಹೆಸರನ್ನು ಇಟ್ಟರೆ ಹಣ ಕೊಡುತ್ತಾರೆ. ಅದರ ಬಗ್ಗೆ ನಾನು ಈಗಾಗಲೇ ಕಮಿಷನರ್ ಕಡೆ ಕಳುಹಿಸಿದ್ದೇನೆ. ತಾವು ಅದರ ಬಗ್ಗೆ ಜಾಗ್ರತೆ ಮಾಡಿಕೊಟ್ಟರೆ ಅವರು ಹಣ ಕೊಡುತ್ತಾರೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ಇವತ್ತು ವಿದ್ಯಾಭ್ಯಾಸದ ವಿಚಾರದಲ್ಲಿ ಅನೇಕ ಲೋಪದೋಷಗಳು ಇವೆ. ಇವುಗಳನ್ನು ಸರಿಪಡಿಸಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯ. ಇದು ಕೇವಲ ಹಣವಂತರಿಗೆ ಮಾತ್ರ ಮೀಸಲಾಗತಕ್ಕದ್ದು ಆಗಬಾರದು. ಖಾಸಗಿ ವಿದ್ಯಾಕ್ಷೇತ್ರ ಏನಿದೆ, ಕಾಲೇಜುಗಳಿಂದ ಹಿಡಿದು ಸಾಮಾನ್ಯ ಶಾಲೆಗಳವರೆಗೆ, ಖಾಸಗಿ ಕ್ಷೇತ್ರದಲ್ಲಿರತಕ್ಕ ಎಲ್ಲಾ ಶಾಲೆಗಳನ್ನು ಸರ್ಕಾರ ವಹಿಸಿಕೊಂಡು ಬಡವರ ಮಕ್ಕಳಿಗೆ ವಿದ್ಯಾಭ್ಯಾಸ ಪುಕ್ಕಟೆ ಸಿಕ್ಕುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು 60,000 ಅನುಸೂಚಿತ ಜಾತಿ, ಅನುಸೂಚಿತ ಪಂಗಡದ ಬಾಲಕಿಯರ ಸೌಲಭ್ಯಕ್ಕಾಗಿ, ಸಮವಸ್ತ್ರಗಳ ರೂಪದಲ್ಲಿ ಹಾಜರಾತಿ ಆಧಾರಿತ ವಿದ್ಯಾರ್ಥಿವೇತನವನ್ನು ನೀಡುವುದರ ಮೂಲಕ 14 ಲಕ್ಷ ರೂ.ಗಳ (ಸಾಮಾನ್ಯ ಯೋಜನೆ ಮೇರೆಗೆ 8·00 ಲಕ್ಷ ರೂ. ಗುಡ್ಡಗಾಡು ಉಪಯೋಜನೆ ಮೇರೆಗೆ 4·00 ಲಕ್ಷ ರೂಪಾಯಿಗಳು ಮತ್ತು ಯೋಜನೇತರ ಮೇರೆಗೆ 2·00 ಲಕ್ಷ ರೂಪಾಯಿ)— ಹೀಗೆ ಒಟ್ಟು ಹಂಚಿಕೆಯನ್ನು ಉಪಯೋಗಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. 60 ಸಾವಿರ ವಿದ್ಯಾರ್ಥಿನಿಯರಿಗೆ 14 ಲಕ್ಷ ರೂಪಾಯಿ ಅಂದರೆ ಕನಿಷ್ಠ 22 ರೂಪಾಯಿ ಒಬ್ಬ ವಿದ್ಯಾರ್ಥಿನಿಗೆ ಬೀಳುತ್ತದೆ. ಇದರಲ್ಲಿ ಅವರಿಗೆ ಸಮವಸ್ತ್ರ ಕೊಡಲಿಕ್ಕೆ ಸಾಧ್ಯವೇ ? ಈ ಹಣ ಬಹಳ ಕಡಿಮೆಯಾಗುತ್ತದೆ. ಸಾಮಾನ್ಯ ಬಡವರ ಮಕ್ಕಳಿಗೆ ಅದರಲ್ಲೂ ಕೂಡ ಅನುಸೂಚಿತ ಜಾತಿಯವರಿಗೆ,ಹಿಂದುಳಿದವರಿಗೆ ಕೂಡ ತಾವು ಕೊಡತಕ್ಕ ಹಣ ಏನಿದೆ ಇದು ಬಹಳ ಕಡಿಮೆ ಇದೆ. ಇದರಿಂದ ಬಹಳ ಕಡಿಮೆ ದರ್ಜೆ ಬಟ್ಟೆ ಕೊಡಬೇಕಾಗುತ್ತದೆ ಈ ಬಟ್ಟೆ ಬಾಳಿಕೆ ಬರುವುದಿಲ್ಲ; ಬಣ್ಣ ಇರುವುದಿಲ್ಲ; ಮತ್ತು ಇದನ್ನು ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಪರಿಸ್ಥಿತಿ ಉಂಟಾಗುತ್ತದೆ. ಅದಕ್ಕೆ ಬೇಕಾದಷ್ಟು ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಮಾನ್ಯ ಸಚಿವರು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಹಿರಿಯ ಸದಸ್ಯರು ಅನೇಕ ವಿಷಯಗಳನ್ನು ಮಾತನಾಡಿರುವುದರಿಂದ, ನಾನು ಹೆಚ್ಚು ವೇಳೆಯನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದಷ್ಟು ಜಾಗ್ರತೆ ನಮ್ಮ ರಾಜ್ಯದಲ್ಲಿರತಕ್ಕ ಖಾಸಗೀ ಶಿಕ್ಷಣ ವ್ಯವಸ್ಥೆ ತೆಗೆದು ಎಲ್ಲವನ್ನೂ ರಾಷ್ಟ್ರೀಕರಣ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) .—ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತು ಶಿಕ್ಷಣ ಇಲಾಖೆ ಮತ್ತು ಯುವಜನ ಸೇವಾ ಇಲಾಖೆಯವರು ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆ ಎಲ್ಲಾ ಇಲಾಖೆಗಳನ್ನು ಬೆಂಬಲಿಸುತ್ತಾ, ನಾನು ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ವಿದ್ಯಾಭ್ಯಾಸ ಅತ್ಯಂತ ಪ್ರಮುಖವಾದುದು. ಯಾವುದೇ ದೇಶದ ಪ್ರಗತಿಯಾಗಬೇಕಾದರೆ, ದೇಶದ ವಿದ್ಯಾಭ್ಯಾಸದ ಪ್ರಗತಿಯಾಗಬೇಕಾಗುತ್ತದೆ. ನಾವು ಕೂಡ ರಾಜ್ಯಾಂಗ ಬರೆದಂಥ ಕಾಲದಲ್ಲಿ ರಾಜ್ಯಾಂಗದ ನಾಲ್ಕನೇ ಭಾಗದಲ್ಲಿ ಹೇಳಿದ್ದೇವೆ ಏನೆಂದರೆ ಈ ದೇಶದಲ್ಲಿ 14 ವರ್ಷ ತುಂಬತಕ್ಕ ಎಲ್ಲಾ ಮಕ್ಕಳಿಗೂ ಕೂಡ ಕಡ್ಡಾಯ ಹಾಗೂ ಉಚಿತ ಶಿಕ್ಷಣ ಕೊಡುತ್ತೇವೆಂದು. ಈ ಒಂದು ನಿರ್ದೇಶನ ರಾಜ್ಯಾಂಗದಲ್ಲಿದೆ, ಈ ನಿರ್ದೇಶನ ಅವಲೋಕನ ಮಾಡಿದಾಗ, ನಾವು ಸಾಕಷ್ಟು ಪ್ರಗತಿಯನ್ನು ಕಂಡಿಲ್ಲ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಮಾತನ್ನು ನಾವು ಅತ್ಯಂತ ನೋವಿನಿಂದ ಹೇಳಬೇಕಾಗುತ್ತದೆ. ಇಷ್ಟೆಲ್ಲಾ ಇದ್ದರೂ ಕೂಡ ನಾವು ಶಿಕ್ಷಣವನ್ನು ನೂರರಲ್ಲಿ 38 ಜನರಿಗೆ ಮಾತ್ರ ಕೊಡಲಿಕ್ಕೆ ಸಾಧ್ಯವಾಗಿದೆ. ಇನ್ನು ಉಳಿದ 62 ಜನರು ಅವಿದ್ಯಾವಂತರಾಗಿರುವುದನ್ನು ನಾವು ಕಾಣುತ್ತಿದ್ದೇವೆ. ನಾವು ಎಲ್ಲಾ ವರ್ಷದ ಆಯವ್ಯಯವನ್ನು ನೋಡಿದರೆ, ಎಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿತ್ತೋ, ಎಲ್ಲಿ ಹೆಚ್ಚು ಗಮನ ಕೊಡಬೇಕಾಗಿತ್ತೋ ಅಲ್ಲಿ ಕೊಟ್ಟಿಲ್ಲ. ವಿದ್ಯಾಭ್ಯಾಸಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ, ವಿದ್ಯಾಭ್ಯಾಸದ ಪ್ರಗತಿ ಬಗ್ಗೆ ಸಾಕಷ್ಟು ಕೆಲಸ ಆಗಿಲ್ಲ. ಪ್ರಾಥಮಿಕ ಶಿಕ್ಷಣಕ್ಕೆ ಸರ್ಕಾರ ಹೆಚ್ಚು ಆದ್ಯತೆಯನ್ನು ಕೊಡಬೇಕಾಗಿತ್ತು. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆಯೋ ಎಂದು ನೋಡಿದರೆ ಅದು ಅತ್ಯಂತ ಕುಂಠಿತವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಪ್ರಾಥಮಿಕ ಶಿಕ್ಷಣದಲ್ಲಿಯೂ ಸಹ ಎರಡು ತರಹ ಶಿಕ್ಷಣವನ್ನು ಈ ದೇಶದಲ್ಲಿ, ಹಾಗೂ ನಮ್ಮ ರಾಜ್ಯ

*ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದಲ್ಲಿ ನೋಡುತ್ತಿದ್ದೇವೆ. ಹಳ್ಳಿಗಾಡಿನ ಮಕ್ಕಳಿಗೆ ಒಂದು ತರಹ ವಿದ್ಯಾಭ್ಯಾಸ, ಪಟ್ಟಣದ ಮಕ್ಕಳಿಗೆ ಒಂದು ತರಹ ವಿದ್ಯಾಭ್ಯಾಸ, ಶ್ರೀಮಂತರ ಮಕ್ಕಳಿಗೆ ಒಂದು ತರಹ ವಿದ್ಯಾಭ್ಯಾಸ, ಬಡವರ ಮಕ್ಕಳಿಗೆ ಇನ್ನೊಂದು ತರಹ ವಿದ್ಯಾಭ್ಯಾಸ ಕೊಡುವುದನ್ನು ನಾವು ನೋಡುತ್ತಿದ್ದೇವೆ. ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕು ಎನ್ನುವ ಮಾತನ್ನು ಎಲ್ಲಾ ಕಾಲದಲ್ಲೂ ಎಲ್ಲಾ ಸರ್ಕಾರಗಳೂ ಪ್ರತಿಪಾದನೆ ಮಾಡುತ್ತಾ ಬಂದರೂ ಈ ಒಂದು ವಿದ್ಯಾಭ್ಯಾಸದಲ್ಲಿ ಸಾಮಾಜಿಕ ನ್ಯಾಯ ಒದಗಿಸಿದ್ದಾರೆಯೇ ಎಂದು ನೋಡಿದರೆ ಸಾಮಾಜಿಕ ನ್ಯಾಯ ಆಗಿಲ್ಲ. ಆ ಕಡೆ ಪ್ರಾಮಾಣಿಕ ಪ್ರಯತ್ನವನ್ನೂ ಸರ್ಕಾರ ಮಾಡಿಲ್ಲ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ಹಳ್ಳಿಗಾಡಿನ ಶಾಲೆಗಳು ಯಾವ ಮಟ್ಟದಲ್ಲಿವೆ ಎಂಬುದನ್ನು ನೋಡಿದರೆ ನಮಗೆ ಬಹಳಷ್ಟು ವ್ಯಥೆಯಾಗುತ್ತದೆ. ಹಿಂದೆ ಅನೇಕ ಶಾಲೆಗಳನ್ನು ಮಂಜೂರು ಮಾಡಿದರು. ಆದರೆ ಅವುಗಳಿಗೆ ಸರಿಯಾದ ಕಟ್ಟಡಗಳಿಲ್ಲ; ಕಟ್ಟಡಗಳಿದ್ದರೆ ಉಪಾಧ್ಯಾಯರಿಲ್ಲ; ಉಪಾಧ್ಯಾಯರಿದ್ದರೂ ಉತ್ತಮ ತರಬೇತಿಯನ್ನು ಹೊಂದಿದ್ದ ಉಪಾಧ್ಯಾಯರಿರುವುದಿಲ್ಲ. ನಿಜವಾಗಿಯೂ ಹಳ್ಳಿಗಾಡಿನ ಮಕ್ಕಳಿಗೆ ವಿದ್ಯಾಭ್ಯಾಸದ ಬಗ್ಗೆ ಏನೇನು ಸೌಲಭ್ಯಗಳು ಸಿಗಬೇಕಾಗಿತ್ತೋ ಅವು ಸಿಕ್ಕದೆ ಆ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅಷ್ಟೇ ಅಲ್ಲ ಶಾಲೆಗಳಿಗೆ ಸೇರಿದ ವಿದ್ಯಾರ್ಥಿಗಳೂ ಕೂಡ ಸರಿಯಾಗಿ ಬಂದು ವಿದ್ಯಾರ್ಜನೆ ಮಾಡುತ್ತಿಲ್ಲ. ಇದು ತಮಗೂ ಕೂಡ ಗೊತ್ತಿರುವ ವಿಚಾರ. ಉದಾಹರಣೆಗೆ ಹೇಳುವುದಾದರೆ ಹಳ್ಳಿಗಾಡಿನಲ್ಲಿ ಒಂದು ಶಾಲೆಗೆ ಪ್ರಾಥಮಿಕ 1 ನೇ ತರಗತಿಗೆ 50 ಜನ ವಿದ್ಯಾರ್ಥಿಗಳು ಸೇರಿದರೆ ಅವರು 7 ನೇ ತರಗತಿಗೆ ಬರುವ ಹೊತ್ತಿಗೆ ಕೇವಲ 6–7 ಜನ ಮಾತ್ರ ಉಳಿದಿರುತ್ತಾರೆ. ಇನ್ನು ಉಳಿದವರೆಲ್ಲಾ ಬಿಟ್ಟು ಹೋಗಿರುತ್ತಾರೆ. ಇದಕ್ಕೆ ಹಲವಾರು ಕಾರಣಗಳಿವೆ. ಅವರ ಮನೆಗಳಲ್ಲೂ ಕೂಡ ಹಲವಾರು ತೊಂದರೆಗಳಿರುತ್ತವೆ. ವಿದ್ಯಾರ್ಥಿಗಳು ಮುಂದಿನ ತರಗತಿಗೆ ಹೋದಂತೆಲ್ಲಾ ಕಡಿಮೆಯಾಗುತ್ತಾ ಹೋಗುತ್ತಿರುವ ಬಗ್ಗೆ ತಾವುಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಎಂದು ನೋಡಿದರೆ ಏನೇನೂ ಇಲ್ಲ. ಇವತ್ತು ಹಳ್ಳಿಗಾಡಿನ ಜನರು ಆರ್ಥಿಕ ಮುಗ್ಗಟ್ಟಿನಿಂದಾಗಿ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಲಾಗುತ್ತಿಲ್ಲ. ಆದ್ದರಿಂದಲೇ ಹಳ್ಳಿಗಾಡಿನಲ್ಲಿ ಮಕ್ಕಳು ಶಾಲೆಗಳನ್ನು ಬಿಡುತ್ತಿರುವುದು. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ, ಗ್ರಾಮಾಂತರ ಪ್ರದೇಶದ ಶಾಲಾ ಮಕ್ಕಳಿಗೆ ಉಚಿತವಾದ ಸಮವಸ್ತ್ರ, ಉಚಿತವಾಗಿ ಪುಸ್ತಕಗಳು ಮತ್ತು ಉಚಿತವಾಗಿ ಊಟದ ವ್ಯವಸ್ಥೆಯನ್ನು ಮಾಡಬೇಕು. ಅಷ್ಟೇ ಅಲ್ಲ, ಪ್ರಾಥಮಿಕ ಒಂದನೇ ತರಗತಿಯಲ್ಲಿ ಎಷ್ಟು ಜನರಿದ್ದರು, ಅಲ್ಲಿಂದ ಏಳನೇ ತರಗತಿಯವರೆಗೆ ಬರುವ ಹೊತ್ತಿಗೆ ಎಷ್ಟು ಜನ ಇದ್ದಾರೆ, ಎಷ್ಟು ಜನ ಬಿಟ್ಟು ಹೋಗಿದ್ದಾರೆಂಬುದನ್ನು ನೋಡಿ, ಈ ರೀತಿ ಆಗಲು ಮುಖ್ಯ ಕಾರಣ ಏನೆಂಬುದನ್ನು ಕಂಡುಹಿಡಿದು ಅದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇವತ್ತು ನಮ್ಮ ವಿದ್ಯಾಭ್ಯಾಸದ ಪದ್ಧತಿ ಬದಲಾವಣೆಯಾಗಬೇಕಾಗಿದೆ. ನಾವು ಸ್ವಲ್ಪ ಮಟ್ಟಿಗೆ ವಿದ್ಯಾಭ್ಯಾಸವನ್ನು ಕೊಟ್ಟರೂ ಅದರ ಗುಣಮಟ್ಟ ಮಾತ್ರ ಚೆನ್ನಾಗಿರಬೇಕು. ಎಂಥ ವಿದ್ಯಾಭ್ಯಾಸವನ್ನು ಕೊಡಬೇಕೆನ್ನುವ ಬಗ್ಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ವರದಿಗಳು ಬಂದಿವೆ. ಎ. ಸಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟಿದ್ದ ಸಮಿತಿಯು ಒಂದು ವರದಿಯನ್ನು ಕೊಟ್ಟಿದೆ. ಇದನ್ನು ಎಷ್ಟರಮಟ್ಟಿಗೆ ಕಾರ್ಯಗತ ಮಾಡಿದೆಯೆಂದು ನೋಡಿದರೆ ಅದು ಅನುಷ್ಠಾನಕ್ಕೇ ಬಂದಿಲ್ಲ. ಉದಾಹರಣೆಗೆ ಹೇಳುವುದಾದರೆ ಆ ವರದಿಯಲ್ಲಿ 30 ಜನ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರು ಇರಬೇಕೆಂದು ಇದೆ. ಆದರೆ 50 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರನ್ನೂ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಹಳ್ಳಿಗಾಡಿನಲ್ಲಿ 100–200 ವಿದ್ಯಾರ್ಥಿಗಳು ಓದತಕ್ಕ ಶಾಲೆಗಳಲ್ಲಿ ಕೇವಲ ಒಬ್ಬಿಬ್ಬರು ಮಾತ್ರ ಉಪಾಧ್ಯಾಯರಿರುತ್ತಾರೆ. ಕನ್ನಡ, ಇಂಗ್ಲೀಷ್, ವಿಜ್ಞಾನ, ಸಮಾಜಶಾಸ್ತ್ರ, ರಾಸಾಯನಶಾಸ್ತ್ರ, ಚರಿತ್ರೆ, ಭೂಗೋಳ, ಹೀಗೆ ಎಲ್ಲಾ ಪಾಠಗಳನ್ನೂ ಈ ಇಬ್ಬರು ಉಪಾಧ್ಯಾಯರೇ ಮಾಡಬೇಕಾಗಿದೆ. ಇಂಥ ಉಪಾಧ್ಯಾಯರ ಕೈಕೆಳಗೆ ತಯಾರಾದಂಥ ವಿದ್ಯಾರ್ಥಿಗಳು ಇನ್ನು ಎಷ್ಟರಮಟ್ಟಿಗೆ ಬುದ್ಧಿವಂತರಾಗಬಹುದು ? ಹಳ್ಳಿಗಾ ಡಿನ ಮಕ್ಕಳು ವಿದ್ಯಾಭ್ಯಾಸದಲ್ಲಿ ಕುಂಟುತ್ತಾ ಹೋದರೆ ಪಟ್ಟಣದಲ್ಲಿರತಕ್ಕ ಮಕ್ಕಳು ನಾಗಾಲೋಟದಿಂದ ಓಡುತ್ತಿದ್ದಾರೆ. ವೈದ್ಯಕೀಯ, ತಾಂತ್ರಿಕ, ಐ.ಎ.ಎಸ್ ; ಐ.ಪಿ.ಎಸ್. ಮುಂತಾದ ಉನ್ನತ ಪದವಿಗಳನ್ನು ಓದಿರುವವರ ಪೈಕಿ ಎಷ್ಟು ಜನ ಹಳ್ಳಿಗಾಡಿನ ಮಕ್ಕಳಿದ್ದಾರೆ ಎಂದು ಹುಡುಕಿ ನೋಡಿದರೂ ಒಬ್ಬರೂ ಸಿಕ್ಕುವುದಿಲ್ಲ. ಎಲ್ಲರೂ ಶ್ರೀ ಮಂತರ ಮಕ್ಕಳು ಪಟ್ಟಣದಲ್ಲಿರುವವರ ಮಕ್ಕಳೇ ಈ ಪದವಿಗಳನ್ನು ಪಡೆದಿರುವವರು. ಅಂದಮೇಲೆ ನಾವು ಹಳ್ಳಿಗಾಡಿನ ಮಕ್ಕಳನ್ನು ಓದಿಸುವುದಕ್ಕೆ ಏನೇನೂ ಪ್ರಯತ್ನವನ್ನೇ ಮಾಡಿಲ್ಲ. ಆದರೆ ಈ ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ ಉನ್ನತ ವಿದ್ಯಾಭ್ಯಾಸವನ್ನು ಕಲಿಯಲು ಹಕ್ಕಿದೆ. ಆದರೆ ಅದಕ್ಕೆ ಬೇಕಾದ ಹಣ ಬಲವಿಲ್ಲ. ಇವತ್ತು ಈ ಸರ್ಕಾರ ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ತೆಗೆದುಹಾಕತಕ್ಕ ವ್ಯವಸ್ಥೆಯನ್ನು ಮಾಡಬೇಕು. ಹಳ್ಳಿಗಾಡಿನ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಮೇಲ್ಮಟ್ಟದ ವಿದ್ಯಾಭ್ಯಾಸದಲ್ಲಿ ಪ್ರಾತಿನಿಧ್ಯವನ್ನು ಒದಗಿಸಿಕೊಡಬೇಕು. ಅದಕ್ಕಾಗಿ ಹಳ್ಳಿಯಿಂದ ಬರತಕ್ಕ ಮಕ್ಕಳಿಗೆ ಶಾಲೆಗಳಲ್ಲಿ ಇಂತಿಷ್ಟು ಎಂದು ಸ್ಥಾನಗಳ ಮೀಸಲಾತಿಯನ್ನು ಇಡುವಂತೆ ತಾವು ಮುಂದೆ ತರುವ ಮಸೂದೆಯಲ್ಲಿ ಅಳವಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ ದೇಶದ ಪ್ರತಿಯೊಬ್ಬ ಪ್ರಜೆಗೂ ಸಮಾನ ಹಕ್ಕುಬಾಧ್ಯತೆಗಳಿವೆ ಎಂದು ಹೇಳುತ್ತಾ ಬಂದಿದ್ದೇವೆ. ಆದರೆ ಕಳೆದ 35 ವರ್ಷದಿಂದಲೂ ಅಸಮಾನತೆಯನ್ನೇ ಬೆಳೆಸಿಕೊಂಡು ಬಂದಿದ್ದೇವೆ. ಇದು

ಸರಿಯಲ್ಲ. ಇನ್ನುಮುಂದಾದರೂ ಈ ಅಸಮಾನತೆಗೆ ಒಂದು ಕಡಿವಾಣವನ್ನು ಹಾಕಲಿಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಮುಂದೆ ಬಹಳ ದೊಡ್ಡ ಅನಾಹುತವಾಗುತ್ತದೆಂಬುದನ್ನು ತಿಳಿಸಿ ಸರ್ಕಾರದವರು ಇದರ ಬಗ್ಗೆ ತೀವ್ರ ಆಲೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಒಂದು ಸಮಗ್ರವಾದ ಮಸೂದೆಯನ್ನು ಇಷ್ಟರಲ್ಲಿಯೇ ತಾವು ತರಲಿದ್ದೀರಿ. ಅದರಲ್ಲಾದರೂ ಎಲ್ಲರಿಗೂ ಸಮಾನವಾದ ವಿದ್ಯಾಭ್ಯಾಸಕ್ಕೆ ಅವಕಾಶ ಇರುವಂತೆ ಅಳವಡಿಸಬೇಕು. ಇವತ್ತು ಏನಾಗಿದೆ, ಕನ್ನಡ ಮಾಧ್ಯಮದಲ್ಲಿ ಓದಿಕೊಂಡು ಹಳ್ಳಿಗಾಡಿನಿಂದ ಬಂದಿರತಕ್ಕ ಮಕ್ಕಳು ಇಂಗ್ಲಿಷ್ ಮೀಡಿಯಂನಲ್ಲಿ ಓದಿರತಕ್ಕ ಪಟ್ಟಣದ ಮಕ್ಕಳ ಜೊತೆ ಸ್ಪರ್ಧೆ ಮಾಡಬೇಕಾಗಿದೆ. ಇದು ಎಷ್ಟು ಸಮಂಜಸವಾಗಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ತಾರತಮ್ಯವಿಲ್ಲದೆ ಎಲ್ಲರಿಗೂ ಸಮಾನ ವಿದ್ಯಾಭ್ಯಾಸ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಮಾತ್ರ ಅವರು ಸ್ಪರ್ಧೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ. ಇವತ್ತು ಏನಾಗಿದೆ ಎಂದರೆ, ನಾವು ಕೊಡತಕ್ಕ ವಿದ್ಯಾಭ್ಯಾಸದಿಂದ ಅವರು ಕೇವಲ ಓದುಬರಹವನ್ನು ಮಾತ್ರ ಕಲಿಯಲು ಸಾಧ್ಯ. ಆದರೆ ಒಬ್ಬ ಉನ್ನತ ವ್ಯಕ್ತಿಯಾಗಿ ಸಮಾಜದಲ್ಲಿ ಬಾಳಬೇಕಾದರೆ ಜೀವನದ ಮೌಲ್ಯಗಳನ್ನು ಅರಿತುಕೊಂಡು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಮುಂದುವರಿಯುವ ಚಿಂತನೆ ಇವರಿಗೆ ಬರುತ್ತಿಲ್ಲ. ತಾವು ಶಾಲೆಗಳಿಂದ ಹೊರಬಂದಿರುವ ವಿದ್ಯಾರ್ಥಿಗಳ ಪ್ರವೃತ್ತಿಯನ್ನು ನೋಡಿರಬಹುದು. ಬಹಳ ಜನರಲ್ಲಿ ಜಾತೀಯತೆ ತುಂಬಿರುತ್ತದೆ; ಈ ಸಮಾಜದ ಹೊರೆಯನ್ನು ನಾವು ಹೊತ್ತು ಮುನ್ನಡೆಯಬೇಕೆಂಬ ಪ್ರಜ್ಞೆ ಅವರಲ್ಲಿರುವುದಿಲ್ಲ. ಎಷ್ಟೇ ಉನ್ನತ ವಿದ್ಯಾಭ್ಯಾಸವನ್ನು ಮಾಡಿದ್ದರೂ ಕೇವಲ ಉದ್ಯೋಗವನ್ನು ಹುಡುಕಿಕೊಂಡು ಹೋಗುವುದು ಜಾಸ್ತಿಯಾಗಿದೆ. ಆದರೆ ಸ್ವಯಂ ಉದ್ಯೋಗವನ್ನು ಮಾಡಲಿಕ್ಕೆ ಇವರಲ್ಲಿ ಶಕ್ತಿ ಇಲ್ಲವಾಗಿದೆ. ಈ ದೇಶದ ಸೇವೆಯನ್ನು ನಾನು ಯಾವ ರೀತಿ ಮಾಡಬೇಕು, ಹೇಗೆ ಮುಂದುವರೆಯಬೇಕೆಂಬ ಬಗ್ಗೆ ಯೋಚನೆಯೇ ಇವರಿಗಿಲ್ಲ. ಯಾರೇ ವಿದ್ಯಾರ್ಥಿಯಾಗಲಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬಂದಮೇಲೆ ತನಗಿರತಕ್ಕ ಜಮೀನಿನಲ್ಲಿ ಹೊಸ ಹೊಸ ವಿಧಾನಗಳನ್ನನ್ನುಸರಿಸಿ ಹೆಚ್ಚು ಹೆಚ್ಚು ಆಹಾರಧಾನ್ಯಗಳನ್ನು ಬೆಳೆಯುವ ಯೋಚನೆ ಮಾಡಬೇಕು. ಆದರೆ ಅಂಥ ಯೋಚನೆ ಇವರಿಗಿಲ್ಲ. ಇಂಥ ವಿದ್ಯಾಭ್ಯಾಸವನ್ನು ಇವರಿಗೆ ಕೊಟ್ಟು ಸಮಾಜದಲ್ಲಿ ಹೆಚ್ಚಿನ ಗೊಂದಲಮಯ ಪರಿಸ್ಥಿತಿಯನ್ನುಂಟುಮಾಡುತ್ತಿದ್ದೇವೆ.

ಪರಿಸ್ಥಿತಿ ಬದಲಾವಣೆಯಾಗಬೇಕು. ವಿದ್ಯಾಭ್ಯಾಸ ಕ್ರಮವನ್ನೇ ಬದಲಾವಣೆ ಮಾಡಬೇಕು. ದೇಶದಲ್ಲಿ ಆರ್ಥಿಕ, ಸಾಮಾಜಿಕ ಸಮಾನತೆಯನ್ನು ತರಬೇಕು. ಸಮಾಜದಲ್ಲಿ ಸ್ವಾವಲಂಬನೆ ತರತಕ್ಕಂಥ ವಿದ್ಯೆಯನ್ನು ಕೊಡಬೇಕು ಎನ್ನುವ ಬಗ್ಗೆ ತೀವ್ರ ಚಿಂತನೆ ಮಾಡಬೇಕು. ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಬೇಕು. ಕ್ರಾಂತಿಕಾರಕ ಬದಲಾವಣೆಯಿಂದ ಸಮಾಜಕ್ಕೆ, ರಾಜ್ಯಕ್ಕೆ, ಮತ್ತು ದೇಶಕ್ಕೆ ಅನುಕೂಲವಾಗುತ್ತ ವ್ಯಕ್ತಿ ಸುಸಂಸ್ಕೃತನಾಗಿ ಸಂಪೂರ್ಣವಾಗಿ ಸಮಾಜವನ್ನು ಪ್ರತಿನಿಧಿಸತಕ್ಕ ರೀತಿಯಲ್ಲಿ ವಿದ್ಯಾಭ್ಯಾಸದ ಕ್ರಮವನ್ನುಬದಲಿಸಬೇಕು. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸಮಾನರು ಎಂಬ ಚಿಂತನೆ ಆಗಬೇಕು. ಆ ಚಿಂತನೆಯ ದಿಸೆಯಲ್ಲಿ ನಡೆದರೂ ಕೂಡ ಅದರ ಬಗ್ಗೆ ಸರಿಯಾದ ರೀತಿಯಲ್ಲಿ ಹೆಜ್ಜೆ ಇಡಲಿಕ್ಕೆ ಸಾಧ್ಯವಾಗಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅಸಮಾನತೆಯ ವಿಷಯದಲ್ಲಿ ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ಮೆರಿಟ್ ಎನ್ನತಕ್ಕಂಥ ಒಂದು ಅಳತೆಗೋಲನ್ನು ಇಟ್ಟಿದ್ದಾರೆ. ಪಟ್ಟಣ ಪ್ರದೇಶಗಳಲ್ಲಿರತಕ್ಕಂಥವರು ಅವರಿಗೆ ದೊರೆಯತಕ್ಕಂಥ ಸೌಲಭ್ಯಗಳಿಂದ ಮೆರಿಟ್‌ನಲ್ಲಿ ಬರುವುದಕ್ಕೆ ಅವಕಾಶಗಳು ಇರುತ್ತವೆ. ಅದೇ ಹಳ್ಳಿಯ ಮಕ್ಕಳು ಮೆರಿಟ್‌ನಲ್ಲಿ ಬರಲು ಹೇಗೆ ಸಾಧ್ಯ ? ಆದ್ದರಿಂದ ಎಲ್ಲಾ ಶಾಲೆಗಳಲ್ಲೂ ಎಲ್ಲ ಹಂತಗಳಲ್ಲೂ ಕೂಡ ಕನ್ನಡ ಮಾಧ್ಯಮ ಶಿಕ್ಷಣದ ವ್ಯವಸ್ಥೆಯಾಗಬೇಕು. ಇಂಗ್ಲೀಷ್ ಮಾಧ್ಯಮವನ್ನು ತೆಗೆದು ಕನ್ನಡದಲ್ಲ ಶಿಕ್ಷಣ ಮಾಧ್ಯಮ ಭೋಧನೆಯ ವ್ಯವಸ್ಥೆಯನ್ನು ಮಾಡಬೇಕು. ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆಯಾದರೆ ಸಮಾಜದ ಎಲ್ಲಾ ವ್ಯವಸ್ಥೆಯಲ್ಲೂ ಸಾಧ್ಯವಾಗುತ್ತದೆ. ಈ ದೃಷ್ಟಿಯಲ್ಲಿ ವಿದ್ಯಾಭ್ಯಾಸ ಬದಲಾವಣೆಯಾಗಬೇಕು ಎನ್ನುವ ಮಾತನ್ನೂ ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಇಂಗ್ಲೀಷ್ ಬರತಕ್ಕಂಥ ಒಂದು ವರ್ಗ, ಇಂಗ್ಲೀಷ್ ಬಾರದೆ ಇರತಕ್ಕಂಥ ಮತ್ತೊಂದು ವರ್ಗ. ಈರೀತಿ ಸಮಾಜದಲ್ಲಿ ಎರಡು ವರ್ಗಗಳಾಗಿ ಇರತಕ್ಕಂಥ ವ್ಯವಸ್ಥೆಯಾಗಿದೆ. ಇಂಗ್ಲೀಷ್ ಶಾಲೆಗಳಲ್ಲಿ ಇರತಕ್ಕಂಥದ್ದು ಒಂದು ರೀತಿಯಾದರೆ ಕನ್ನಡ ಶಾಲೆಗಳಲ್ಲಿ ಇರತಕ್ಕಂಥದ್ದೇ ಒಂದು ರೀತಿಯಾಗಿದೆ. ಹೀಗೆ ಸಮಾಜದಲ್ಲಿ ಕೆಲವು ವರ್ಗಗಳಾಗಿ ಇರುವುದರಿಂದ ಅವರ ಯಾವ ಯಾವ ವರ್ಗದಲ್ಲಿ ಯಾವ ಯಾವ ಸಮಾಜದಿಂದ ಬಂದಂಥ ಜನರು ಇದ್ದಾರೋ ಅವರ ಆಯಾ ಸಮಾಜವನ್ನು, ಆಯಾ ವರ್ಗಗಳನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಈಗ ಏನಾಗಿದೆ ಎಂದರೆ ಶಿಕ್ಷಣದ ಕ್ರಮ ಪದ್ಧತಿ ಎಲ್ಲವೂ ಶ್ರೀಮಂತರದ್ದಾಗಿದೆ. ಬಡವರು ಆರ್ಥಿಕವಾಗಿ ಪ್ರಗತಿಯಾಗತಕ್ಕಂಥ ರೀತಿಯಲ್ಲಿ ಶಿಕ್ಷಣಕ್ರಮದಲ್ಲಿ ಯಾವುದೇ ಬದಲಾವಣೆ ಕೆಲಸವನ್ನು ಮಾಡಿಲ್ಲ. ಇದರ ಬಗ್ಗೆ ಇಷ್ಟು ಚಿಂತನೆಯಾಗಬೇಕು. ಮತ್ತು ಕ್ರಾಂತಿಕಾರಕ ಬದಲಾವಣೆಯಾಗತಕ್ಕಂಥ ವ್ಯವಸ್ಥೆಯಾಗಬೇಕು. ವಿದ್ಯಾರ್ಥಿಗಳಲ್ಲಿ ಈ ಒಂದು ಬೋಧನೆ ನಡೆಸಲು ಪಠ್ಯಕ್ರಮದಲ್ಲೂ ಕೂಡ ನೈತಿಕ ಮೌಲ್ಯ ಬದಲಾವಣೆಯಾಗಬೇಕಾದ್ದು ಅತ್ಯಗತ್ಯ. ಆದ್ದರಿಂದ ಪಠ್ಯಕ್ರಮದಲ್ಲಿಯೇ ಈ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಲು ಇಚ್ಛೆ ಪಡುತ್ತೇನೆ.

ಮತ್ತೆ ಕನ್ನಡ ಅಭಿವೃದ್ಧಿಯಾಗಬೇಕು ಎನ್ನತಕ್ಕಂಥ ಮಾತನ್ನು ಅನೇಕ ವರ್ಷಗಳಿಂದಲೂ ಹೇಳಿಕೊಂಡು ಬರುತ್ತಲೇ ಇದ್ದೇವೆ. ಇಲ್ಲಿಯವರೆಗೆ ಕನ್ನಡ ಎಷ್ಟರಮಟ್ಟಿಗೆ ಅಭಿವೃದ್ಧಿಯಾಗಿದೆ ಎನ್ನುವುದನ್ನು ನೋಡಿದರೆ ಕನ್ನಡದ ಅಭಿವೃದ್ಧಿ ಏನೇನೂ ಆಗಿಲ್ಲ. ಕನ್ನಡ ಆಡಳಿತ ಭಾಷೆಯಾಗಬೇಕೆಂದು ಹಿಂದಿನ ಸರ್ಕಾರ ಹೇಳಿ 1973 ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿತ್ತು. ಅದರಂತೆ ನಮ್ಮ ಸರ್ಕಾರ ಕೂಡ ಫೆಬ್ರವರಿ ತಿಂಗಳಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಆದರೂ ಕೂಡ ಪರಿಣಾಮಕಾರಿಯಾಗಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡತಕ್ಕದ್ದು ಅಗತ್ಯವಿದೆ ಎನ್ನತಕ್ಕಂಥದ್ದನ್ನು ಯೋಚನೆ ಮಾಡಿದಾಗ ಎಲ್ಲೋ ತೊಡಕಿದೆ ಎನ್ನುವುದು ಕಂಡುಬರುತ್ತದೆ. ಆ ತೊಡಕುಗಳನ್ನು ನಿವಾರಣೆಮಾಡಲಿಕ್ಕೆ ಕನ್ನಡವನ್ನು ಕಲಿಯತಕ್ಕಂಥ ಮನೋಪ್ರವೃತ್ತಿ ಇವತ್ತು ಅಗತ್ಯವಾಗಿ ಬಂದಿಲ್ಲ. ಅಧಿಕಾರಿಗಳಲ್ಲಿ ಯಾರಿಗೂ ಕೂಡ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು ಎನ್ನುವ ಮನೋಪ್ರವೃತ್ತಿ ಬಂದಿಲ್ಲ ಎನ್ನುವುದನ್ನು ಹೇಳಬಯಸುತ್ತೇನೆ. ಇವತ್ತು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಕನ್ನಡ ಆಡಳಿತ ಭಾಷೆಯಾಗಬೇಕಾದರೆ 5 ಸಾವಿರ ಟೈಪ್‌ರೈಟರ್ ಮತ್ತು ಶೀಘ್ರಲಿಪಿಗಾರರು ಬೇಕೆಂದು ಹೇಳುತ್ತಿದ್ದಾರೆ. ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರ ಕೊರತೆಯನ್ನು ತುಂಬಲಿಕ್ಕೆ ಸಾಧ್ಯವಾಗದಿರುವುದರಿಂದ ಸರ್ಕಾರ ಆಡಳಿತ ಕಾರ್ಯವನ್ನು ನಡೆಸಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ನಾನು ಒಂದು ಮನವಿಯನ್ನು ಸರ್ಕಾರದಲ್ಲಿ ಮಾಡಿಕೊಳ್ಳುವುದೇನೆಂದರೆ ಅದಷ್ಟು ಜಾಗ್ರತೆ ಅಂದರೆ ಇಂದೇ ಕೇವಲ 5 ಸಾವಿರ ಟೈಪ್‌ರೈಟರ್‌ಗಳನ್ನು ಕೊಂಡುಕೊಂಡರೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲಿಕ್ಕೆ ಏನೂ ಅಡ್ಡಿಯಿಲ್ಲ. ಜೊತೆಗೆ ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರನ್ನು ತುಂಬಿಕೊಳ್ಳತಕ್ಕಂಥ ಕೆಲಸವನ್ನು ಮಾಡಿದರೆ ಇದು ಸಾಧ್ಯವಾಗುತ್ತದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಕನ್ನಡ ಶೀಘ್ರಲಿಪಿಗಾರರು, ಬೆರಳಚ್ಚುಗಾರರನ್ನು ತುಂಬಿಕೊಳ್ಳತಕ್ಕಂಥ ಕಾರ್ಯದಲ್ಲಿ ಒಂದು ಆಜ್ಞೆಯನ್ನು ಸರ್ಕಾರದವರು ಹೊರಡಿಸಿದ್ದಾರೆ. ಇದರಲ್ಲಿ ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರನ್ನು ತುಂಬಿಕೊಳ್ಳುವಾಗ ಈ ಎರಡೂ ವಿಷಯದಲ್ಲಿ ತರಬೇತಿ ಹೊಂದಿದವರಿಗೆ ಆದ್ಯತೆಯನ್ನು ಕೊಡಲಾಗುತ್ತದೆಂದು ಆಜ್ಞೆಯಲ್ಲಿ ಇದೆ. ಅದಕ್ಕೋಸ್ಕರವಾಗಿ ನನ್ನದೊಂದು ಸಲಹೆ. ಕನ್ನಡ ಕಾವಲು ಸಮಿತಿಯನ್ನು ಮಾಡಿದ್ದೀರಿ, ಯಾರು ಕನ್ನಡ ಬೆರಳಚ್ಚು ಕನ್ನಡ ಶೀಘ್ರಲಿಪಿಯನ್ನು ಕಲಿತಿದ್ದಾರೋ ಅವರಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ಕನ್ನಡ ಇಂಗ್ಲೀಷ್ ಎರಡೂ ಬರತಕ್ಕಂಥವರಿಗೆ ಎರಡನೆಯ ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಈ ಆಜ್ಞೆಯನ್ನು ಮಾರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮತ್ತೆ ಇನ್ನು ಯುವಜನ ಸೇವಾ ಇಲಾಖೆಯ ಬಗ್ಗೆ ಹೇಳುವುದಾದರೆ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಒಂದು ಕ್ರೀಡಾ ಮೈದಾನಗಳನ್ನು ಮಾಡಬೇಕೆಂದು ಯೋಜನೆಯನ್ನು ಇಟ್ಟುಕೊಂಡಿದ್ದೀರಿ. 10 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಾಡಬೇಕೆಂದು ಇದ್ದೀರಿ. ಇವತ್ತು ಕ್ರೀಡೆಗಳು ಕೇವಲ ಪಟ್ಟಣದಲ್ಲಿ ಮಾತ್ರ ತೆಗೆದಿದ್ದೀರಿ. ಹಳ್ಳಿಗಳ ಮಕ್ಕಳಿಗೂ ಕೂಡ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಜರ್ಮನ್, ಜಪಾನ್ ರೀತಿಯಲ್ಲಿ ಯಾವ ಮಕ್ಕಳಿಗೆ ಯಾವ ಆಟದಲ್ಲಿ ಅಭಿರುಚಿ ಇದೆಯೋ ಅವರ ಅಭಿರುಚಿಯನ್ನು ಗುರುತಿಸಿ ಪ್ರೋತ್ಸಾಹ ಕೊಡತಕ್ಕಂಥದ್ದಕ್ಕೆ ಅವಕಾಶ ಇದೆ. ಇವತ್ತು ನಮ್ಮ ದೇಶದಲ್ಲಿ ಆ ಒಂದು ವ್ಯವಸ್ಥೆ ಇಲ್ಲ. ಯಾವುದೇ ಆಟವಾಗಲಿ ಅದು ಅಥ್‌ಲೆಟಿಕ್ಸ್ ಆಗಲಿ, ಫುಟ್‌ಬಾಲ್ ಆಗಲಿ, ವಾಲೀಬಾಲ್ ಆಗಲಿ ಇವುಗಳಲ್ಲಿ ಯಾವುದೇ ರೀತಿಯ ಅಭಿರುಚಿಯನ್ನು ಗುರುತಿಸಿ ಅವರು ಹೆಚ್ಚಿನ ರೀತಿಯಲ್ಲಿ ಪರಿಣತರಾಗುವಂಥ ವ್ಯವಸ್ಥೆಯನ್ನು ಮಾಡಬೇಕು. ಇವತ್ತಿನದಿವಸ ಹಳ್ಳಿಗಾಡುಗಳಲ್ಲಿರತಕ್ಕ ಶಾಲೆಗಳಲ್ಲಿ ಆಟದ ಮೈದಾನ ಇಲ್ಲ. ಶಾಲೆಗಳನ್ನು ಕೊಡುವಾಗ ಆಟದ ಮೈದಾನವನ್ನೂ ಕೂಡ ಕೊಡಬೇಕು. ಆಟದ ಸಾಮಗ್ರಿಗಳನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಆಟಕ್ಕೆ ಬೇಕಾದಂಥ ಹಣವನ್ನು ಸರ್ಕಾರದವರು ಮಂಜೂರು ಮಾಡಬೇಕು. ಮಕ್ಕಳ ದೈಹಿಕ ಶಕ್ತಿ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸಿಕೊಳ್ಳುವುದು ಬಹಳ ಅಗತ್ಯವಿದೆ. ಇದು ಒಂದು ವರ್ಗದವರಿಗೆ ಮಾತ್ರ ಸೀಮಿತವಾಗಿ, ಇನ್ನೊಂದು ವರ್ಗದ ಜನರಿಗೆ ಈ ಸೌಲಭ್ಯ ದೊರಕುತ್ತಿಲ್ಲ. ಈ ಅಸಮಾನತೆಯನ್ನು ತೊಡೆದುಹಾಕಲು ಎಲ್ಲ ವರ್ಗದವರಿಗೂ ದೈಹಿಕ ಮತ್ತು ಮಾನಸಿಕ ಶಿಕ್ಷಣ ದೊರಕುವಂಥ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಹಳ್ಳಿಗಳಲ್ಲಿಯೂ ಸಹ ವ್ಯಾಯಾಮಶಾಲೆಗಳನ್ನು ತೆರೆಯಬೇಕು. ಇದರ ಜೊತೆಗೆ ಇರುವಂತಹ ವ್ಯಾಯಾಮಶಾಲೆಗಳನ್ನು ಅಭಿವೃದ್ಧಿಗೊಳಿಸುವಂತಹ ಕೆಲಸ ಮೊದಲು ಆಗಬೇಕು. ಇದರ ಜೊತೆಗೆ ಹಳ್ಳಿಗಳಲ್ಲಿ ಗ್ರಂಥಾಲಯಗಳನ್ನೂ ಸಹ ತೆರೆಯಬೇಕು. ಈಗ ಯಾವುದೇ ಪುಸ್ತಕವನ್ನು ಓದಬೇಕಾದರೆ ಹಳ್ಳಿಗಳಲ್ಲಿ ಗ್ರಂಥಾಲಯಗಳು ಇಲ್ಲ. ಇದರಿಂದ ಹಳ್ಳಿಯ ಮಕ್ಕಳಿಗೆ ಬೇರೆ ಯಾವುದೇ ಪುಸ್ತಕವನ್ನು ಓದಬೇಕೆಂಬ ಅಭಿರುಚಿಯೇ ಇಲ್ಲದಂತೆ ಆಗಿದೆ. ಆದ್ದರಿಂದ ಎಲ್ಲ ಹಳ್ಳಿಗಳಲ್ಲಿಯೂ ಗ್ರಂಥಾಲಯಗಳನ್ನು ತೆರೆಯುವ ವ್ಯವಸ್ಥೆಯಾಗಬೇಕು. ಈ ಮೊದಲು ಜೂನಿಯರ್ ಕಾಲೇಜ್‌ಗಳನ್ನು ಅಪ್‌-ಗ್ರೇಡ್ ಮಾಡಿದಾಗ ಮತ್ತು ಹೈಸ್ಕೂಲ್‌ಗಳನ್ನು ಜೂನಿಯರ್ ಕಾಲೇಜುಗಳನ್ನಾಗಿ ಮಾಡಿದಾಗ ಅಲ್ಲಿದ್ದಂಥ ಗ್ರಂಥಾಲಯಗಳ ಪುಸ್ತಕಗಳನ್ನು ಬದಲಾವಣೆ ಮಾಡಲಿಲ್ಲ. ಅಲ್ಲಿದ್ದಂಥ ಪುಸ್ತಕಗಳನ್ನು ಬೇರೆಬೇರೆ ಶಾಲಾ ಕಾಲೇಜುಗಳಿಗೆ ವರ್ಗಾಯಿಸುವ ಕೆಲಸ ಇನ್ನೂ ಆಗಿಲ್ಲ. ಇದರಿಂದ ಅಲ್ಲಿನ ವಿದ್ಯಾರ್ಥಿಗಳಿಗೆ ಈ ಪುಸ್ತಕಗಳು

ಉಪಯೋಗಕ್ಕೆ ಬರದೆ ತುಕ್ಕು ಹಿಡಿಯುತ್ತಿವೆ. ಅತಿ ಜಾಗ್ರತೆ ಈ ಪುಸ್ತಕಗಳನ್ನು ಅನುಕೂಲವಾಗುವ ಕಡೆಗಳಿಗೆ ವರ್ಗಾವಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಐ.ಟಿ.ಐ. ಹಾಗೂ ಡಿಪ್ಲೊಮಾದಂಥ ವೃತ್ತಿ ಶಿಕ್ಷಣ ಸಂಸ್ಥೆಗಳು ಈಗ ಪಟ್ಟಣಗಳಲ್ಲಿಯೇ ಕೇಂದ್ರೀಕೃತವಾಗಿವೆ. ಇನ್ನುಮುಂದೆ ಹಳ್ಳಿಗಾಡಿನಲ್ಲಿಯೂ ಸಹ ಇವುಗಳನ್ನು ಪ್ರಾರಂಭ ಮಾಡಬೇಕು. ಪ್ರತಿ ಹೋಬಳಿ ಹಾಗೂ ಪ್ರತಿ ತಾಲ್ಲೂಕ್‌ನಲ್ಲಿಯೂ ಐ.ಟಿ.ಐ. ಶಾಲೆಗಳು ಪ್ರಾರಂಭವಾಗಬೇಕು. ಈಗ ಮೈಸೂರಿನ ಸುತ್ತಮುತ್ತ ಸುಮಾರು 93 ಕಾರ್ಖಾನೆಗಳು ಪ್ರಾರಂಭವಾಗಿವೆ. ಆದರೆ ಇವುಗಳಲ್ಲಿ ಮೈಸೂರು ತಾಲ್ಲೂಕಿನ ಹಾಗೂ ಮೈಸೂರು ಜಿಲ್ಲೆಯ ಜನರಿಗೆ ಸಾಕಷ್ಟು ಕೆಲಸಗಳು ಸಿಕ್ಕಿಲ್ಲ. ಇದಕ್ಕೆ ಕಾರಣವನ್ನು ಈ ಕಾರ್ಖಾನೆಗಳ ಮೇನೇಜರ್ ಬಳಿ ಇಲ್ಲವೇ ಮೇನೇಜಿಂಗ್ ಡೈರೆಕ್ಟರ್ ಅವರ ಬಳಿ ಕೇಳಿದಾಗ ಐ.ಟಿ.ಐ. ಪಾಸಾದವರು ಇದ್ದರೆ ಕೆಲಸ ಕೊಡುತ್ತೇವೆಂದು ಹೇಳುತ್ತಾರೆ. ಆದ್ದರಿಂದ ಸರ್ಕಾರದವರು ಎಲ್ಲ ಕಡೆ ಐ.ಟಿ.ಐ.ನ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿದ್ದರೆ ಎಲ್ಲ ನಿರುದ್ಯೋಗಿಗಳಿಗೂ ಕೆಲಸ ಸಿಕ್ಕುವ ವ್ಯವಸ್ಥೆಯಾಗುತ್ತಿತ್ತು. ಆದರೆ ಈಗ ಇಂತಹವರು ಇಲ್ಲದ ಕಾರಣ ಮದ್ರಾಸ್, ಕೇರಳ, ಆಂಧ್ರ ಹಾಗೂ ಮಹಾರಾಷ್ಟ್ರದವರೇ ಇಲ್ಲಿ ಬಂದು ಕೆಲಸ ಮಾಡುತ್ತಿದ್ದಾರೆ. ಇದರಿಂದ ನಮ್ಮ ಕನ್ನಡಿಗರಿಗೆ ಅದರಲ್ಲಿಯೂ ನಮ್ಮ ಮೈಸೂರು ಜಿಲ್ಲೆಯ ಜನರಿಗೆ ಕೆಲಸ ಇಲ್ಲದಂತೆ ಆಗಿದೆ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಈ ಹಿಂದಿನ ಸರ್ಕಾರಗಳು ವೃತ್ತಿಪರ ಶಿಕ್ಷಣವನ್ನು ಹಳ್ಳಿಗಾಡಿನ ಜನರಿಗೆ ಹೇಳಿಕೊಡುವಂತಹ ವ್ಯವಸ್ಥೆಯನ್ನು ಮಾಡಲಿಲ್ಲ. ಇಂತಹ ಒಂದು ದುರವಸ್ಥೆಯನ್ನು ನಾವು ಇಂದು ಕಾಣಬಹುದಾಗಿದೆ. ಈಗಲಾದರೂ ಹಳ್ಳಿಗಾಡುಗಳಲ್ಲಿ ಈ ವೃತ್ತಿಪರ ಶಿಕ್ಷಣವನ್ನು ಪ್ರಾರಂಭ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಛೇರ್‌ಮನ್.—ತಾವು ಜಾಗ್ರತೆ ಮುಗಿಸಿಬಿಡಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಅವರು ಹೊಸದಾಗಿ ಈ ಮನೆಯ ಸದಸ್ಯರಾಗಿ ಆರಿಸಿ ಬಂದಿದ್ದಾರೆ. ಇದರ ಜೊತೆಗೆ ಅವರು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರೂ ಸಹ ಆಗಿದ್ದಾರೆ. ಆದ್ದರಿಂದ ಅವರಿಗೆ ಮಾತನಾಡಲು ಹೆಚ್ಚು ಸಮಯ ಕೊಡುವುದು ಒಳ್ಳೆಯದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅವರಿಗೆ ಕೆಲಸ ಮಾಡಲು ಸಿಬ್ಬಂದಿಯನ್ನಾಗಲೀ ಕಛೇರಿಯನ್ನಾಗಲೀ ಕೊಟ್ಟಿಲ್ಲವೆಂದು ನಾನು ಕೇಳಿದ್ದೇನೆ.

ಶ್ರೀ ಸಿದ್ಧರಾಮಯ್ಯ.—ಎಲ್ಲವನ್ನೂ ಕೊಟ್ಟಿದ್ದಾರೆ. ಈ ವಿದ್ಯಾಭ್ಯಾಸದಲ್ಲಿರುವಂತಹ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಸಾಮಾಜಿಕ ನ್ಯಾಯವನ್ನು ಒದಗಿಸಬೇಕೆಂದು ನಾವೆಲ್ಲರೂ ಪ್ರತಿಪಾದನೆ ಮಾಡುತ್ತಿದ್ದೇವೆ ಮತ್ತು ಭಾಷಣಗಳನ್ನು ಮಾಡುತ್ತಿದ್ದೇವೆ. ಆದರೆ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಮುಖ್ಯವಾಗಿ ವಿದ್ಯಾಭ್ಯಾಸದಲ್ಲಿ ಸಮಾನ ವಿದ್ಯೆ ಕೊಡುವಂತಹ ಒಂದು ವ್ಯವಸ್ಥೆಯಾಗಬೇಕು. ಎಲ್ಲಿಯವರೆಗೆ ಈ ಕೆಲಸವಾಗುವುದಿಲ್ಲವೋ ಅಲ್ಲಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಓದಿದವರು ಪಟ್ಟಣಗಳಲ್ಲಿ ಓದಿದವರ ಜೊತೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಈ ಕಾರಣದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಓದುವವರಿಗೆ ಕೆಲವೊಂದು ಸವಲತ್ತುಗಳನ್ನು ಹಾಗೂ ಮೀಸಲಾತಿಗಳನ್ನು ಕೊಡುವುದು ಒಳ್ಳೆಯದು. ಕಾನ್‌ವೆಂಟ್ ಶಾಲೆಗಳನ್ನು ಕಂಟ್ರೋಲ್ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಜಾರಿಗೆ ತರಬೇಕು. ಇಷ್ಟೆಲ್ಲಾ ಮಾಡಿದಾಗ ಮಾತ್ರ ಈಗಿರುವಂತಹ ಅಸಮಾನತೆಯನ್ನು ಹೋಗಲಾಡಿಸಬಹುದು ಮತ್ತು ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡಬಹುದು. ಈಗ ಶ್ರೀಮಂತರಿಗೇ ಒಂದು ತರಹ ವಿದ್ಯೆ, ಬಡವರಿಗೇ ಒಂದು ತರಹ ವಿದ್ಯೆಯಾದರೆ ಮತ್ತು ವಿದ್ಯಾವಂತರಿಗೆ ಒಂದು ರೀತಿ ಮತ್ತು ಅವಿದ್ಯಾವಂತರಿಗೆ ಇನ್ನೊಂದು ರೀತಿಯಾದರೆ ಈಗಿರುವಂತಹ ಕಂದರವನ್ನು ಜಾಸ್ತಿ ಮಾಡಿದಂತೆ ಆಗುತ್ತದೆ. ಆದ್ದರಿಂದ ಇದನ್ನು ಹೋಗಲಾಡಿಸಲು ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಮನವಿ ಮಾಡಿಕೊಂಡು ನನಗೆ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಸ್. ಆರ್. ಹೆಗಡೆ (ಅಂಕೋಲ).—ಸನ್ಮಾನ್ಯ ಅಧ್ಯಕ್ಷರೇ, ಈ ಶಿಕ್ಷಣ ಇಲಾಖೆಯ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಶಿಕ್ಷಣ ಇಲಾಖೆಯ ಬೇಡಿಕೆಯನ್ನು ನೋಡಿದಾಗ ಯಾವ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡಬೇಕೋ ಅದಕ್ಕೆ ಕೊಟ್ಟಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಹಣ ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರೂ ಸಹ ಅದರ ಒಂದು ಗಾತ್ರ ಹಾಗೂ ಅಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆಯ ಒಂದು ಗಾತ್ರಕ್ಕೆ ಹೋಲಿಸಿದಾಗ ಇವರು ಕೊಟ್ಟಂತಹ ಹಣ ಕಡಿಮೆಯೆಂದೇ ಹೇಳಬಹುದು. ಪ್ರಾಥಮಿಕ ಶಿಕ್ಷಣ ಬಹಳ ಮುಖ್ಯವಾದುದು. ನಾವು ಪ್ರಾಥಮಿಕ ಶಿಕ್ಷಣವನ್ನು ಸರಿಯಾಗಿ ಕೊಡದಿದ್ದರೆ ಮುಂದೆ ಮಾಧ್ಯಮಿಕ ಶಿಕ್ಷಣದಲ್ಲಿಯಾಗಲೀ, ಉಚ್ಚ ಶಿಕ್ಷಣದಲ್ಲಿಯಾಗಲೀ ಯೋಗ್ಯವಾದಂಥ ಅಂಕಗಳನ್ನು ತೆಗೆದುಕೊಂಡು ಮುಂದೆ

---

* ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದುಳಿದಿರುವವರ ಬಗ್ಗೆ ಹಾಗೂ ದೀನದಲಿತರ ಬಗ್ಗೆ ಹೆಚ್ಚು ಲಕ್ಷ್ಯ ಕೊಡುತ್ತೇವೆಂದು ಹೇಳುವಂತಹ ಈ ಸರ್ಕಾರ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಲಕ್ಷ್ಯ ಹಾಗೂ ವಿಶೇಷ ವಾದಂಥ ಲಕ್ಷ್ಯವನ್ನು ಕೊಡದಿರುವುದನ್ನು ನೋಡಿದಾಗ ಇವರು ಯಾವ ರೀತಿಯಿಂದ ಹೊಸದಾದಂಥ ಕೆಲಸ ಮಾಡುತ್ತೇವೆಂದು ಹೇಳುತ್ತಾರೋ ನನಗೆ ಅರ್ಥವಾಗುವುದಿಲ್ಲ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಮಲೆನಾಡು ಪ್ರದೇಶಗಳಲ್ಲಿ ಏಕ–ಉಪಾಧ್ಯಾಯ ಶಾಲೆಗಳಿವೆ. ಇಂತಹ ಕೆಲವು ಶಾಲೆಗಳಲ್ಲಿ ಉಪಾ ಧ್ಯಾಯರೇ ಇರುವುದಿಲ್ಲ. ಒಂದು ವೇಳೆ ತಾವು ಮಾಸ್ತರರನ್ನು ನೇಮಕ ಮಾಡಿದರೂ ಸಹ ಅವರು ಆ ಜಾಗ ದಲ್ಲಿಯೇ ವಾಸ ಮಾಡದೆ ಬೇರೆ ಎಲ್ಲಿಯೋ ವಾಸವಾಗಿದ್ದುಕೊಂಡು ಅಲ್ಲಿಂದ ಬಂದು ಶಾಲೆ ನಡೆಸುತ್ತಾರೆ. ನಾನು ತಾಲ್ಲೂಕ್ ಬೋರ್ಡಿನ ಅಧ್ಯಕ್ಷನಾಗಿದ್ದಾಗ ಒಂದೇ ವರ್ಷದಲ್ಲಿ 180 ಶಾಲೆಗಳನ್ನು ಕಟ್ಟಿಸಿದ್ದೇನೆ. ಪ್ರಾಥಮಿಕ ಶಿಕ್ಷಣ ಹೆಚ್ಚಾಗಬೇಕು ಮತ್ತು ಇದಕ್ಕೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಿಕೊಡಬೇಕು ಹಾಗೂ ಶಾಲೆಗಳಿದ್ದ ಕಡೆಗಳಲ್ಲಿಯೇ ಉಪಾಧ್ಯಾಯರು ವಾಸ ಮಾಡಲು ಅವಕಾಶವಾಗಬೇಕೆಂದುಕೊಂಡು ಊರವರ ಸಹಾಯದಿಂದ ವಸತಿಗಳನ್ನು ಕಟ್ಟಿಸಿಕೊಟ್ಟಿದ್ದೇನೆ. ಆದರೆ ಅನುಕೂಲಗಳಿದ್ದ ಕಡೆಗೂ ಶಿಕ್ಷಕರು ಹೋಗುತ್ತಿಲ್ಲ. ಇದರಿಂದ ಶಾಲಾ ಕಟ್ಟಡಗಳೆಲ್ಲಾ ಹಾಳಾಗುತ್ತಿವೆ ಮತ್ತು ಅಲ್ಲಿ ಓದಬೇಕಾದ ಹುಡುಗರು ಎಲ್ಲೋ ಆಟವಾಡಿ ಕೊಂಡಿರುತ್ತಾರೆ. ಇದು ಏತಕ್ಕೆ ಈ ರೀತಿ ಆಗುತ್ತಿದೆ ? ಶಿಕ್ಷಣದ ಬಗ್ಗೆ ಮಾತನಾಡಬೇಕಾದರೆ ಶಿಕ್ಷಣ ಮಂತ್ರಿ ಗಳಿಗೆ ಎಷ್ಟು ಆಸಕ್ತಿ ಕಾಣುತ್ತಿದೆಯೋ ಅಷ್ಟೇ ಒಂದು ಆಸಕ್ತಿ ಅದನ್ನು ಜಾರಿಗೆ ತರುವುದರಲ್ಲಿ ಕಾಣುತ್ತಿಲ್ಲ. ಶಿಕ್ಷಣದ ಬಗ್ಗೆ ಇರತಕ್ಕಂಥ ಕುಂದುಕೊರತೆಗಳನ್ನು ಹಾಗೂ ಇತರೇ ಬೇಡಿಕೆಗಳನ್ನು ನಾವು ಸರ್ಕಾರದ ಮುಂದಿ ಟ್ಟಾಗ, ಇದನ್ನೆಲ್ಲಾ ಈ ಖಾತೆಯನ್ನು ವಹಿಸಿಕೊಂಡಂತಹ ಮಂತ್ರಿಗಳು ತಿಳಿದುಕೊಳ್ಳದಿದ್ದರೆ ಬಹಳ ಕಷ್ಟ ವಾಗುತ್ತದೆ. ಇಂತಹ ಒಂದು ಪರಿಸ್ಥಿತಿ ಈ ಪ್ರಾಥಮಿಕ ಶಿಕ್ಷಣಕ್ಕೆ ಬಂದಿದೆ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ. ಈ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಹಣ ಕೊಡುತ್ತೇವೆ, ಹೆಚ್ಚು ಶಾಲೆಗಳನ್ನು ತೆರೆಯುತ್ತೇವೆ, ಇಲ್ಲಿ ಕೆಲಸ ಮಾಡಲು ಸ್ಟೈಪಂಡರಿ ಪದವೀಧರರನ್ನು ನೇಮಕ ಮಾಡುತ್ತೇವೆ, ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡುತ್ತೇವೆಂದು ಹೇಳಿದರೆ ಆಗುವುದಿಲ್ಲ.

ಹಣ ಖರ್ಚು ಮಾಡುತ್ತೇವೆಂದರೆ ಆಗುವುದಿಲ್ಲ. ಶಿಕ್ಷಣವನ್ನು ಸರಿಯಾದ ರೀತಿಯಿಂದ ಪ್ರಾಮಾಣಿಕ ರೀತಿಯಲ್ಲಿ ನಾವು ಕೊಡಬೇಕಾಗುತ್ತದೆ. ಅದನ್ನು ನಾವು ಮಾಡದಿದ್ದರೆ ಅದು ಬೇಸಿಕ್ ಆಗಿ ಇರುವುದಿಲ್ಲ. ಸಾಕ್ಷರತೆಯ ಪರಿಸರವನ್ನು ಹೆಚ್ಚು ಮಾಡಲಿಕ್ಕೆ ಹೊರಟಿದ್ದೀರಿ. ಸರ್ಕಾರ ಸಾಕ್ಷರತೆಯನ್ನು ಹೆಚ್ಚು ಮಾಡುತ್ತೇ ವೆಂದು ಹೇಳಿ 32 ಪರ್ಸೆಂಟ್ ಅಕ್ಷರಸ್ಥರು ಇದ್ದರು, ಈಗ 37 ಪರ್ಸೆಂಟ್ ಆಗಿದೆ, ಅದನ್ನು ಇನ್ನುಮುಂದೆ 58 ಪರ್ಸೆಂಟ್‌ಗೆ ತೆಗೆದುಕೊಂಡು ಹೋಗುವುದು ಇದೆ ಎಂದು ಹೇಳಿ ಹೆಚ್ಚು ಹೆಚ್ಚು ರಾತ್ರಿ ಶಾಲೆಗಳನ್ನು ಮಾಡಿ ಅಕ್ಷರ ಅಭ್ಯಾಸ ಮಾಡಿಸಿ ಸಾಕ್ಷರತೆಯನ್ನು ಹೆಚ್ಚು ಮಾಡುತ್ತೇವೆ ಎಂದರೆ ಅದು ಸರಿಯಾಗುವುದಿಲ್ಲ. ಸಾಕ್ಷರತೆಯನ್ನು ಹೆಚ್ಚು ಮಾಡತಕ್ಕದ್ದು ಮುಖ್ಯವಾದ ಉದ್ದೇಶವಲ್ಲ. ನಾವು ಶಿಕ್ಷಕರನ್ನಾಗಿ ಮಾಡಬೇಕು, ವಿದ್ಯಾವಂತರನ್ನಾಗಿ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಪುರಾಣದಲ್ಲಿ 'ಸ್ಕೂಲ್'ನ ಅರ್ಥದ ಜೊತೆಯಲ್ಲಿ ಬುದ್ಧಿವಂತರು ಏನಾದರೂ ವಿದ್ಯಾವಂತರಾದರೆ ರಾಕ್ಷಸರಾಗುವ ಸಂಭವವಿದೆ ಎಂದು ಇದೆ.

ಶ್ರೀ ಹೆಗಡೆ ಶ್ರೀಪಾದ್ ರಾಮಕೃಷ್ಣ.—ಅದು ಮಾತು ಅಷ್ಟೆ. ತಾವು ಬುದ್ಧಿವಂತರಿದ್ದೀರಿ—ಮತ್ತು ವಕೀಲರಾಗುವುದಕ್ಕೆ ಯೋಗ್ಯರಿದ್ದೀರಿ. ನಾವು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಲಕ್ಷ್ಯಕೊಡದಿದ್ದರೆ, ನಾವು ಎಷ್ಟೇ ಶಿಕ್ಷಣ ಮಾಡುತ್ತೇವೆಂದು ಹೇಳಿದರೆ ಆಗುವುದಿಲ್ಲ. 35 ವರ್ಷಗಳಿಂದ ನೀವು ಏನು ಮಾಡಿದಿರಿ, ಹೇಗೆ ಮಾಡಿದಿರಿ ಎಂದು ಕೇಳುವುದರಲ್ಲಿ ಅರ್ಥವಿಲ್ಲ. ಅಲ್ಲಿದ್ದವರು ಇಲ್ಲಿದ್ದಾರೆ, ಇಲ್ಲಿದ್ದವರು ಅಲ್ಲಿದ್ದಾರೆ ; ನಾನು ಎಲ್ಲರ ಸಂಗಡ ಇದ್ದೇನೆ. ನಾನು ಈ ಸದನಕ್ಕೆ ಹೊಸದಾಗಿ ಬಂದಿದ್ದರೂ ಕೂಡ ಶಿಕ್ಷಣ ಬದಲಾವಣೆಯಾಗಿಲ್ಲ ಎನ್ನುವುದನ್ನು ಕಾಣುತ್ತಿದ್ದೇನೆ ; ಇದನ್ನು ತಾವು ಯೋಚಿಸಬೇಕು. 35 ವರ್ಷಗಳಿಂದ ಇರತಕ್ಕ ಶಿಕ್ಷಣ ಪದ್ಧತಿ ಅಸಮಾಧಾನ ವಾಗಿದೆ. ಶಿಕ್ಷಣವನ್ನು ಯಾವ ರೀತಿ ಕೊಡಬೇಕು ಎನ್ನುವುದರ ಬಗ್ಗೆ ಪ್ರಾಯೋಗಿಕವಾಗಿಯಾದರೂ ಒಂದೆರಡು ಯೋಜನೆಗಳನ್ನು ಎತ್ತಿಕೊಂಡರೆ ನಿಜವಾಗಿಯೂ ಕ್ರಾಂತಿಯನ್ನು ಮಾಡಲಿಕ್ಕೆ ಹೊರಟಿದ್ದಾರೆಂದು ನಾವು ತಿಳಿಯಬಹುದಾಗಿತ್ತು. ಅದರ ಬಗ್ಗೆ ಪ್ರಾಯೋಗಿಕವಾಗಿ ಯೋಜನೆ ಕಾಣುತ್ತಿಲ್ಲ. ನಾನು ಹೇಳುವುದೇನೆಂದರೆ ಪ್ರಾಯೋಗಿಕವಾಗಿ ಹಳ್ಳಿಗಾಡಿನಲ್ಲಿ ಅಥವಾ ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಕರು ಇಲ್ಲದೆ ಹೆಚ್ಚು ಹುಡುಗರು ಶಾಲೆಗೆ ಹೋಗುವುದಿಲ್ಲ. ಅಲ್ಲಿರತಕ್ಕ ಶಿಕ್ಷಕರೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಶಿಕ್ಷಕರು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಪೋಷಕರು ಶಿಕ್ಷಣ ಚೆನ್ನಾಗಿ ನಡೆಯುತ್ತಿಲ್ಲವೆಂದು ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರುವುದು ಸ್ವಾಭಾವಿಕವಾದುದು. ಹಾಗಾದರೆ ಶಿಕ್ಷಕರಿಗೆ ಸರಿಯಾದ ಸವಲತ್ತುಗಳು ಸಿಗುತ್ತಿಲ್ಲವೇ ಹೇಗೆ ? ಅವರಿಗೆ ಯಾವ ರೀತಿ ತೊಂದರೆಯಾಗಿದೆ ಇದನ್ನು ವಿಚಾರ ಮಾಡುವುದರ ಜೊತೆಗೆ, ಯಾವ ರೀತಿ ಶಿಕ್ಷಣ ಕೊಡಬೇಕೆನ್ನುವುದನ್ನು ವಿಚಾರ ಮಾಡಬೇಕು. ಶಿಕ್ಷಕರಿಗೆ ತರಬೇತಿ ಕೊಡುವುದರ ಜೊತೆಗೆ, ಪ್ರಾಥಮಿಕ ಪೂರ್ವ ತರಬೇತಿ ಶಾಲೆಗಳನ್ನು ತೆರೆದು ಅವರು ಮುಂದೆ 10 ವರ್ಷಗಳಲ್ಲಿ ಏನು ಮಾಡಬೇಕೆಂಬುದರ ವಿಚಾರ ಮಾಡಬೇಕು. ಪ್ರಾಯೋಗಿಕವಾಗಿ ಶಾಲೆಗಳನ್ನು ತೆರೆದು ಅದರಲ್ಲಿ ಶಿಕ್ಷಕರನ್ನಾಗಿ ತಯಾರು ಮಾಡುವ ಹುಡುಗ ರನ್ನು ಮೊದಲಿನಿಂದಲೇ ತಯಾರು ಮಾಡಿದರೆ, ಅವರು 10 ವರ್ಷಗಳಲ್ಲಿ ಉತ್ತಮವಾದ ಶಿಕ್ಷಕರಾಗಿ ತಯಾ

ರಾಗಬಲ್ಲರು. ಆ ರೀತಿ ಮಾಡದಿದ್ದರೆ, ಶಿಕ್ಷಕರು ಯಾವ ರೀತಿ ಮಾಡುತ್ತಾರೆಂದರೆ, ಎಲ್ಲಿಯಾದರೂ ನೌಕರಿ ಸಿಕ್ಕಿದರೆ ಸಾಕು ಎನ್ನುವ ಮನೋಭಾವದಿಂದ ಸುಮ್ಮನೆ ಇರುತ್ತಾರೆ. ಇವತ್ತು ಶಿಕ್ಷಕರ ಜವಾಬ್ದಾರಿ ಏನಿದೆ ಅಂದರೆ, ನಮ್ಮ ದೇಶವನ್ನು ಆಳತಕ್ಕವರನ್ನು ತಯಾರು ಮಾಡುವ ಜವಾಬ್ದಾರಿ ಅವರ ಮೇಲಿದೆ. ದೇಶವನ್ನು ಆಳತಕ್ಕವರನ್ನು ತಯಾರು ಮಾಡತಕ್ಕವರಿಗೆ ಬುಡದಿಂದಲೇ ಅವರನ್ನು ತಯಾರು ಮಾಡತಕ್ಕ ಒಂದು ಹೊಸ ಯೋಜನೆಯನ್ನು ಹಾಕಿದರೆ 10 ವರ್ಷದಲ್ಲಾದರೂ ಅದರ ಪ್ರಯೋಜನ ಸಿಗಬಹುದು. ಸ್ವಾತಂತ್ರ್ಯ ಸಿಕ್ಕಿದ ನಂತರ ಪ್ರಯೋಗ ಮಾಡುತ್ತೇವೆಂದು ಬಂದಿದ್ದಾರೆ. ಮುಖ್ಯವಾಗಿ ಹೊಸದಾಗಿ ಶಿಕ್ಷಕ ಕುಲವನ್ನು ತಯಾರು ಮಾಡತಕ್ಕಂತಹ ಯೋಜನೆಯನ್ನು ಪೂರ್ವಪ್ರಾಥಮಿಕ ಶಾಲೆಗಳಲ್ಲಿ ಉತ್ತಮರಾದ ಶಿಕ್ಷಕರನ್ನು ತಯಾರು ಮಾಡಲಿಕ್ಕೆ ಒಂದು ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡರೆ, ಅದೊಂದು ಮಾದರಿಯಾದಂತಹ ಯೋಗ್ಯವಾದಂತಹ ಪದ್ಧತಿಯಾಗಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಶಿಕ್ಷಣ ಖಾತೆಯ ಬಗ್ಗೆ ಒಂದು ಮಾತನ್ನು ವಾಸ್ತವವಾಗಿ ಹೇಳಬೇಕಾಗುತ್ತದೆ. ಭ್ರಷ್ಟಾಚಾರ ಬೇರೆ ಕಡೆಯೂ ಇದೆ, ಬೇರೆ ಕಡೆಗಿಂತಲೂ ಶಿಕ್ಷಣ ಇಲಾಖೆಯಲ್ಲಿ ಬಹಳ ಜಾಸ್ತಿ ಇದೆ ಎಂದು ಹೇಳಬೇಕಾಗಿದೆ. ಸಾಮಾನ್ಯವಾಗಿ ವರ್ಗಾವರ್ಗಿ ಬಗ್ಗೆ ಅನೇಕ ಸ್ನೇಹಿತರು ಹಿಂದೆ ಮಾತನಾಡಿದ್ದಾರೆ, ಭ್ರಷ್ಟಾಚಾರದ ಬಗ್ಗೆ ಹೇಳಿದ್ದಾರೆ. ಭ್ರಷ್ಟಾಚಾರದ ಮೂಲ ಇರತಕ್ಕದ್ದು ಶಿಕ್ಷಣ ಇಲಾಖೆಯಲ್ಲಿಯೇ. ಶಿಕ್ಷಕರು ಬೇರೆ ಬೇರೆ ಊರುಗಳಲ್ಲಿದ್ದರೆ ಅವರು ಒಂದು ಕಡೆ ಕೂಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದನ್ನು ಕಡಿಮೆ ಮಾಡಬೇಕಾದರೆ ಈ ವ್ಯವಸ್ಥೆಯನ್ನು ಸರ್ಕಾರದವರೇ ಮಾಡಿದರೆ ಸಾಧ್ಯವಾಗಬಹುದೆಂದು ಹೇಳುತ್ತೇನೆ. ಮಾನ್ಯ ಲಕ್ಷ್ಮೀಸಾಗರ್ ಅವರ ಕೈಯಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಕೇಳತಕ್ಕ ಖಾತೆಯಲ್ಲಿ ಒಂದು ಸ್ಕ್ವಾಡ್ ಇಟ್ಟು, ಎಲ್ಲೆಲ್ಲಿ ಇಂತಹ ಜನಗಳು ಬರುತ್ತಾರೆ ನೇರವಾಗಿ ಪರಿಸ್ಥಿತಿಯನ್ನು ನೋಡಿ ಅವರು ಸಂಬಂಧಪಟ್ಟವರಿಗೆ ತಿಳಿಸತಕ್ಕ ವ್ಯವಸ್ಥೆಯನ್ನು ಮಾಡಿದರೆ ಇದರಿಂದ ಹೆಚ್ಚಿನ ರೀತಿಯಾದ ಪ್ರಯೋಜನವಾಗಬಹುದು ಎಂದು ನನ್ನ ಅನಿಸಿಕೆ. ಈ ಕೆಲಸ ಸ್ಕ್ವಾಡ್‌ನವರ ಕಡೆ ಇದ್ದಾಗ ನೇರವಾಗಿ ಭ್ರಷ್ಟಾಚಾರವನ್ನು ತೊಡೆದು ಹಾಕಲಿಕ್ಕೆ ಶಿಕ್ಷಣ ಇಲಾಖೆಯಲ್ಲಿ ಪ್ರಾರಂಭ ಮಾಡಬೇಕು. ಇಲ್ಲಿ ಅನೇಕ ರೀತಿಯ ಭ್ರಷ್ಟಾಚಾರ ನಡೆಯುತ್ತದೆ. ಹೆಚ್ಚಾಗಿ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ ಒಳ್ಳೆಯ ರೀತಿಯಿಂದ ಸಿಗುತ್ತಿಲ್ಲ. ಯಾವಾಗಲೂ ಇದೇ ಕೆಲಸದಲ್ಲಿ ಶಿಕ್ಷಕರು ನಿರತರಾಗಿರುತ್ತಾರೆ. ಶಿಕ್ಷಕರು ವರ್ಗಾವರ್ಗಿ ಕೆಲಸ ಬಿಟ್ಟರೆ ಬೇರೇನೂ ಕೆಲಸ ಮಾಡುವುದಿಲ್ಲ. ಶಿಕ್ಷಣ ಕೊಡತಕ್ಕ ಶಿಕ್ಷಕರು ಮಾಡುವಂಥ ರಾಜಕೀಯವನ್ನು ಸಾಮಾನ್ಯವಾಗಿ ಯಾರೂ ಮಾಡುವುದಿಲ್ಲ. ಇದು ಜನಜನಿತವಾದುದು, ಅವರ ಮೇಲೆ ನಿಗಾ ಇಟ್ಟು ಕೆಲಸ ಮಾಡಿಸಿಕೊಳ್ಳುವುದು ಸರ್ಕಾರದ ಜವಾಬ್ದಾರಿಯೂ ಇದೆ. ಅದಕ್ಕಾಗಿ ವಿಶೇಷವಾದಂತಹ ವ್ಯವಸ್ಥೆಯನ್ನು ಮಾಡಿ ಅವರ ಹಿನ್ನೆಲೆ ತಿಳಿದುಕೊಂಡು ವಿಚಾರ ಮಾಡುವಂತಹ ಕೆಲಸವಾಗಬೇಕು. ಶಿಕ್ಷಣ ಖಾತೆಯ ಬಗ್ಗೆ ವಿಶೇಷವಾದಂತಹ ಲಕ್ಷ್ಯವನ್ನು ಇಟ್ಟು ಇರತಕ್ಕ ತೊಂದರೆಗಳನ್ನು ಹೋಗಲಾಡಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರಾಥಮಿಕ ಶಿಕ್ಷಣದಲ್ಲಿ ಕಟ್ಟಡಗಳ ವ್ಯವಸ್ಥೆ ಬಹಳ ಕಡಿಮೆ ಇದೆ. ಅದೂ ಅಲ್ಲದೆ ಎಷ್ಟೋ ಕಟ್ಟಡಗಳನ್ನು ಕಟ್ಟಿದ್ದರೂ ಕಟ್ಟಿದಂತಹ ಕಟ್ಟಡಗಳು ಹಾಳಾಗುತ್ತಿವೆ. ಮಲೆನಾಡು ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳ ಸ್ಥಿತಿ ಬಹಳ ದುಸ್ತರವಾಗಿದೆ. ನಮ್ಮ ಕಡೆ ಮಳೆಗಾಲದಲ್ಲಿ ಶಾಲಾ ಕಟ್ಟಡಗಳನ್ನು ರಿಪೇರಿ ಮಾಡದಿದ್ದರೆ ಕಟ್ಟಡಗಳು ಉಳಿಯುವುದಿಲ್ಲ. ಮಳೆಗಾಲದಲ್ಲಿ ರಿಪೇರಿಯನ್ನು ಪ್ರತಿವರ್ಷ ಮಾಡಬೇಕಾಗುತ್ತದೆ. ಈಗಾಗಲೇ ಅನೇಕ ಕಟ್ಟಡಗಳು ಬಿದ್ದುಹೋಗಿವೆ. ಶಿರಸಿಯಲ್ಲಿ 2 ನೇ ನಂಬರ್ ಕನ್ನಡ ಶಾಲೆ ಇದೆ. ಬಹುತೇಕ ನಮ್ಮ ಜಿಲ್ಲೆಯಲ್ಲಿ ಅದೊಂದೇ ದೊಡ್ಡ ಶಾಲೆ ಇರತಕ್ಕದ್ದು. ಅದರಲ್ಲಿ 1500 ಹುಡುಗರು ಇದ್ದಾರೆ. ಆ ಶಾಲೆಗೆ ಹೊಸ ಕಟ್ಟಡ ಕಟ್ಟಿದ್ದು ಬಿದ್ದು ಹೋಗಿದೆ. ಅದಕ್ಕೆ ಒಬ್ಬರು ದೊಡ್ಡ ದಾನಿಗಳು 50 ಸಾವಿರ ರೂಪಾಯಿ ರೊಕ್ಕ ಕೊಟ್ಟಿದ್ದಾರೆ. ಹೆಚ್ಚಿನ ಸಹಕಾರಕ್ಕಾಗಿ ಮ್ಯಾನೇಜ್‌ಮೆಂಟ್ ಸರ್ಕಾರವನ್ನು ಒತ್ತಾಯಿಸಿದೆ. ಸರ್ಕಾರ ಕಟ್ಟಡಕ್ಕೆ ಹೆಚ್ಚಿನ ಮೊತ್ತವನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಹರಿಜನ ಮತ್ತು ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಹೆಚ್ಚಿನ ಸಹಾಯ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಸರ್ಕಾರದವರು ಜಾರಿಗೆ ತಂದಿರುವ ತ್ರಿವಿಧ ಯೋಜನೆಯಲ್ಲಿ ದಿನಾಂಕ 1–4–1967 ರಲ್ಲಿ ಯಾರು ಕೆಲಸಕ್ಕೆ ಸೇರಿರುತ್ತಾರೋ ಅಂಥವರಿಗೆ ಈ ಯೋಜನೆ ಅನ್ವಯಿಸುವುದಿಲ್ಲ. ಮತ್ತು ಈ ಯೋಜನೆಯಲ್ಲಿ ಬರತಕ್ಕಂಥ ಲಾಭಾಂಶ ಕೂಡ ಈ ವರ್ಗದವರಿಗೆ ಸಿಗುವುದಿಲ್ಲ. ಅಂಥ ಶಿಕ್ಷಕರು ಕೂಡ ಇದ್ದಾರೆ. ಅವರಿಗೂ ಕೂಡ ಸರ್ಕಾರದವರು ಸಹಾಯ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈ ಯೋಜನೆಯಲ್ಲಿ ಸುಮಾರು 400 ಜನರಿಗೆ ಪೆನ್‌ಷನ್ ಸಿಗುವುದಿಲ್ಲ. ಆದ್ದರಿಂದ ಅವರಿಗೆ ಕೂಡ ಈ ಸೌಲಭ್ಯ ಸಿಗುವಂಥ ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಾನು ಮಾನ್ಯ ಮಂತ್ರಿಗಳನ್ನು ಬಹಳ ವರ್ಷಗಳಿಂದ ನೋಡಿದ್ದೇನೆ. ಅವರು ಅರಣ್ಯ ಮಂತ್ರಿಗಳಾಗಿದ್ದಾಗ ಕೂಡ ನೋಡಿದ್ದೇನೆ. ಮತ್ತು ಸಂಸತ್ ಸದಸ್ಯರಾಗಿದ್ದಾಗ ಕೂಡ ನೋಡಿದ್ದೇನೆ. ಆದರೆ ಅವರಿಗೆ ಧೈರ್ಯ ಇಲ್ಲ. ಅವರು ಯಾವುದಾದರೂ ಒಂದು ಪತ್ರಕ್ಕೆ ಸಹಿ ಹಾಕಬೇಕಾದರೂ ಕೂಡ ಬಹಳ ಹೆದರುತ್ತಾರೆ. ಮಾನ್ಯ ಮಂತ್ರಿಗಳ ಅವಧಿಯಲ್ಲಿ ಸಾಕಷ್ಟು ಶಾಲಾ ಕಾಲೇಜುಗಳನ್ನು ಕೊಟ್ಟಿರುತ್ತಾರೆ. ಆದರೆ ಆ ಶಾಲಾ ಕಾಲೇಜುಗಳಿಗೆ ಸರಿಯಾದಂಥ ಕಟ್ಟಡಗಳು ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಎಲ್ಲಿ

ಶಾಲೆಗಳನ್ನು ಮಂಜೂರು ಮಾಡುತ್ತಾರೋ ಅಲ್ಲಿಗೆ ಕಟ್ಟಡಗಳನ್ನು ಒದಗಿಸಿಕೊಡಲು ಧನಸಹಾಯ ಕೂಡ ಮಾಡಬೇಕೆಂದು ಹೇಳಿ ಅಧ್ಯಕ್ಷರು ಗಂಟೆ ಬಾರಿಸಿದ ನಿಮಿತ್ತ ನಾನು ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಬಿ. ಎಸ್. ಯಡಿಯೂರಪ್ಪ. (ಶಿಕಾರಿಪುರ) :—ಸನ್ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ಬೇಡಿಕೆಗಳನ್ನು ಮಾನ್ಯ ಶಿಕ್ಷಣ ಇಲಾಖೆ ಮಂತ್ರಿಗಳು ಮಂಡಿಸಿದ್ದಾರೆ. ಅವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವಾರು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಹಿಂದಿನ ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ರಾಜ್ಯ ಯಾವ ರೀತಿಯಲ್ಲಿ ಪ್ರಗತಿಯನ್ನು ಸಾಧಿಸಿದೆ ಎನ್ನುವುದನ್ನು ನೋಡಿದಾಗ ನನಗೆ ಬಹಳ ಅಸಮಾಧಾನವಾಗುತ್ತಿದೆ. ಇವತ್ತಿನ ದಿವಸ ನಮ್ಮ ಶಿಕ್ಷಣ ಪದ್ಧತಿ ಹೇಗಿದೆ ಎಂದರೆ, ಹಿಂದಿನ ಕಾಲದಲ್ಲಿ ಬ್ರಿಟಿಷರು ನಮಗೆ ಬಿಟ್ಟು ಹೋಗಿದ್ದ ಶಿಕ್ಷಣ ಪದ್ಧತಿಯನ್ನೇ ಇಂದಿಗೂ ಕೂಡ ನಾವು ಮುಂದುವರೆಸಿಕೊಂಡೇ ಬರುತ್ತಿದ್ದೇವೆ. ಆ ಪದ್ಧತಿಯನ್ನು ಇನ್ನೂ ಎಷ್ಟು ದಿವಸಗಳವರೆಗೆ ಮುಂದುವರೆಸಿಕೊಂಡು ಹೋಗುವುದಕ್ಕೆ ಸಾಧ್ಯವಿದೆ ? ನಾವು ಇವತ್ತು ಒಂದು ರೀತಿಯಲ್ಲಿ ವಿದ್ಯಾ ಕ್ಷೇತ್ರದಲ್ಲಿ ಷಂಡರಾಗಿದ್ದೇವೆ. ಸಮಾಜದಲ್ಲಿರತಕ್ಕಂಥ ಎಲ್ಲಾ ಪ್ರಜೆಗಳಿಗೂ ನಾವು ವಿದ್ಯೆಯನ್ನು ಕೊಡಬೇಕೆಂದು ಇದೆ. ಆದರೆ ನಾವು ಇವತ್ತು ಆ ವಿದ್ಯಾಭ್ಯಾಸ ಮಟ್ಟವನ್ನೇ ಕುಸಿದುಬೀಳುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಸುಮಾರು 36 ವರ್ಷಗಳಿಂದ ನಾವು ಈ ವಿದ್ಯಾ ಕ್ಷೇತ್ರದಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಿದರೂ ಕೂಡ ಯಾವ ಪ್ರಯೋಜನವೂ ಆಗಿಲ್ಲ. ಇದಕ್ಕೆ ಕಾರಣವೇನು ? ಇವತ್ತು ನಮ್ಮ ರಾಜ್ಯದಲ್ಲಿ ಯುವಕರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬಂದು ನಿರುದ್ಯೋಗ ಸಮಸ್ಯೆಯನ್ನು ಎದುರಿಸತಕ್ಕಂಥ ಪರಿಸ್ಥಿತಿ ಬಂದಿದೆ. ಅವರು ತನ್ನ ಕಾಲ ಮೇಲೆ ತಾನು ನಿಲ್ಲುವಂಥ ಪರಿಸ್ಥಿತಿಯಲ್ಲಿ ಇಲ್ಲ. ಆ ಬಗ್ಗೆ ಸರ್ಕಾರದವರು ಏನಾದರೂ ಯೋಚನೆ ಮಾಡಿದ್ದಾರೆಯೋ ? ವಿದ್ಯಾವಂತನಾದವನು ತನ್ನ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬಂದ ನಂತರ ರೈತರ ಜೊತೆಯಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಒಬ್ಬ ವಿದ್ಯಾರ್ಥಿ ತಾನು ವಿದ್ಯಾಭ್ಯಾಸ ಮಾಡಲು ಬಂದಾಗ ಆತನು ಮೊದಲೇ ಯೋಚನೆ ಮಾಡಬೇಕು. ನಾನು ಯಾವ ವಿಷಯವನ್ನು ತೆಗೆದುಕೊಂಡು ವ್ಯಾಸಂಗ ಮಾಡಿದರೆ ನನಗೆ ಮುಂದೆ ನನ್ನ ಜೀವನಕ್ಕೆ ಅನುಕೂಲವಾಗುತ್ತದೆ ಎಂದು. ಆ ರೀತಿಯ ವಿದ್ಯಾಭ್ಯಾಸ ಪದ್ಧತಿ ಇರಬೇಕು. ಆ ರೀತಿ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ನೂರಾರು ಜನ ವಿದ್ಯಾರ್ಥಿಗಳು ಬಿ.ಎ., ಬಿ.ಎಸ್.ಸಿ., ಪರೀಕ್ಷೆಗಳನ್ನು ಪಾಸು ಮಾಡಿಕೊಂಡು ಮನೆಯಲ್ಲಿ ಇರುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ನಾನು ಹೇಳುವುದೇನೆಂದರೆ ಹಿಂದಿನ ಕಾಲದಲ್ಲಿ ಇದ್ದಂತಹ ಬ್ರಿಟಿಷ್ ಪದ್ಧತಿಯನ್ನು ಹೋಗಲಾಡಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ನಾನು ಈ ಸಭೆಯ ಕಾಲವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾ ಮಟ್ಟ ಯಾವ ರೀತಿಯಲ್ಲಿದೆ ಎನ್ನುವುದಕ್ಕೆ ನಾನು ಈ ಸಂದರ್ಭದಲ್ಲಿ ಕೆಲವಾರು ವಿಷಯಗಳನ್ನು ಹೇಳಬಯಸುತ್ತೇನೆ. ಒಂದನೇ ತರಗತಿಯವರು ಕನ್ನಡ ಭಾರತಿ ಎನ್ನತಕ್ಕಂಥ ಪುಸ್ತಕ ವ್ಯಾಸಂಗ ಮಾಡಬೇಕಾಗಿದೆ. ಆ ಪುಸ್ತಕವನ್ನು ನಾನು ಬೇಕೆಂದು ಆರಿಸಿ ತಂದಿಲ್ಲ. ಈ ಪುಸ್ತಕದಲ್ಲಿ ಸುಮಾರು 15 ನೇ ಪುಟದಿಂದ 20ನೇ ಪುಟದವರೆಗೆ ಅಚ್ಚು ಮಾಡಿಲ್ಲ, ಕಾರಣವೇನು ? ಈ ಹಾಳೆಗಳು ಮುದ್ರಣವಾಗಿಲ್ಲವೆಂದು ತಿಳಿದುಕೊಳ್ಳೋಣವೇ ? ಹಾಳೆಗಳು ಖಾಲಿ ಇವೆ. ಮತ್ತೆ ಪುಟ 79 ರಲ್ಲಿ ಮುದ್ರಣವಾಗಿಲ್ಲ. 80–81 ನೇ ಪುಟಗಳಲ್ಲಿ ಕೂಡ ಮುದ್ರಣವಾಗಿಲ್ಲ.

ಶ್ರೀ ಪಿ. ರಾಂದೇವ್ .—ಮಕ್ಕಳು ಹರಿದು ಹಾಕಿರಬಹುದು.

ಶ್ರೀ ಬಿ. ಎಸ್ ಯಡಿಯೂರಪ್ಪ .—ಸ್ವಾಮಿ, ಮಕ್ಕಳು ಹರಿದುಹಾಕಿಲ್ಲ. ಅಲ್ಲಿ ಹಾಳೆಗಳು ಇವೆ. ಆದರೆ ಮುದ್ರಣ ಮಾತ್ರ ಆಗಿಲ್ಲ. ತಾವು ಇದನ್ನು ದಯಮಾಡಿ ನೋಡಬೇಕು. ಮತ್ತೆ ಮಕ್ಕಳ ವಿಜ್ಞಾನ ಪುಸ್ತಕದಲ್ಲಿ ಅಷ್ಟೆ. ಪುಟ 14 15, 67 ಮತ್ತು 68 ನೇ ಪುಟಗಳಲ್ಲಿ ಅಕ್ಷರಗಳೇ ಮುದ್ರಣವಾಗಿಲ್ಲ. ಮತ್ತೆ ಪುಟ 140 ಮತ್ತು 41ರಲ್ಲಿ ಮುದ್ರಣವಾಗಿರುವ ಅಕ್ಷರಗಳನ್ನು ಓದುವುದಕ್ಕೆ ಆಗುವುದಿಲ್ಲ. ಈ ರೀತಿ ಮುದ್ರಣ ಮಾಡಿದರೆ ಹೇಗೆ ? ಮುದ್ರಣವಾದಂಥ ಪುಸ್ತಕಗಳನ್ನು ಮತ್ತೆ ಯಾರೂ ನೋಡುವುದಿಲ್ಲವೇ ? ಇದರ ಬಗ್ಗೆ ಸರ್ಕಾರದವರು ಕಾಳಜಿ ವಹಿಸಿದ್ದಾರೆಯೋ ? ಪುಸ್ತಕ ಮುದ್ರಣವಾದ ಮೇಲೆ ಆ ಪುಸ್ತಕವನು ಒಂದು ಸಾರಿ ನೋಡಿ ಬಿಡುಗಡೆ ಮಾಡಬೇಕಲ್ಲವೇ ? ಮತ್ತೆ 10 ನೇ ತರಗತಿಯ ಮಕ್ಕಳಿಗೆ ಶಿಖರಗಾಮಿಗಳು ' ಎನ್ನತಕ್ಕಂಥ ಪುಸ್ತಕ ಇದೆ. ಅದರಲ್ಲಿ ಕೂಡ ಪುಟ 21 ಖಾಲಿ ಇದೆ, ಪುಟ 101 ಖಾಲಿ ಇದೆ; 102 ಖಾಲಿ ಇದೆ. ಮತ್ತೆ 345 ಕೂಡ ಖಾಲಿ ಇದೆ. ಈ ರೀತಿಯಲ್ಲಿ ಪುಸ್ತಕ ಮುದ್ರಣವಾದರೆ ಮಕ್ಕಳು ಯಾವ ರೀತಿಯಲ್ಲಿ ವ್ಯಾಸಂಗ ಮಾಡುತ್ತಾರೆ ಎನ್ನುವುದನ್ನು ತಾವೂ ಕೂಡ ನೋಡಬೇಕಾಗುತ್ತದೆ. ಮತ್ತು ಯಾವ ರೀತಿಯಲ್ಲಿ ನಮ್ಮ ರಜ್ಯ ವಿದ್ಯಾ ಕ್ಷೇತ್ರದಲ್ಲಿ ಪ್ರಗತಿಯನ್ನು ಹೊಂದುತ್ತದೆ ಎನ್ನುವುದನ್ನು ಕೂಡ ನಾವು ಯೋಚನೆ

---

* ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಮಾಡ ಬೇಕಾಗುತ್ತದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ರೀತಿಯ ವ್ಯತ್ಯಾಸಗಳು ಆಗದಂತೆ ನೋಡಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಸರ್ಕಾರದವರು ಬಾಲವಾಡಿ ಮತ್ತು ಶಿಶುವಿಹಾರಗಳನ್ನು ನಡೆಸುತ್ತಿದ್ದಾರೆ. ಈ ಶಾಲೆಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಲು ಒಬ್ಬ ಆಯಾ ಇರುತ್ತಾಳೆ. ಸಾಮಾನ್ಯವಾಗಿ ಒಬ್ಬ ಹರಿಜನ ಮತ್ತು ಗಿರಿಜನ ಪಂಗಡಕ್ಕೆ ಸೇರಿದಂಥ ಹೆಣ್ಣುಮಕ್ಕಳು ಇರುತ್ತಾರೆ. ಆಕೆಗೆ ಒಂದು ತಿಂಗಳಿಗೆ ಸುಮಾರು 50 ರೂಪಾಯಿಗಳ ಸಂಬಳ ಕೊಡುತ್ತಾರೆ. ಈ 50 ರೂಪಾಯಿಗಳ ಸಂಬಳದಲ್ಲಿ ಆಕೆ ಯಾವ ರೀತಿಯಲ್ಲಿ ಸಂಸಾರ ಮಾಡುವುದಕ್ಕೆ ಸಾಧ್ಯವಿದೆ ? ಸ್ವಾಮಿ, ಒಂದೊಂದು ವೇಳೆ ದೊಡ್ಡ ದೊಡ್ಡ ಹೋಟೆಲ್‌ಗಳಿಗೆ ಹೋಗಿ ಬರುವಾಗ ಟಿಪ್ಸ್ 50 ರೂಪಾಯಿಗಳು ಕೊಟ್ಟು ಬರುತ್ತೀರಿ. ಆದರೆ ಆ ಹೆಣ್ಣುಮಗು 50 ರೂಪಾಯಿಗಳಿಗೆ ಒಂದು ತಿಂಗಳು ಪೂರ್ತಿ ದುಡಿಯಬೇಕಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ತಾವು ಪ್ರಾಥಮಿಕ ಶಾಲೆಗಳಿಗೆ ಯಾವ ರೀತಿಯಲ್ಲಿ ಗಮನ ಕೊಡುತ್ತೀದ್ದಿರಿ ಎಂಬುದನ್ನು ಕೂಡ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಮತ್ತೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಶಿಕ್ಷಣ ಮಂತ್ರಿಗಳ ಗಮನಕ್ಕೆ ತರ ಬಯಸುವುದೇನೆಂದರೆ ಪ್ರಾಥಮಿಕ ಶಾಲೆಗಳಲ್ಲಿ ಜವಾನರನ್ನು ತೆಗೆದುಹಾಕಿದ್ದೀರಿ ಎಂದು ಕೇಳಿದ್ದೇನೆ. ಆದರೆ ಸ್ವಾಮಿ, ನಾನು ತಮ್ಮಲ್ಲಿ ಒಂದು ಮಾತನ್ನು ಕೇಳ ಬಯಸುತ್ತೇನೆ. ಶಾಲೆಗಳಿಗೆ ಬಂದಂಥ ಮಕ್ಕಳು ಕಕ್ಕಸ್ಸು ಅಥವಾ ಬೇರೆ ಏನಾದರೂ ಮಾಡಿಕೊಂಡರೆ ಅದನ್ನು ಯಾರು ಉಪಾಧ್ಯಾಯರು ತೆಗೆದು ಹಾಕುತ್ತಾರೋ ಅಥವಾ ಆ ಮಕ್ಕಳೇ ತೆಗೆದುಕೊಂಡು ಹೋಗಿ ಹಾಕುತ್ತಾರೋ ಎಂಬುದನ್ನು ಸ್ವಲ್ಪ ಯೋಚನೆ ಮಾಡ ಬೇಕಾಗುತ್ತದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಪ್ರಾಥಮಿಕ ಶಾಲೆಗಳಲ್ಲಿ ಜವಾನರನ್ನು ಮತ್ತೆ ನೇಮಿಸಿಕೊಳ್ಳುವಂಥ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಹಿಂದಿ ರಾಷ್ಟ್ರಭಾಷೆ, ಇದರ ಬಗ್ಗೆ ಚಿಂತನೆಯನ್ನೂ ಮಾಡಿದ್ದೇವೆ. ಆದರೆ ಇದರ ವಿದ್ಯಾಭ್ಯಾಸಕ್ಕೆ ಬೇಕಾದಂಥ ಅನುಕೂಲತೆಗಳುನ್ನು ಮಾಡಿಕೊಡುತ್ತಿಲ್ಲ. ಇನ್ನು ಸಂಸ್ಕೃತ, ಬಹುಶಃ ಸಂಸ್ಕೃತ ನಮ್ಮ ಸರ್ಕಾರಕ್ಕೆ ಒಂದು ಅಲರ್ಜಿ ಎಂದು ಕಾಣುತ್ತದೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಶ್ರೀಮತಿ ಬಿ. ಕೆ. ಸೀತಾಲಕ್ಷ್ಮಿ ಎಂಬುವರು ಮೈಸೂರಿನಲ್ಲಿ ಪರೀಕ್ಷೆಗೆ ಕುಳಿತಿದ್ದರು. ಅವರು ಆವತ್ತು ಪ್ರಶ್ನೆ ಪತ್ರಿಕೆಗೆ ಉತ್ತರವನ್ನು ಕೂಡ ಬರೆದಿದ್ದರು. ಆದರೆ ಅವರಿಗೆ ಬಂದಿರತಕ್ಕ ಮಾರ್ಕ್ಸ್‌ಕಾರ್ಡ್‌ನಲ್ಲಿ 'ಗೈರುಹಾಜರಿ' ಎಂದು ಕೊಟ್ಟಿದ್ದಾರೆ. ಅವರ ರಿಜಿಸ್ಟರ್ ನಂಬರ್ 8633, ಸೀತಾಲಕ್ಷ್ಮಿ ಬಿ. ಕೆ. ಮೈಸೂರು ಎಂದು ಇದೆ. ಅವರು ಆಂಗ್ಲ ಭಾಷೆಗೆ ಕುಳಿತಿದ್ದರೂ 'ಆಬ್‌ಸೆಂಟ್' ಎಂದು ಹಾಕಿದ್ದರು. ಇನ್ನೊಂದು ಉದಾಹರಣೆಯನ್ನ ಕೊಡುತ್ತೇನೆ. ಶ್ರೀಮತಿ ಜಾಹ್ನವಿ ಸಿ. ಆರ್, ಮೈಸೂರು, ಅವರ ರಿಜಿಸ್ಟರ್ ನಂಬರ್ 8632, ಅವರು ಈ ಪುರಾಣ ಪರೀಕ್ಷೆಗೆ ಬಂದಿಲ್ಲ. ಈ ಪ್ರಶ್ನೆ ಪತ್ರಿಕೆಗೆ ಮಾರ್ಕ್ಸ್ 50 ಇಟ್ಟಿದ್ದರು. ಆದರೆ ಉಪನ್ಯಾಸಕರು 52 ಮಾರ್ಕ್ಸ್‌ನ್ನು ಅವರಿಗೆ ಕೊಟ್ಟಿದ್ದಾರೆ. ಇಂತಹ ಸಾವಿರಾರು ಉದಾಹರಣೆಗಳಿವೆ. ಇದರಿಂದ ಎಷ್ಟರಮಟ್ಟಿಗೆ ನಿಮ್ಮ ವಿದ್ಯಾ ಕ್ಷೇತ್ರದಲ್ಲಿ ಅಚಾತುರ್ಯಗಳು ನಡೆಯುತ್ತಿವೆ ಎಂಬುದನ್ನು ತಿಳಿದುಕೊಳ್ಳಬಹುದು. ಇಂದು ನಾನು ಈ ಉದಾಹರಣೆಗಳನ್ನು ಏಕೆ ಕೊಡುತ್ತಿದ್ದೇನೆಂದರೆ ಇವತ್ತಿನ ದಿವಸ ಸಂಸ್ಕೃತವನ್ನು ತೆಗೆದುಕೊಂಡು ವಿದ್ಯಾಭ್ಯಾಸವನ್ನು ಮಾಡತಕ್ಕಂಥ ವಿದ್ಯಾರ್ಥಿಗಳ ಸ್ಥಿತಿ ಚಿಂತಾಜನಕವಾಗಿದೆ. ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ ; ರಾಮಚಂದ್ರ ಭಟ್ಟ, ಉಡುಪಿ, ಅವರಿಗೆ 'ದಿನಚರ್ಯ' ಎಂಬ ಒಂದು ಪ್ರಶ್ನೆಪತ್ರಿಕೆ ಇದೆ. ಅದರಲ್ಲಿ ಹತ್ತಾರು ವರ್ಷಗಳಿಂದ ಯಾರೂ ಪಾಸ್ ಆಗಿಲ್ಲ, ಈ ವಿದ್ಯಾರ್ಥಿ ಬೇರೆ ವಿಷಯಗಳಲ್ಲಿ ನೂರಕ್ಕೆ 45, 50 ಮಾರ್ಕ್ಸ್ ತೆಗೆದುಕೊಂಡಿದ್ದರೂ ಈ ದಿನಚರ್ಯ ಪ್ರಶ್ನೆಪತ್ರಿಕೆಯಲ್ಲಿ ನೂರಕ್ಕೆ 12 ಬಂದಿದೆ. ಮೂರು ವರ್ಷಗಳ ಹಿಂದೆ ನಾನು ಮೈಸೂರಿನಲ್ಲಿ ಒಂದದ ಕಾರ್ಯಕ್ರಮಕ್ಕೆ ಹೋಗಿದ್ದಾಗ ಅಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳು ಕಾಲು ಹಿಡಿದುಕೊಂಡು, ಯಾರ್‍ಯಾರ ಮನೆಯಲ್ಲಿ ಭಿಕ್ಷೆ ಬೇಡಿ ನಾವು ಈ ವಿದ್ಯಾಭ್ಯಾಸ ಮಾಡುತ್ತಿದ್ದೇವೆ ಸಾರ್ ; ಆದರೆ ಈ ರೀತಿ ನಮಗೆ ಅನ್ಯಾಯವಾಗುತ್ತಿರುವುದರಿಂದ ನಮಗೆ ಏನು ಮಾಡಬೇಕೆಂದು ತೋಚುತ್ತಾ ಇಲ್ಲವೆಂದು ತಮ್ಮ ಗೋಳನ್ನು ಹೇಳಿಕೊಂಡರು. ಇದೇ ರೀತಿ ಮುಂದೆಯೂ ನಡೆದರೆ ನಮಗೆ ಉಳಿದಿರುವುದು ಕನ್ನಂಬಾಡಿ ಕಟ್ಟೆಯೊಂದೇ ಎಂದು ಕಣ್ಣೀರು ಹಾಕಿದರು. ಯಾರು ಈ ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳು, ಇದ್ದಾರೆ ಪ್ರೊಫೆಸರ್‌ಗಳು ಇದ್ದಾರೆ, ಮತ್ತು ಸಂಸ್ಥೆಯ ಮುಖ್ಯಸ್ಥರು ಇದ್ದಾರೆ ಅವರಿಗೆ ಈ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆಯನ್ನೇ ಮಾಡದಿರುವಂತಹ ಪರಿಸ್ಥಿತಿ ಬಂದಿದೆ. ಅದಕ್ಕೆ ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ ಈ ವಿದ್ಯಾ ಪದ್ಧತಿ ಬ್ರಿಟಿಷರು ಆಚರಣೆಗೆ ತಂದಂಥ ಪದ್ಧತಿ. ಇದು ಕೇವಲ ಗುಮಾಸ್ತನನ್ನಾಗಿ, ಅಥವಾ ಷಂಡರನ್ನಾಗಿ ಮಾಡುವಂತಹ ಪದ್ಧತಿ. ಇವತ್ತಿನ ದಿವಸ ಒಬ್ಬ ಯುವಕ ವಿದ್ಯಾವಂತನಾದ ಮೇಲೆ ಅವನು ಸರ್ಕಾರಿ ಕಚೇರಿಗೆ ಗುಮಾಸ್ತನಾಗಿ ಬರಬೇಕೇ ವಿನಹ ಸ್ವತಂತ್ರವಾಗಿ ಜೀವನವನ್ನು ಮಾಡಬಲ್ಲನೇ ? ಆದ್ದರಿಂದ ಇವತ್ತು ನಮ್ಮ ವಿದ್ಯಾ ಪದ್ಧತಿ ಮೂಲಕ ಯುವಕರಿಗೆ ಧೈರ್ಯವನ್ನು ತುಂಬಬೇಕು ; ಆ ರೀತಿಯ ಒಂದು ವಿದ್ಯಾ ಪದ್ಧತಿಯನ್ನು ನಾವು ಜಾರಿಗೆ ತರಬೇಕು.

ಇನ್ನು ಟೆಕ್ನಿಕಲ್ ಎಜುಕೇಷನ್ ಬಗ್ಗೆ ಹೇಳುವುದಾದರೆ, ಇವತ್ತು ನಮ್ಮ ರಾಜ್ಯದಲ್ಲಿ ಶಾಲಾ ಕಾಲೇಜುಗಳನ್ನು ಎಷ್ಟು ಜಾಸ್ತಿ ಮಾಡಿದ್ದೇವೆಯೋ ಅದೇ ತರಹ ಈ ಸಂಸ್ಥೆಗಳನ್ನು ಮಾಡಿಲ್ಲ. ಇದಕ್ಕೆ ಸರ್ಕಾರವೇ

ಕೊಟ್ಟಂಥ ಲೆಕ್ಕವನ್ನು ನೋಡಿದರೆ ಗೊತ್ತಾಗುತ್ತದೆ. ಸರ್ಕಾರ ಕೊಟ್ಟಂಥ ಲೆಕ್ಕದ ಪ್ರಕಾರ ಟೆಕ್ನಿಕಲ್ ಸ್ಕೂಲ್‌ಗಳು ಈ ರೀತಿ ಇವೆ.

ಟೆಕ್ನಿಕಲ್ ಸ್ಕೂಲ್‌ಗಳು		
	1981–82	6
	1982–83	6
	1983–84	6
ಸರ್ಕಾರೀ ತಾಂತ್ರಿಕ ಶಾಲೆಗಳು		
	1981–82	26
	1982–83	26
	1983–84	26
ಈವನಿಂಗ್ ಪಾಲಿಟೆಕ್ನಿಕ್‌ಗಳು		
	1981–82	2
	1982–83	2
	1983–84	2
ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀವ್ಸ್		
	1982–83	7
	1983–84	7

ಅಂದರೆ ಟೆಕ್ನಿಕಲ್ ಸ್ಕೂಲ್ ಬಗ್ಗೆ ಸರ್ಕಾರ ಏನೂ ಯೋಚನೆ ಮಾಡುತ್ತಿಲ್ಲ. ಆದರೆ ಕಾಲೇಜುಗಳನ್ನು ಜಾಸ್ತಿ ಮಾಡಿದ್ದೀರಿ, ಇಂಜಿನಿಯರಿಂಗ್ ಕಾಲೇಜುಗಳನ್ನು ಜಾಸ್ತಿ ಮಾಡಿದ್ದೀರಿ; ಮೆಡಿಕಲ್ ಕಾಲೇಜು ಜಾಸ್ತಿ ಮಾಡಿದ್ದೀರಿ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹೆಚ್ಚು ಖರ್ಚು ಬೀಳುತ್ತಿದೆ? ಇವತ್ತಿನ ದಿವಸ ಮೆಡಿಕಲ್ ಕಾಲೇಜಿನಲ್ಲಿ ಪಾಸಾದ ಒಬ್ಬ ಡಾಕ್ಟರ್ ಅಮೇರಿಕಾಕ್ಕೆ ಹೋಗುತ್ತಾನೆಯೋ ವಿನಹ ತನ್ನ ದೇಶದಲ್ಲಿ ಸೇವೆ ಮಾಡುತ್ತಿಲ್ಲ. ಸರ್ಕಾರದವರು ಅವನನ್ನು ಡಾಕ್ಟರ್ ಅಥವಾ ಇಂಜಿನಿಯರ್‌ನನ್ನಾಗಿ ಮಾಡಿದರೆ ಅವನು ಹೋಗುವುದು ಅಮೇರಿಕಾಕ್ಕೆ. ಯಾರು ಬುದ್ಧಿವಂತರು ಇದ್ದಾರೆ, ಯಾರು ಶ್ರೀಮಂತರು ಇದ್ದಾರೆ ಅವರ ಮಕ್ಕಳು ಇವತ್ತು ಇಲ್ಲಿ ಅನುಭವವನ್ನು ಪಡೆದುಕೊಂಡು ಜಪಾನ್, ಅಮೇರಿಕಾ ಮುಂತಾದ ಪರ ದೇಶಗಳಿಗೆ ಹೋಗುತ್ತಾರೆ. ಅವರು ಇಂಡಿಯಾದ ಬಗ್ಗೆ ಚಿಂತನೆಯನ್ನೇ ಮಾಡುವುದಿಲ್ಲ. ಇದಕ್ಕೆ ಈ ವಿದ್ಯಾಭ್ಯಾಸ ಪದ್ಧತಿಯನ್ನು ರಿಸ್ಟ್ರಿಕ್ಟ್ ಮಾಡುವುದಕ್ಕೆ ಏನು ಯೋಚನೆ ನೀವು ಮಾಡಿದ್ದೀರಾ? ಅವನು 5 ವರ್ಷ ಓದಿದ್ದನ್ನು ನೀವು 5 ನಿಮಿಷ ಟೆಸ್ಟ್ ಮಾಡಿ ಹೇಗೆ ಪರೀಕ್ಷೆ ಮಾಡುತ್ತೀರಾ? ಆದ್ದರಿಂದ ಇಂತಹವರಿಗೆ ಕೆಲಸ ಕೊಡುವ ಪದ್ಧತಿಯಲ್ಲಿ ನೀವು ಒಂದು ಸಿಸ್ಟಂ ಮಾಡಿ, ಹರಿಜನ ಗಿರಿಜನರಿಗೆ ಕೊಡಬೇಕಾಗಿರುವುದನ್ನು ಒಂದು ಲಿಸ್ಟ್ ಮಾಡಿ, ಯಾರು ಫಸ್ಟ್ ಕ್ಲಾಸ್ ಬರುತ್ತಾರೆ ಅವರಿಗೆ ಇಂತಿಷ್ಟು ಎಂದು ಲಿಸ್ಟ್ ಮಾಡಿ. ಇವತ್ತಿನ ದಿವಸ ರೆಕ್ರೂಟ್‌ಮೆಂಟ್ ಕಮಿಟಿಗಳು ಬೇರೆ ವ್ಯಾಪಾರ ಮಾಡುವುದಕ್ಕೆ ಹೊರಟಿದ್ದಾರೆ. ಒಬ್ಬ ಇಂಜಿನಿಯರ್‌ಗೆ ಕೆಲಸ ಬೇಕೆಂದರೆ ಅವನು 50 ಸಾವಿರ ಕೊಡಬೇಕು; ಹಾಗೇನೇ ಮೆಡಿಕಲ್ ಗ್ರಾಜುಯೇಟ್ಸ್‌ಗೆ ಇಷ್ಟು. ಪದವೀಧರರಿಗೆ ಇಂತಿಷ್ಟು ಕೊಡಬೇಕೆಂದು ಮಾಡಿದರೆ ಸಮಸ್ಯೆ ಪರಿಹರಿಸುವುದು ಹೇಗೆ? ಅವನು ತನ್ನ ಓದಿಗಾಗಿ 50–70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಓದಿದ ಮೇಲೆ ಪುನಃ ನೇಮಕಕ್ಕೆ ಇಷ್ಟು ಪೋಸ್ಟಿಂಗ್‌ಗೆ ಇಷ್ಟು ಎಂದು ಹೇಳಿದರೆ ಅವನು ಅದನ್ನು ಸಂಪಾದನೆ ಮಾಡುವುದಕ್ಕೆ ಹೊರಡುತ್ತಾನೆ. ದಯಮಾಡಿ ಇದನ್ನು ವಿಚಾರಣೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—25, 50–75 ಸಾವಿರ ಎಂದು ಹೇಳಿದಿರಲ್ಲ ಅದರ ಬಗ್ಗೆ ಸ್ವಲ್ಪ ಮಾಹಿತಿ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಸದನದಲ್ಲಿ ಮೊನ್ನೆ ಇಂಜನೀಯರ್ಸ್ ಹುದ್ದೆಗಳ ಬಗ್ಗೆ ಚರ್ಚೆ ಆದಾಗ ಎಲ್ಲಾ ವ್ಯವಹಾರಗಳು ನಡೆಯುತ್ತಿವೆ. ಲಂಚ ತೆಗೆದುಕೊಳ್ಳಬೇಕಾದರೆ ಒಂದು ರಸೀದಿ ಕೊಟ್ಟು ತೆಗೆದುಕೊಳ್ಳತಕ್ಕ ಕಾನೂನು ಮಾಡಿ ಎನ್ನುವ ಆರೋಪ ಬಂತು. ಆದ್ದರಿಂದ ಮಾನ್ಯ ವಿದ್ಯಾ ಸಚಿವರು ಪರಿಣತರು ಇದ್ದಾರೆ ಮತ್ತು ಬುದ್ಧಿವಂತರಾಗಿದ್ದಾರೆ. ಇವರಲ್ಲಿ ನಾವು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ದಯವಿಟ್ಟು ಈ ಭ್ರಷ್ಟಾಚಾರವನ್ನು ವಿದ್ಯಾಕ್ಷೇತ್ರದಲ್ಲಿಯಾದರೂ ಕಡಿಮೆ ಮಾಡಿ ಎಂದು. ಇನ್ನೊಂದು ಉದಾಹರಣೆಯನ್ನು ಹೇಳುವುದಾದರೆ, ಮೊನ್ನೆ ನಮ್ಮ ಜಿಲ್ಲೆಯಿಂದ ಕೆಲವರು ನೋಟುಗಳನ್ನು ಹಿಡಿದುಕೊಂಡು ಬಂದಿದ್ದರು; ಆದರೆ ಸಂಬಂಧಪಟ್ಟ ಜನ ಸಿಗದೆ ಕೆಲವರು ವಾಪಸ್ ತೆಗೆದುಕೊಂಡು ಹೋಗಿದ್ದಾರೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ ಇಂತಹ 4–6 ಕೇಸ್‌ಗಳನ್ನು ರೆಡ್ ಹ್ಯಾಂಡೆಡ್ ಆಗಿ ಹಿಡಿಯುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಡಿಎಲ್‌ಆರ್‌ಸಿ ಕಮಿಟಿಯನ್ನು ಮಾಡಿದ್ದೀರಿ. ಕೆಲವರು ಹೇಳುವ ರೀತಿಯಲ್ಲಿ ಅದು 7–8 ಸಾವಿರ ಇದ್ದುದು ಈಗ 10–11 ಕ್ಕೆ ಹೋಗಿದೆ ಎಂದು ಹೇಳುತ್ತಿದ್ದಾರೆ. ಮಾನ್ಯ

ವಿದ್ಯಾಸಚಿವರಿಗೆ ನಮ್ಮ ಜಿಲ್ಲೆಯಲ್ಲಿ ಡಿಎಲ್‌ಆರ್‌ಸಿ ಸೆಲೆಕ್ಷನ್ ಮಾಡುವ ಸಮಯದಲ್ಲಿ ದುಡ್ಡು ಸಮೇತ ಅವರನ್ನು ಹಿಡಿಸಿ ಕರೆದುಕೊಂಡು ಬಂದು ತೋರಿಸುತ್ತೇನೆ. ಇವತ್ತು ಕಷ್ಟಪಟ್ಟು 15–20 ವರ್ಷ ಓದಿ ಇಂಜಿನಿಯರೋ, ಡಾಕ್ಟರೋ ಆದಮೇಲೆ ಕೆಲಸಕ್ಕೋಸ್ಕರ ಯಾವ ರೀತಿ ಅಲೆಯುತ್ತಿದ್ದಾರೆ ಅದನ್ನು ನೋಡುತ್ತಾ ಕುಳಿತುಕೊಂಡು ಹೋಗಬೇಕೆಂದು ಹೇಳುತ್ತಿದ್ದೇನೆ. ಇದು ತೀರಾ ನಾಚಿಕೆಗೇಡಿನ ವಿಚಾರ. 25–50 ಸಾವಿರ ಖರ್ಚುಮಾಡಿ ಪುನಃ ಕೆಲಸಕ್ಕೋಸ್ಕರ ಖರ್ಚು ಮಾಡಬೇಕಾಗುತ್ತದೆ. ಹೀಗೆ ಖರ್ಚು ಮಾಡಿದ್ದನ್ನು ಆತನು ಪುನಃ ದುಡಿಯುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ. ಸ್ವಾಮಿ, ದಯವಿಟ್ಟು ಈ ಸದನದಲ್ಲಿ ನಾನು ನೇರವಾದ ಅಪಾದನೆ ಮಾಡಿದ್ದೇನೆಂದು ಯಾರೂ ತಪ್ಪು ತಿಳಿದುಕೊಳ್ಳಬಾರದು. ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ: ಶಿಕಾರಿಪುರದಲ್ಲಿ ಒಂದು ಶಾಲೆಯಿದೆ, ಅದರ ಪ್ರಿನ್ಸಿಪಾಲರು ಕುಡಿದುಕೊಂಡು ಬರುತ್ತಿದ್ದಾರೆ. ಮೊನ್ನೆ ಒಂದು ಕಾರ್ಯಕ್ರಮದಲ್ಲಿ ಆತ ಬಂದಿದ್ದಾಗ ನಾನು ಅವರಿಗೆ ಪಕ್ಕದಲ್ಲಿ ಕುಳಿತುಕೊಳ್ಳಿ ಎಂದು ಹೇಳಿದೆ. ಆಗ ನನಗೆ ಗೊತ್ತಾಯಿತು., ಇದನ್ನು ನೇರವಾಗಿ ನಾನು ಲಿಖಿತ ಮೂಲಕ ಕೊಟ್ಟಿದ್ದೇನೆ. ಅವನನ್ನು ಬದಲಾವಣೆ ಮಾಡಿ ಎಂದು ಹೇಳಿದರೂ ಆ ಅಧಿಕಾರಿಗಳು ತನಿಖೆ ಮಾಡುವುದಕ್ಕೆ ಸಹ ಬರಲಿಲ್ಲ. ಹೋಗಲಿ ಅವನನ್ನು ಬೇರೆ ಕಡೆಗಾದರೂ ಕಳುಹಿಸಿ ಎಂದು ಹೇಳಿದರೂ ಅಲ್ಲೇ ಇಟ್ಟಿದ್ದಾರೆ. ಹೀಗೆ ಇದ್ದರೆ ಆ ಶಾಲೆಯ ಗತಿ ಏನಾಗಬಹುದು ? ಅವನ ಧೈರ್ಯವೇನು ? ಅವನೇ ಈ ರೀತಿ ಮಾಡಿದರೆ ಅಲ್ಲಿಯ ಉಳಿದ ಮಾಸ್ತರುಗಳ ಗತಿ ಏನಾಗಬೇಕು ? ಉಳಿದವರೂ ಅವನ ಮಾತನ್ನು ಕೇಳುತ್ತಾರೆ. ಈ ರೀತಿ ಇರತಕ್ಕಂಥ ವಿದ್ಯಾ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕಂಥ ಮಾನ್ಯ ವಿದ್ಯಾ ಸಚಿವರು ಹಗಲು ರಾತ್ರಿ ಕೆಲಸ ಮಾಡುವಂಥ ತಾವು ಎಲ್ಲಾ ಮಟ್ಟಗಳಲ್ಲೂ ಸುಧಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರೂ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದಾರೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಭ್ರಷ್ಟಾಚಾರವನ್ನು ತಡೆಯುವುದರಲ್ಲಿ ಸರಿಯಾದ ವಿದ್ಯಾಭ್ಯಾಸ ಜನತೆಗೆ ಸಿಗುವ ಹಾಗೆ, ಜನತೆಯ ಅಪೇಕ್ಷೆಯನ್ನೂ ಬೇಡಿಕೆಯನ್ನೂ ಪೂರೈಸಲಿಕ್ಕೆ ಅವರು ಪ್ರಯತ್ನಿಸಬೇಕೆಂದು ಈ ಸದನದ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಂಡು ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗಾ).—ಮಾನ್ಯ ಅಧ್ಯಕ್ಷರೇ, ಇವತ್ತು ಇಟ್ಟಿರತಕ್ಕಂಥ ವಿದ್ಯಾಭ್ಯಾಸದ ಬೇಡಿಕೆಯನ್ನು ಬೆಂಬಲಿಸುತ್ತಾ ಪ್ರಾಥಮಿಕ ಶಿಕ್ಷಣಕ್ಕಿಂತಲೂ ಮೊದಲು ಯಾವ ರೀತಿಯಿಂದ ಶಿಕ್ಷಣ ಕೊಡುತ್ತಿದ್ದೇವೆ ಎನ್ನುವುದರ ಸಲುವಾಗಿ ಒಂದೆರಡು ಮಾತುಗಳನ್ನು ಆಡಲು ನಾನು ಬಯಸುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಎಲ್ಲಕ್ಕಿಂತಲೂ ಪ್ರಮುಖವಾಗಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಕೊಡಬೇಕಾಗಿತ್ತು. ನಮ್ಮ ಶಿಕ್ಷಣ ಪದ್ಧತಿ ಮತ್ತು ಶಿಕ್ಷಣ ಪರಿಸ್ಥಿತಿ ಯಾವ ರೀತಿ ಇದೆಯೆಂದರೆ ನಮ್ಮ ಗುಲ್ಬರ್ಗಾ ನಗರ ಆರು ದೊಡ್ಡ ಮಹಾನಗರಗಳಲ್ಲಿ ಒಂದಾಗಿದೆ. ಅಲ್ಲಿ ಬಂತೂರು ಎಂಬಲ್ಲಿ ಒಂಭೈನೂರು ಹುಡುಗರು ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿದ್ದಾರೆ. ಅಲ್ಲಿ ಕೇವಲ ಐದು ಕೋಣೆಗಳು ಮಾತ್ರ ಇವೆ. ಈ ಐದು ಕೋಣೆಗಳಲ್ಲಿ ಒಂಭೈನೂರು ಹುಡುಗರು ಶಿಕ್ಷಣ ಪಡೆಯುತ್ತಿದ್ದಾರೆ ಎಂದ ಮೇಲೆ ಅಲ್ಲಿಯ ಪರಿಸ್ಥಿತಿಯನ್ನು ಊಹಿಸಿಕೊಳ್ಳಬಹುದು. ಅಲ್ಲಿ 28 ಮಂದಿ ಮೇಷ್ಟ್ರುಗಳು ಇದ್ದಾರೆ. ಮೂರು ಖೋಲಿಗಳು ಬಿದ್ದುಹೋಗಿವೆ. ಇದರ ಬಗ್ಗೆ ನಾನು ಹಿಂದೆ ಮಾತನಾಡಿದ್ದರೂ ಕೂಡ ಯಾವುದೇ ವ್ಯವಸ್ಥೆಯನ್ನು ಇದುವರೆಗೂ ಮಾಡಿಲ್ಲ. ನಗರ ಪ್ರದೇಶದಲ್ಲಿರತಕ್ಕ ಪ್ರಾಥಮಿಕ ಶಾಲೆ ಈ ರೀತಿ ಇದ್ದಾಗ ಹಳ್ಳಿಗಳ ಪರಿಸ್ಥಿತಿ ಹೇಗಿರಬಹುದು ಎಂದು ವಿಚಾರಮಾಡುವುದು ಬಹಳ ಮುಖ್ಯವಾದ ವಿಷಯವಾಗಿದೆ. ನಾವು ಪ್ರಗತಿಪರವಾದ ಶಿಕ್ಷಣ ಬೇಕು ಎಂದು ಸಾಕಷ್ಟು ಮಾತನಾಡುತ್ತೇವೆ. ಅದರೆ ಅಂಧಶ್ರದ್ಧೆ ಆಧಾರದ ಮೇಲೆ ಶಿಕ್ಷಣ ಇರಬಾರದು. ಒಳ್ಳೆಯ ಶಿಕ್ಷಕರು ಬೇಕು, ಶಿಕ್ಷಕರಿಗೆ ಸರಿಯಾಗಿ ಸಂಬಳ ಸಿಗಬೇಕು, ಮಕ್ಕಳಿಗೆ ಮಧ್ಯಾಹ್ನದ ಊಟ ಸಿಗಬೇಕು ಎಂದು ಹೇಳುತ್ತಿದ್ದೇವೆ. ಆದರೆ ಮುಖ್ಯವಾಗಿ ಅವರು ಶಾಲೆಗೆ ಹೋಗುವಾಗ ಆ ಶಾಲೆ ಯಾವ ರೀತಿ ಇರಬೇಕು ? ಬೆಂಚುಗಳಿಲ್ಲ, ಸರಿಯಾದ ಬೋರ್ಡುಗಳಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಯಾವ ರೀತಿಯ ಶಿಕ್ಷಣ ದೊರಕಲು ಸಾಧ್ಯವೆಂಬುದನ್ನು ಇವತ್ತು ಯೋಚನೆ ಮಾಡಬೇಕಾಗಿದೆ. ಸರ್ಕಾರ ಯಾವುದೇ ಇರಲಿ, ಇದರಲ್ಲಿ ರಾಜಕೀಯ ಬೇಡ. ಶಿಕ್ಷಣದ ಬಗ್ಗೆ ಚಿಂತನೆ ಮಾಡುವುದು ಅಗತ್ಯವಾಗಿದೆ. ಆ ಕಡೆಯ ಸದಸ್ಯರು ಕಳೆದ 35 ವರ್ಷಗಳಿಂದ ಮಾಡಿಲ್ಲದ ವಿಚಾರವನ್ನು ಒಂದೇ ದಿವಸದಲ್ಲಿ ಮಾಡಿ ಎಂದು ಹೇಳುತ್ತಾರೆ. ನಮ್ಮ ಸ್ನೇಹಿತರಾದ ಖಾರ್ಗೆಯವರು ಎಲ್ಲವನ್ನೂ ರಾಷ್ಟ್ರೀಕರಣ ಮಾಡಿಬಿಡಿ ಎಂದು ಹೇಳಿದರು. ಇಂಜಿನಿಯರ್ ಕಾಲೇಜುಗಳನ್ನೂ, ಮೆಡಿಕಲ್ ಕಾಲೇಜುಗಳನ್ನೂ ರಾಷ್ಟ್ರೀಕರಣ ಮಾಡಿ ಎಂದು ಹೇಳಿದರು. ಮೂವತ್ತೈದು ವರ್ಷ ಅವರು ಇದ್ದಾಗಲೂ ಈ ಕೆಲಸ ಮಾಡಲಿಲ್ಲ. ಇವತ್ತಿನ ದಿವಸ ನಾವು ಪ್ರಗತಿಪರವಾದ ದಾರಿಯನ್ನು ಹಿಡಿದಿದ್ದೇವೆ ಎಂದು ನನಗನ್ನಿಸುವುದಿಲ್ಲ. ಅದರಲ್ಲೂ ಕೂಡ ನಾವು ಪ್ರಮುಖವಾಗಿ ಪ್ರಾಥಮಿಕ ಶಾಲಾ ಶಿಕ್ಷಣದ ಬಗ್ಗೆ ಹೆಚ್ಚು ವಿಚಾರ ಮಾಡುತ್ತಿಲ್ಲವೆಂದು ನನಗನ್ನಿಸುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಣದ ವಿಚಾರವಾಗಿ ನೋಡುವುದಾದರೆ ಮೊಟ್ಟಮೊದಲನೆಯದಾಗಿ ಕಟ್ಟಡ ಸರಿಯಾಗಿರಬೇಕು. ಆದರೆ ಕಟ್ಟಡವೇ ಸರಿಯಿಲ್ಲ, ಬಿದ್ದುಹೋಗುತ್ತಿದೆ. ಮಳೆಗಾಲದ ದಿವಸಗಳಲ್ಲಿ ಯಾರೂ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಕಾರಣ ಇಷ್ಟೆ: ಕಟ್ಟಡ ಯಾವಾಗ ಕುಸಿದು ಬೀಳುತ್ತದೋ ಹೇಳ್ಳು

ವುದಕ್ಕೆ ಬರುವುದಿಲ್ಲ. ತಂದೆ ತಾಯಿಗಳಿಗೆ ಈ ಭಯ ಸಹಜವಾಗಿಯೇ ಇರುತ್ತದೆ. ಹೀಗಾದರೆ ಆ ಮಕ್ಕಳು ಯಾವ ರೀತಿ ಶಿಕ್ಷಣ ಪಡೆಯಬೇಕು ? ಒಳ್ಳೆಯ ಶಿಕ್ಷಣ ಪಡೆದು ಅವರು ಹೇಗೆ ಉತ್ತೀರ್ಣರಾಗಬೇಕು ಎಂಬುದರ ಬಗ್ಗೆ ಇವತ್ತಿನ ದಿವಸ ನಾವು ಚಿಂತನೆ ಮಾಡಬೇಕಾಗಿದೆ. ಪಟ್ಟಣ ಪ್ರದೇಶಗಳಲ್ಲಿ ಈ ಗತಿಯಾದರೆ ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪರಿಸ್ಥಿತಿ ಹೇಗಿರಬಹುದು ? ಅಲ್ಲೂ ಕೂಡ ಸರಿಯಾದ ಕಟ್ಟಡಗಳಿಲ್ಲ. ಕಟ್ಟಡ ಸಲುವಾಗಿ ಹೆಚ್ಚಿನ ಹಣ ಸಹಿತ ನಾವು ಇಟ್ಟಿಲ್ಲ. ಕೆಲವು ಕಡೆ ಕಟ್ಟಡಗಳಿಲ್ಲ. ಬಾಡಿಗೆ ಮನೆಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡುತ್ತಿದ್ದಾರೆ. ಒಂದು ಉದಾಹರಣೆ ಹೇಳಬೇಕೆಂದರೆ ಚಕ್ರಘಟ್ಟ ಎಂಬಲ್ಲಿ ಒಂದು ಶಾಲೆ ಇದೆ. ಆ ಕಟ್ಟಡ ಇವತ್ತು ಬೀಳುತ್ತದೋ, ನಾಳೆ ಬೀಳುತ್ತದೋ ಗೊತ್ತಿಲ್ಲ. ಮಕ್ಕಳಿಗೆ ಶಾಲೆಗೆ ಕಳಿಸಬೇಕಾದರೆ ತಂದೆತಾಯಿಗಳು ವಿಚಾರ ಮಾಡಬೇಕಾದ ಪರಿಸ್ಥಿತಿ ಇದೆ. ಅನುಕೂಲಸ್ಥರು ತಮ್ಮ ಮಕ್ಕಳನ್ನು ಒಳ್ಳೆಯ ಶಾಲೆಗಳಿಗೆ ಕಳಿಸುತ್ತಾರೆ. ಆದರೆ ಬಡವರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಮಾತ್ರವೇ ಕಳಿಸಬೇಕಾಗುತ್ತದೆ. ಕಟ್ಟಡಗಳ ಪರಿಸ್ಥಿತಿ ಹೀಗಿರುವಾಗ ಮಳೆ ಬಂದಾಗ ಮಕ್ಕಳನ್ನು ಶಾಲೆಗೆ ಯಾರೂ ಕಳಿಸುವುದಿಲ್ಲ. ಕಳಿಸಿದರೆ ಯಾವಾಗ ಕಟ್ಟಡ ಕುಸಿದು ಬೀಳುತ್ತದೋ ಎಂದು ಎಲ್ಲರಿಗೂ ಅಧೈರ್ಯ ಇದೆ. ಇಂತಹ ಪರಿಸ್ಥಿತಿ ಬಂತೂರು ಮತ್ತು ಚಕ್ರಘಟ್ಟದ ಶಾಲೆಗಳಲ್ಲಿ ಇದೆ. ಬಾಡಿಗೆ ಮನೆಯಲ್ಲಿ ಶಾಲೆ ನಡೆಯುತ್ತಿರುವಾಗ, ಮನೆ ಮಾಲೀಕರು ಅವರು ಬಿಟ್ಟು ಹೋದರೆ ಸಾಕು ಎಂದು ಹೇಳುತ್ತಿದ್ದಾರೆ. ಇವುಗಳಿಗೆ ಬೇರೆ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟೋಣ ಎನ್ನುವ ವಿಚಾರ ಸರ್ಕಾರಕ್ಕೆ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳ ಭವಿಷ್ಯ ಏನಾಗಬೇಕು ? ಅವರಿಗೆ ಶಿಕ್ಷಣ ಯಾವ ರೀತಿಯಿಂದ ಸಿಗಬೇಕು ? ಪರೀಕ್ಷೆಯಲ್ಲಿ ಅವರು ಉತ್ತೀರ್ಣರಾಗುವುದು ಹೇಗೆ ? ಎರಡನೆಯದಾಗಿ ಹಿಂದಿನ ಸರ್ಕಾರದವರು ಏಕೋ ಏನೋ ಅಟೆಂಡರ್ ಪೀವನ್‌ಗಳನ್ನು ಕೂಡ ತೆಗೆದು ಹಾಕಿದರು. ಈಗ ಅಲ್ಲಿ ಗಂಟೆ ಹೊಡೆಯುವವರು ಯಾರೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಿಂದಿನ ಸರ್ಕಾರ ತೆಗೆದು ಹಾಕಿದ್ದಲ್ಲ. ರಾಚಯ್ಯನವರ ಸರ್ಕಾರ ಅವರನ್ನು ತೆಗೆದುಹಾಕಿದ್ದು.

ಶ್ರೀ ಎಸ್. ಕೆ. ಕಾಂತಾ.—ಸ್ವಾಮಿ, ಇವತ್ತಿನ ದಿವಸ ಅಲ್ಲಿ ಜವಾನರು ಇಲ್ಲ. ಶಾಲೆಗಳಲ್ಲಿ ಅವರ ಅವಶ್ಯಕತೆ ಇರುತ್ತದೆ. ಕಲ್ಬುರ್ಗಿಯಲ್ಲಿ ಒಂದು ಕೋಟೆ ಇದೆ. ಅದರ ಎದುರುಗಡೆ ಶಹಬಜಾರ್‌ನಲ್ಲಿ ಒಂದು ಶಾಲೆ ಇದೆ. ಅಲ್ಲಿ ರಾತ್ರಿ ಆಯಿತೆಂದರೆ ಪುಂಡರು ಹೆಣ್ಣುಮಕ್ಕಳ ವ್ಯವಹಾರ ಮಾಡುತ್ತಿರುತ್ತಾರೆ. ಶಾಲಾ ಕಟ್ಟಡದಲ್ಲಿ ಈ ವ್ಯವಹಾರ ನಡೆಯುತ್ತಿದೆ. ಒಬ್ಬ ಜವಾನ ಅಥವಾ ಅಟೆಂಡರ್‌ನನ್ನು ಕೊಡದೇ ಇರುವುದರಿಂದ ಇದಕ್ಕೆ ಕಾರಣವಾಗಿದೆ. ಇದು ಇವತ್ತು ಮಾತ್ರ ಅಲ್ಲ, ಯಾವಾಗಲೂ ಈ ಪರಿಸಿತಿ ಇದೆ. ಕಳೆದ ಮೂವತ್ತೈದು ವರ್ಷಗಳಿಂದಲೂ ಈ ದೇಶದಲ್ಲಿ ಈ ಪರಿಸ್ಥಿತಿ ಇದೆ. ಈ ಬಗ್ಗೆ ಸರ್ಕಾರ ವಿಚಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ಕಡೆ ಇವತ್ತು ವಿದ್ಯಾವಂತರು 35–37 ಪರ್ಸೆಂಟ್ ಇದ್ದಾರೆ, ಅವರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಹೇಳುವಾಗ ಇದರಲ್ಲಿ ಹಳ್ಳಿಗರು ಎಷ್ಟು ಜನ ಓದುತ್ತಿದ್ದಾರೆ, ಯಾವ್ಯಾವ ಹಂತದಲ್ಲಿ ಎಷ್ಟು ಜನರು ಓದುತ್ತಿದ್ದಾರೆ, ಪ್ರಾಥಮಿಕ ಶಾಲೆಯಲ್ಲಿ ಎಷ್ಟು ಜನರು ಓದುತ್ತಿದ್ದಾರೆ ? ತಾವು ಕೊಟ್ಟಿರುವ ವರದಿಯ ಪ್ರಕಾರ 47–48 ಲಕ್ಷ ಹುಡುಗರು ಓದುತ್ತಿದ್ದಾರೆ ಎಂದು ಹೇಳಿದ್ದೀರಿ. ಅವರು ಮುಂದೆ ಪ್ರೌಢಶಾಲೆಗೆ ಬಂದಾಗ 7–8 ಲಕ್ಷಕ್ಕೆ ಇಳಿಯುತ್ತಾರೆ. ನಂತರ ಕಾಲೇಜಿಗೆ ಹೋದ ಮೇಲೆ ಒಂದು ಲಕ್ಷ ಅಥವಾ ಎರಡು ಲಕ್ಷಕ್ಕೆ ಉಳಿದುಕೊಂಡುಬಿಡುತ್ತಾರೆ. ಅಲ್ಲಿ ಯಾವ ರೀತಿಯ ಶಿಕ್ಷಣವನ್ನು ಅವರಿಗೆ ಕೊಡುತ್ತಿದ್ದಾರೆ ? ಒಂದು ಕಡೆ ಕಡ್ಡಾಯ ಶಿಕ್ಷಣ ಸಿಗಬೇಕು ಎಂದು ಹೇಳುತ್ತಿದ್ದೇವೆ. ಎಲ್ಲರಿಗೂ ಶಿಕ್ಷಣ ಸಿಗಬೇಕು ಎಂದು ಒಂದು ಕಡೆ ಹೇಳುವಾಗ, ಒಳ್ಳೆಯ ಶಿಕ್ಷಣ ಕೊಡುವ ವ್ಯವಸ್ಥೆಯಾಗಬೇಕು, ಅಂತಹ ವ್ಯವಸ್ಥೆ ನಮ್ಮಲ್ಲಿದೆಯೇ ಎನ್ನತಕ್ಕದ್ದನ್ನು ವಿಚಾರ ಮಾಡಬೇಕಾದುದು ಬಹಳ ಮುಖ್ಯವಾದ ವಿಷಯವಾಗಿದೆ. ಹಳ್ಳಿಗಳಲ್ಲಿ ಇವತ್ತಿನ ದಿವಸ ಎಷ್ಟೋ ಜನರು ತಮ್ಮ ಮಕ್ಕಳನ್ನು ಶಾಲೆಗೆ ಏಕೆ ಕಳಿಸಬೇಕು ? ತಮ್ಮ ಮಕ್ಕಳು ದನ ಕಾಯ್ದರೆ ತಿಂಗಳಿಗೆ 20–30 ರೂಪಾಯಿ ದುಡಿದು ತರುತ್ತಾರೆ ಎಂದು ಹೇಳುತ್ತಾರೆ. ಸ್ಕೂಲು ಯಾಕೆ ಎಂದು ಅವರು ಕೇಳುತ್ತಾರೆ. ಇದನ್ನು ಒಂದು ವೇಳೆ ತಪ್ಪಿಸಬೇಕಾದರೆ, ಕಡ್ಡಾಯ ಶಿಕ್ಷಣವನ್ನು ಯಶಸ್ವಿಯಾಗಿ ಜಾರಿಗೆ ತರಬೇಕಾದರೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಈಗ ಮಕ್ಕಳಿಗೆ ಮಿಡ್ಡೇ ಮೀಲ್ಸ್ ಕಾರ್ಯಕ್ರಮ ಇದೆ. ಇದನ್ನು ಯಶಸ್ವಿಯಾಗಿ ಮಾಡಬೇಕಾದರೆ, ಮಕ್ಕಳಿಗೆ ಒಳ್ಳೆಯ ಆಹಾರ ಕೊಡಬೇಕು. ಇವತ್ತಿನ ದಿವಸ ಈ ಮಿಡ್ಡೇ ಮೀಲ್ಸ್ ವಿಚಾರದಲ್ಲಿ ಒಂದು ಹಾಸ್ಯಾಸ್ಪದವಾದ ಸ್ಥಿತಿ ನಿರ್ಮಾಣವಾಗಿದೆ. ನಮ್ಮ ಜಿಲ್ಲೆಯ ಚಿತಾಪುರ ತಾಲ್ಲೂಕಿನಲ್ಲಿ ಯಾವುದೇ ಶಾಲೆಯಲ್ಲೂ ಕೂಡ ಮಿಡ್ಡೇ ಮೀಲ್ಸ್ ಕೊಡುತ್ತಿಲ್ಲ; ಮಕ್ಕಳಿಗೆ ಊಟ ಸಿಗುತ್ತಿಲ್ಲ. ಎಲ್ಲವನ್ನೂ ಅಲ್ಲಿರುವಂತಹ ವ್ಯವಸ್ಥಾಪಕರು ಮತ್ತು ಮಾಸ್ತರುಗಳು ತಿಂದು ಬಿಡುತ್ತಾರೆ. ಇದರ ಲಾಭ ಯಾರಿಗೆ ಆಗಿದೆ ಎಂದರೆ ಅಧಿಕಾರಿಗಳು ಮತ್ತು ಉಪಾಧ್ಯಾಯರುಗಳಿಗೆ ಮಾತ್ರ ಆಗಿದೆ. ಇದರ ಲಾಭವನ್ನು ಅವರು ಪಡೆಯುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇವತ್ತು ಮಿಡ್ಡೇ ಮೀಲ್ಸ್ ಕೊಡತಕ್ಕಂತಹ ವಿಚಾರದಲ್ಲಿ ನಡೆಯುತ್ತಿದೆ. ಇದರ ಮೇಲೆ ತಾವು ಹೆಚ್ಚು ಲಕ್ಷ್ಯ ಕೊಡಬೇಕು. ಅದಕ್ಕೆ ತಕ್ಕ ವ್ಯವಸ್ಥೆಯನ್ನು ನಿರ್ಮಾಣ ಮಾಡಿ ಇದು ಪೋಲಾಗದಂತೆ ನೋಡಬೇಕು. ಇದರ ಬಗ್ಗೆ ವಿಚಾರ ಮಾಡುವಂತಹದ್ದು ಅತಿ ಮುಖ್ಯವಾದುದು. ಈಗ ಮೆಟ್ರಿಕ್ ಪರೀಕ್ಷೆಗಳಲ್ಲಿ ಅಂದರೆ ಎಸ್.ಎಸ್.ಎಲ್.ಸಿ.ಯಲ್ಲಾಗಲೀ ಅಥವಾ ಪಿ.ಯು.ಸಿ.

ಪರೀಕ್ಷೆಯಲ್ಲಾಗಲೀ ಮಾರ್ಕ್ಸ್‌ನ್ನು ಹೆಚ್ಚಿಗೆ ಮಾಡತಕ್ಕಂತಹದ್ದು ಒಂದು ವಿಚಾರ ಇದೆ. ಮುಂದೆ ಅವರು ಇಂಜಿನಿಯರಿಂಗ್ ಕಾಲೇಜಿಗಾಗಲೀ ಅಥವಾ ಮೆಡಿಕಲ್ ಕಾಲೇಜಿಗಾಗಲಿ ಅಥವಾ ಪಾಲಿಟೆಕ್ನಿಕ್‌ಗಾಗಲೀ ಹೋಗಬೇಕಾಗಿರುವ ಪ್ರಯುಕ್ತ ಮಾರ್ಕ್ಸ್‌ನ್ನು ಹೆಚ್ಚು ಮಾಡುವ ಸಲುವಾಗಿ ಎಷ್ಟೋ ಕೇಸುಗಳಲ್ಲಿ ಅವ್ಯವ ಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿ ಪಡೆದುಕೊಳ್ಳುವ ಮಾರ್ಕ್ಸ್‌ನ ಪರಿಸ್ಥಿತಿ ಹೀಗಾದರೆ, ಹೇಗೆ? ಇವತ್ತು ಐ.ಟಿ.ಐ. ತರಬೇತಿಗಾಗಿ ಸೇರಿ ಕೊಳ್ಳಬೇಕಾದರೂ, ಆ ವಿದ್ಯಾರ್ಥಿ 8ನೇ ತರಗತಿಯಲ್ಲಿ ಉತ್ತೀರ್ಣನಾಗಿರಬೇಕಾಗುತ್ತದೆ. ಎಷ್ಟೋ ಶಾಲೆಗಳಲ್ಲಿ ಇದರ ಬಗ್ಗೆ ಮಾರ್ಕ್ಸ್ ಕೊಟ್ಟಿದ್ದರ ಬಗ್ಗೆ ಮಾಹಿತಿ ಇರುವುದಿಲ್ಲ. ಅದಕ್ಕೆ ಈಗ ಏನು ಮಾಡುತ್ತಿದ್ದಾರೆಂದರೆ ಹೊಸದಾಗಿ ಕಾರ್ಡುಗಳನ್ನು ಪ್ರಿಂಟ್ ಮಾಡಿಸಿ 400–500 ಮಾರ್ಕ್ಸ್‌ಗಳನ್ನು ಕೊಡುತ್ತಿದ್ದಾರೆ. ಈ ವಿಚಾರವನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಗುಲ್ಬರ್ಗದಲ್ಲಿ ಮೊನ್ನೆ ನಡೆದ ಐ.ಟಿ.ಐ. ತರಬೇತಿಯ ಸಂದರ್ಶನಕ್ಕೆ ನಾನೂ ಹೋಗಿದ್ದೆ. ಅಲ್ಲಿ ಈ ರೀತಿ ಮಾಡಿದ್ದಾರೆ. ಇದೇ ರೀತಿ ಪಿ.ಯು.ಸಿ. ಬೋರ್ಡಿನಲ್ಲೂ ಮಾರ್ಕ್ಸ್‌ನ್ನು ಹೆಚ್ಚು ಕೊಟ್ಟಿರತಕ್ಕಂತಹ ಅವ್ಯವಸ್ಥೆ ಇದೆ. ಏಕೆಂದರೆ ಯಾರ ಮಾರ್ಕ್ಸ್ ಕಾರ್ಡು ನೋಡಿ ದರೂ 99 ಪರ್ಸೆಂಟನ್ನು ಪಡೆದಿರುತ್ತಾರೆ. ಪಿ.ಯು.ಸಿ. ಎರಡನೇ ವರ್ಷ ಬಿಟ್ಟರೆ ಅದರ ಹಿಂದಿನ ಪರೀಕ್ಷೆ ಗಳಲ್ಲಿ ಯಾವ ವಿದ್ಯಾರ್ಥಿಯೇ ಆಗಲೀ ಆ ರೀತಿ ಹೆಚ್ಚಿನ ಮಾರ್ಕ್ಸ್‌ನ್ನು ಪಡೆದಿಲ್ಲ. ಇದರಲ್ಲಿ ಅಧಿಕಾರಿಗಳು ಹಾಗೂ ಮಾಸ್ಟರ್ ಇಬ್ಬರೂ ಸೇರಿಕೊಂಡು ಮೋಸ ಮಾಡುತ್ತಿದ್ದಾರೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಇದರ ಬಗ್ಗೆ ಗುಲ್ಬರ್ಗದಲ್ಲಿರುವ ಒಂದು ಪತ್ರಿಕೆಯಲ್ಲಿ ಬಂದಿರತಕ್ಕಂತಹದ್ದನ್ನು ಸಭೆಯ ಗಮನಕ್ಕೆ ತರುತ್ತೇನೆ.

ನಮ್ಮ ಗುಲ್ಬರ್ಗ ಯೂನಿವರ್ಸಿಟಿಯಲ್ಲಿ ಕೊಟ್ಟಿರತಕ್ಕಂತಹ ಅಂಕಪಟ್ಟಿಗಳ ಪತ್ರವನ್ನು ನೋಡಿದಾಗ ಅದರಲ್ಲಿ ಯೂನಿವರ್ಸಿಟಿಯ ಎಕ್ಸಾಮಿನೇಷನ್ ಕಂಟ್ರೋಲರ್ ಸಹಿ ಮತ್ತು ಇತರೆ ಎಲ್ಲರ ಸಹಿಯೂ ಇದೆ. ಆದರೆ ಮಾರ್ಕ್ಸ್ ಹಾಕತಕ್ಕಂತಹ ಜಾಗ ಮಾತ್ರ ಖಾಲಿಯಿಟ್ಟಿದ್ದಾರೆ. ಇದು ಪ್ರಿಂಟಾಗಿದೆ. ನಮ್ಮ ಪಿ.ಯು.ಸಿ. ಬೋರ್ಡಿನಲ್ಲೂ ಇದೇ ಪರಿಸ್ಥಿತಿ ಮತ್ತು ಯೂನಿವರ್ಸಿಟಿಯಲ್ಲೂ ಇದೇ ಒಂದು ಪರಿಸ್ಥಿತಿ ಇರು ವುದನ್ನು ನಾವೆಲ್ಲರೂ ನೋಡಬಹುದು. ಎಕ್ಸಾಮಿನೇಷನ್ ಕಂಟ್ರೋಲರ್‌ರವರ ಸಹಿ ಇದೆ, ಆದರೆ ಮಾರ್ಕ್ಸ್ ಮಾತ್ರ ಇದರಲ್ಲಿ ಹಾಕಿಲ್ಲ. ಎಲ್ಲರೂ ಸಹಿ ಮಾಡಿದ್ದಾರೆ ಅದರಲ್ಲಿ. ಅದು 11–1–1983 ರಲ್ಲಿ ನಡೆದಿರತಕ್ಕಂತಹ ಒಂದು ಅವ್ಯವಹಾರ. ಇವತ್ತು ನಮ್ಮ ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯದ ಮಟ್ಟದಲ್ಲೇ ಆಗಲೀ ಪಿ.ಯು.ಸಿ. ಬೋರ್ಡ್ ಮಟ್ಟದಲ್ಲೇ ಆಗಲೀ, ಶಾಲಾ ಮಟ್ಟದಲ್ಲೇ ಆಗಲೀ ಇಂತಹ ಒಂದು ಅವ್ಯವಸ್ಥೆ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕಾದುದು ಅತ್ಯಗತ್ಯವಾಗಿದೆ. ಮಿಡ್ಡೇ ಮೀಲ್ಸ್‌ಗೆ ಇನ್ನೂ ಹೆಚ್ಚು ಹಣವನ್ನು ಒದಗಿಸಿ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಬೇಕು. ಹೆಚ್ಚಿಗೆ ಮಕ್ಕಳನ್ನು ಆಕರ್ಷಿಸಬೇಕಾದರೆ ಮಿಡ್ಡೇ ಮೀಲ್ಸ್ ಇನ್ನೂ ಹೆಚ್ಚು ಉಪಯೋಗ ಕಾರಿಯಾಗುವ ರೀತಿಯಲ್ಲಿ ಮಾಡಬೇಕು. ತಂದೆ ತಾಯಿಗಳು ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳಿಸಿ ಮತ್ತು ಆ ಮಕ್ಕಳು ಶಾಲೆಗೆ ಬರಬೇಕಾದರೆ ಮಿಡ್ಡೇ ಮೀಲ್ಸ್‌ಗೆ ಹೆಚ್ಚು ಹಣವನ್ನು ಕೊಡಬೇಕು. ಮತ್ತೆ ಕೊಟ್ಟಂತಹ ಹಣ ಪೋಲಾಗದ ರೀತಿಯಲ್ಲಿ ಕೆಲಸ ಮಾಡಬೇಕಾದುದು ಅತಿ ಮುಖ್ಯ.

ಇನ್ನು ಪ್ರಿಂಟಿಂಗ್ ಮತ್ತು ಸ್ಟೇಷನರಿಯ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಏಕೆಂದರೆ ನಮ್ಮ ಗುಲ್ಬರ್ಗದಲ್ಲಿ ಟೆಕ್ಸ್ಟ್‌ಬುಕ್ ಪ್ರೆಸ್ ಇದೆ. ಅಲ್ಲಿರತಕ್ಕಂತಹ ಪ್ರೆಸ್ ಹೇಗಿದೆ ಎಂದರೆ ಆ ಪ್ರೆಸ್‌ನಲ್ಲಿ ಯಾವುದೂ ಪ್ರಿಂಟ್ ಆಗುತ್ತಿಲ್ಲ. ಪ್ರೈವೇಟ್ ಪ್ರೆಸ್‌ನಲ್ಲಿ ಟೆಕ್ಸ್ಟ್‌ಬುಕ್ಕನ್ನು ಪ್ರಿಂಟ್ ಮಾಡತಕ್ಕಂತಹ ವ್ಯವಸ್ಥೆ ಇವತ್ತು ಅಲ್ಲಿ ನಡೆಯುತ್ತಿದೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಪ್ರಿಂಟಿಂಗ್ ಪ್ರೆಸ್ಸನ್ನು ಮಾಡಿ, ಅದಕ್ಕಾಗಿ ಕೆಲಸಗಾರರನ್ನೂ ಕೂಡ ನೇಮಕ ಮಾಡಿ, ಆ ಪ್ರೆಸ್ಸನ್ನು ಖಾಲಿ ಇಡತಕ್ಕಂತಹದ್ದು ಯಾವ ನೀತಿ ಎಂಬುದನ್ನು ವಿಚಾರ ಮಾಡಬೇಕಾಗಿದೆ.

ಬೆಂಗಳೂರಿನಲ್ಲಿರತಕ್ಕಂತಹ ಸರ್ಕಾರಿ ಸೆಂಟ್ರಲ್ ಪ್ರೆಸ್‌ನಲ್ಲಿ ಆಗತಕ್ಕಂತಹ ಕೆಲಸಕ್ಕೂ ನಮ್ಮ ಗುಲ್ಬರ್ಗ ದಲ್ಲಿ ಆಗತಕ್ಕಂತಹ ಕೆಲಸಕ್ಕೂ ಹೋಲಿಕೆ ಮಾಡಿ ನೋಡುವುದಾದರೆ, ನಮ್ಮಲ್ಲಿ ಹೆಚ್ಚು ಪ್ರಿಂಟಿಂಗ್ ಕೆಲಸ ಆಗುತ್ತಿದೆ. ಆದರೆ ಇಲ್ಲಿ ನಮಗಿಂತ ಕಡಿಮೆ ಪ್ರಿಂಟಿಂಗ್ ಕೆಲಸ ವಾಗುತ್ತಿದೆ. ನನಗೆ ಇದರಲ್ಲಿ ಏಕೆ ಇಷ್ಟೊಂದು ಆಸಕ್ತಿ ಇದೆ ಎಂದರೆ, ನಾನೂ ಕೂಡ ಗುಲ್ಬರ್ಗ ಪ್ರಿಂಟಿಂಗ್ ಪ್ರೆಸ್‌ನ ಯೂನಿಯನ್ನನ್ನು ಸಂಘಟನೆ ಮಾಡಿದ್ದೇನೆ. ಗುಲ್ಬರ್ಗದಲ್ಲಿ 65 ಪರ್ಸೆಂಟ್ ಕೆಲಸ ಮಾಡಿದರೆ ಇಲ್ಲಿ ಕೆಲಸವಾಗುವುದು ಕೇವಲ 40–50 ಪರ್ಸೆಂಟ್‌ವರೆಗೆ ಮಾತ್ರ. ಇದಕ್ಕೆ ಕಾರಣವೇನೆಂದು ಕೇಳಿದಾಗ ಅವರು ಹೇಳುತ್ತಾರೆ: ಇಲ್ಲಿ ಕೆಟ್ಟು ಹೋದಂತಹ ಯಂತ್ರ ಗಳನ್ನು ತಕ್ಷಣ ರಿಪೇರಿ ಮಾಡುವುದಿಲ್ಲ, 8–10 ದಿವಸಗಳವರೆಗೆ ಹಾಗೇ ಬಿಟ್ಟುಬಿಡುತ್ತಾರೆ. ಆದ್ದರಿಂದ ನಾವು ಅಷ್ಟೊಂದು ಕೆಲಸವನ್ನು ಕೊಡುವುದಕ್ಕಾಗುವುದಿಲ್ಲವೆಂದು ಅಲ್ಲಿಯ ನೌಕರರು ಹೇಳುತ್ತಾರೆ. ಸರ್ಕಾರ ಇಷ್ಟೆಲ್ಲಾ ವೆಚ್ಚ ಮಾಡಿ, ಪ್ರಿಂಟಿಂಗ್ ಪ್ರೆಸ್ಸನ್ನು ಮಾಡಿ, ಅಲ್ಲಿ ಕೆಟ್ಟುಹೋದಂತಹ ಯಂತ್ರಗಳನ್ನು ತಕ್ಷಣ ರಿಪೇರಿ ಮಾಡಿಸದಿದ್ದರೆ ಹೇಗೆ? ಆದ್ದರಿಂದ ಇದರ ಬಗ್ಗೆಯೂ ಕೂಡ ಸರ್ಕಾರ ತೀವ್ರವಾಗಿ ವಿಚಾರ ಮಾಡ ಬೇಕಾಗಿದೆ. ಒಂದು ಕಡೆ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸ ಹೆಚ್ಚಿಗೆಯಾಗುತ್ತಿದ್ದರೆ ಇನ್ನೊಂದು ಕಡೆ ಕೆಟ್ಟು